START

MICROFILMED
BY
NATIONAL ARCHIVES
OF INDIA
NEW DELHI 1975

REEL NO

1

KARNATAKA STATE ARCHIVES

SRINIVASA RAO MANGALAVEDE COLLECTION

Old Newspapers

KANNADA NAVAJIVANA
Published from Bagalakote

KANNADIGA
Published from Bagalakote

KANNADIGA
Published from Dharawada

ಕರ್ನಾಟಕ ರಾಜ್ಯಪತ್ರಾಗಾರ

ಶ್ರೀನಿವಾಸರಾವ್ ಮಂಗಳವೇಢೆಕರಲಕ್ಷ್ಮಿನ

ರಳೆಯ ಕಾಲದ ವೃತ್ತ ಪತ್ರಿಕೆಗಳು

ಕನ್ನಡ ನಾಡಿನ

ಬಾಗಲಕೋಟೆಯಿಂದ ಪ್ರಕಟಿತ

ಕನ್ನಡಿಗ

ಬಾಗಲಕೋಟೆಯಿಂದ ಪ್ರಕಟಿತ

ಕನ್ನಡಿಗ

ಧಾರವಾಡದಿಂದ ಪ್ರಕಟಿತ

N O T E

The Karnataka State Archives is obliged to Sri Srinivasa Rao Mangalavede for granting it permission to take microfilm copies of old-time newspapers with him. The newspapers included in the present collection played an important part in India's freedom struggle. Sri Srinivasa Rao Mangalavede was himself, for the most part, the editor of Kannada Navajivana and Kannadiga published from Bagalakote, and he holds a high place among the freedom fighters of Karnataka. Kannadiga of Dharwar was edited by Sri Alur Venkata Rao, another great name among Karnataka's freedom fighters, and a mentor of Sri Mangalavede.

ವಿಜ್ಞಾಪನೆ

ಕರ್ನಾಟಕ ರಾಜ್ಯಪತ್ರಾಗಾರವು ಶ್ರೀಮಾನ್ ಶ್ರೀ ದಿವಾನ್ ರಾವ್ ಮಂಗಳ ವೇಡ್ಡೆಯವರಿಗೆ ತಮ್ಮಲ್ಲಿರುವ ಹಳೆಯ ಕಾಲದ ಮೈಸೂರು ಪತ್ರಿಕೆಗಳ ಫೋಟೋ ಪ್ರತಿಗಳನ್ನು ಮಾಡಿಸಿಕೊಳ್ಳಲು ಅನುಮತಿ ಕೊಟ್ಟಿದ್ದಕ್ಕಾಗಿ ಬಹಳ ಋಣಿಯಾಗಿದೆ. ಇಲ್ಲಿಯವರೆಗೆ ಸಿಕ್ಕಿರುವ ಪತ್ರಿಕೆಗಳಿಗೆ ಸಂಬಂಧಿಸಿದ್ದಂತೆ ಸಂಗ್ರಹಮಾಡಿರುವ ಪ್ರೋಗ್ರೆಸ್ ರಿಪೋರ್ಟನ್ನು ಇದರೊಂದಿಗೆ ಲಗತ್ತಿಸಿದೆ. ಶ್ರೀಮಾನ್ ಮಂಗಳ ವೇಡ್ಡೆಯವರು ಪತ್ರಿಕೆಗಳ ಫೋಟೋಗಳಿಗೆ ಕೊಡಬೇಕಾದ ಪ್ರತಿ ಚಿತ್ರವಾದ ಕನ್ನಡ ನವಜೀವನ ಮತ್ತು ಕನ್ನಡಿಗ ಪತ್ರಿಕೆಗಳನ್ನು ದಯಪಾಲಿಸಿದ್ದಾರೆ. ಉಳಿದವು ಬಹಳ ಪ್ರಯತ್ನದಿಂದ ಗ್ರಾಮ ವೀಕ್ಷಕರಲ್ಲಿ ಅಭ್ಯರ್ಥಿಸಿದ್ದೇವೆ. ಸಾಧ್ಯವಾದಷ್ಟು ಪ್ರತಿಚಿತ್ರವಾದ ಕನ್ನಡಿಗ ದಿನಪತ್ರಿಕೆಯನ್ನು ಸಂಪಾದಕರು ಈ ಊರು ವೇಂಕಟರಾಯರು. ಇವರು ಇಷ್ಟೇ ಯಶಸ್ವಿಗಳು. ಮಂಗಳ ವೇಡ್ಡೆಯವರಿಗೆ ಬಹಳ ಪ್ರಯತ್ನ ಪಟ್ಟದ್ದಕ್ಕಾಗಿ ಮಾರ್ಗದರ್ಶಿಗಳು.

C O N T E N T S

KANNADA NAVAJIVANA Weekly. Published from Bagalakote	24 Nov. 1921 to 23 Nov. 1922
KANNADIGA Daily. Published from Bagalakote	22 March 1930 to 26 July 1930 9 December 1930 to 17 March 1931 20 March to 16 April 1931
KANNADIGA Biweekly. Published from Bagalakote	2 April to 27 July 1930
KANNADIGA Weekly. Published from Bagalakote	25 March 1925 to 18 March 1928 23 Nov. 1930 to 1 March 1931
KANNADIGA Daily. Published from Dharwad	24 August to 24 Nov. 1933

ವಿಷಯಾನುಕ್ರಮಣಿಕೆ.

ಕನ್ನಡ ನವ ಜೀವನ ಪಾಂಡಿತ್ಯಕ್ಕೆ. ಬಾಗಲಕೋಟೆ ಯಿಂದ ಪ್ರಕಟಿತ.	೨೪-೧೧-೧೯೨೧ ರಿಂದ ೨೩-೧೧-೧೯೨೨
ಕನ್ನಡ ದಿನಪತ್ರಿಕೆ. ಬಾಗಲಕೋಟೆ ಯಿಂದ ಪ್ರಕಟಿತ.	೨೨-೩-೧೯೨೦ ರಿಂದ ೨೬-೩-೧೯೨೦ ೯-೧೨-೧೯೨೦ ರಿಂದ ೧೩-೩-೧೯೨೧ ೨೦-೩-೧೯೨೧ ರಿಂದ ೧೬-೪-೧೯೨೧
ಕನ್ನಡಿಗ ಪಾಂಡಿತ್ಯಕ್ಕೆ ಏರಡುನಲ. ಬಾಗಲ ಕೋಟೆಯಿಂದ ಪ್ರಕಟಿತ	೨-೪-೧೯೨೦ ರಿಂದ ೨೨-೩-೧೯೨೦
ಕನ್ನಡಿಗ ಪಾಂಡಿತ್ಯಕ್ಕೆ ಬಾಗಲಕೋಟೆ ಯಿಂದ ಪ್ರಕಟಿತ	೨೫-೩-೧೯೨೫ರಿಂದ ೧೮-೩-೧೯೨೬ ೨೩-೧೧-೧೯೨೦ ರಿಂದ ೧-೩-೧೯೨೧
ಕನ್ನಡಿಗ ದಿನಪತ್ರಿಕೆ. ಧಾರವಾಡದಿಂದ ಪ್ರಕಟಿತ.	೨೪-೮-೧೯೨೫ ರಿಂದ ೨೪-೧೧-೧೯೨೫

KANNADA NAVAJEEVANA

WEEKLY

YEAR. I. Nos. 1-52.

FROM 24-11-1921 TO 23-11-1922

ಕನ್ನಡ ನವಜೀವನ

ವಾರಪತ್ರಿಕೆ

ವರ್ಷ. I. ಸಂ. 1-52.

24-11-1921 ರಿಂದ 23-11-1922.

KANNADA NAVAJEEVANA

WEEKLY

YEAR. I. Nos. 1-52.

FROM 24-11-1921 TO 23-11-1922

ಕನ್ನಡ ನವಜೀವನ

ವಾರಪತ್ರಿಕೆ

ವರ್ಷ. I. ನಂ.೩೫. 1-52.

24-11-1921 ರಿಂದ 23-11-1922.

ಸತ್ಯವೆಂದರೇನು?

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಜಿತಿ ಸಂಚಿಕೆ ೦-೧-೩
ವಗಾದರು ಸಂಚಿಕೆ ಬೇಕಾದವರು
೦-೧-೬ ಕಿರ್ಪ ಕಳಿಸಬೇಕು.

ಶ್ರೀ.

ಜಾಹೀರಾತಿನ ದರಃ-

'ಕನ್ನಡ ನವಜೀವನ'ದ ಒಂದು ಕಾಲಮ್ಮಿಗೆ ಒಂದು ಇಂಚಿಗೆ ಪ್ರತಿಯೊಂದು ವಾರಕ್ಕೆ ೧ ರೂಪಾಯಿ ಕಾಯಂ ಜಾಹೀರಾತುಗಳ ಬಗ್ಗೆ ಸಮಾಲೋಚನೆ ಅಥವಾ ಪತ್ರವ್ಯವಹಾರವನ್ನು ಕಳಿಸಿಕೊಳ್ಳಬೇಕು.

ಕನ್ನಡ ನವಜೀವನ.

ಮಹಾತ್ಮಾ ಗಾಂಧಿಯವರ ಯಂಗ ಇಂಡಿಯಾ ' ನವಜೀವನ'ಗಳನ್ನು ಭಾಷಾಂತರಿಸುವವೇ
ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಕಾರ್ತಿಕ ಬಹುಳ ೧೫. ಶಕೆ ೧೮೪೩. ಗುರುವಾರ ತಾ. ೪ ನವಂಬರ ೧೯೨೧ ಇಸ್ವಿ. | ಸಂಚಿಕೆ ೧

ಆತ್ಮ ನಿವೇದನ.

ತಮ್ಮ ತಪಶ್ಚರ್ಯೆಯ ಬಲದಿಂದ ಒಂದೇ ವರ್ಷದಲ್ಲಿ ಅಖಂಡ ಹಿಂದುಸ್ಥಾನದ ಜನರೊಳಗೆ ಅದ್ವಿತೀಯವಾದ ಜಾಗ್ರತಿಯನ್ನುಂಟು ಮಾಡಿ, ಕುಗ್ಗಿ ಹೋದ ಮನುಷ್ಯನ ನೈತಿಕ ಮತ್ತೂ ಸಾತ್ವಿಕ ವೃತ್ತಿಗಳಲ್ಲಿ ಒಳ್ಳೇ ಕಳೆತುಂಬಿ, ತಮ್ಮ ಕ್ರಿಯಾ ಶಕ್ತಿಯ ಬಲದಿಂದ ಆರ್ಯ ಸಂಸ್ಕೃತಿಗೆ ಜಿವ್ವಳವಂತೆ, ಹಿಂದೀ ರಾಷ್ಟ್ರದಲ್ಲಿ ನವಜೀವನವನ್ನೇ ತುಂಬಿದ ಆ ಮಹಾತ್ಮಾ ಗಾಂಧಿಯವರ ಸಂದೇಶವನ್ನು ಅರಿತುಕೊಳ್ಳಲಿಕ್ಕೆ ಕನ್ನಡಿಗರು ಅತುರರಾದದ್ದು ಸ್ವಾಭಾವಿಕವೇ. ಕನ್ನಡಿಗರ ಈ ಸ್ವಾಭಾವಿಕವಾದ ಲವಲವಿಕೆಯನ್ನು ಪೂರ್ತಿಗೊಳಿಸುವದೇ 'ಕನ್ನಡ ನವಜೀವನ" ದ ಮುಖ್ಯೋದ್ದೇಶ. ಯಂಗ ಇಂಡಿಯಾ 'ನವಜೀವನ'ಗಳಲ್ಲಿ ಸ್ವತಃ ತಮ್ಮ ದಿವ್ಯ ಹಸ್ತದಿಂದಲೇ ಬರೆಯುತ್ತಿರುವ ಮಹಾತ್ಮರ ಉದಾತ್ತ ಲೇಖಗಳನ್ನು ನಾವು ಈ ಪತ್ರಿಕೆಯಲ್ಲಿ ಕನ್ನಡಿಸುತ್ತ ಹೋಗುವೆವು. ಒಸೆದು ಅತ್ತಿತ್ತ ಹೆಂಬಿ ಹೋದ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ತಿಳಿಯುವಂತೆ ಕಶ್ಯವಿದ್ದಷ್ಟು ಸರಳ, ಸುಲಭವೂ, ಸವಿಯೂ, ಆದ ಭಾಷಾ ಶೈಲಿಯನ್ನೇ ಕನ್ನಡ ನವಜೀವನದಲ್ಲಿ ಉಪಯೋಗಿಸುವಂತೆ ಯಾವಾಗಲೂ ನಾವು ಜಾಗೃತರಾಗಿರುವೆವು.

ಭರತ ಖಂಡದಲ್ಲಿ ಈಗ್ಗೆ ನಡೆಸಿದ ತಮ್ಮ ದಿಗ್ವಿಜಯದ ಫಲ ಕೆಲವು ಪ್ರಸಂಗಗಳಲ್ಲಿ ಮಹಾತ್ಮರು ಅತಿಶಯ ಮಹತ್ವದ ಭಾಷಣಗಳನ್ನು ಮಾಡುತ್ತಿರುವರು. ಸ್ಥಳಾನುಕೂಲತೆಯ ಪ್ರಕಾರ ಇಂಥ ಭಾಷಣಗಳನ್ನೂ ಈ ಪತ್ರಿಕೆಯಲ್ಲಿ ಪ್ರಕಾಶಿಸುವೆವು. ಇಂಗ್ಲೀಷ, ಗುಜರಾಥಿ, ಹಿಂದೀ ಮುಂತಾದ ನುತಿಗಳಲ್ಲಿಯೆ ವೃತ್ತ ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಬರುತ್ತಿರುವ ಮಹತ್ವದ ಲೇಖಗಳನ್ನೂ, ಅಖಂಡ ಕರ್ನಾಟಕಕ್ಕೆ ಸಂಬಂಧಿಸಿದ ವಿಶಿಷ್ಟ ಪ್ರಶ್ನೆಗಳನ್ನು ಚರ್ಚಿಸುವ ಸ್ವತಂತ್ರಲೇಖಗಳನ್ನೂ, ವರ್ತಮಾನ ಸಂಗ್ರಹವನ್ನೂ 'ಕನ್ನಡ ನವಜೀವನ'ದಲ್ಲಿ ಸೇರಿಸಬೇಕೆಂದು ನಮಗೆ ಅನೇಕ ಸೂಚನೆಗಳು ಬಂದಿವೆ. ಈ ಸೂಚನೆಗಳೆನೋ ಯೋಗ್ಯ ಆದರೆ ಮಹಾತ್ಮರ ಸಂದೇಶವನ್ನು ತಪ್ಪದೇ ಪ್ರಕಟಿಸಿ, ಪುನಃ ಮೇಲಿನ ಸೂಚನೆಗಳಿಗೆ ಸ್ಥಳ ಕಾದಿಡಬೇಕಾದರೆ, ಈ ಪತ್ರಿಕೆಯ ಪುಟ ಸಂಖ್ಯೆ ಹೆಚ್ಚಿಸಲೇ ಬೇಕಾಗುವದು. ವರ್ಷಕ್ಕೆ ಚಂದಾದಾರರು ನಮಗೆ ಸಲ್ಲಿಸುವ ನಾಲ್ಕು ರೂಪಾಯಿಗಳಲ್ಲಿ ಪುಟಗಳನ್ನು ಹೆಚ್ಚಿಸುವದೂ ಅಶಕ್ಯ. ಅತ್ತ ಚಂದಾ ಹಣವನ್ನು ಎರಿಸುವದೂ ಅಶಕ್ಯ. ಆದ್ದರಿಂದ ಸದ್ಯಕ್ಕೆ ಈ ಸೂಚನೆಗಳನ್ನು ಬದಿಗಿರಿಸಬೇಕಾಗಿದೆ. ಆದರೆ ಕನ್ನಡಿಗರ ಆಕ್ರಯವು ಜನ್ಮಾಗಿ ದೊರೆತು, ಚಂದಾದಾರರ ಸಂಖ್ಯೆಯು ವಿಶೇಷವಾಗಿ ಬೆಳೆದರೆ ಮಾತ್ರ ಮೇಲಿನ ಸೂಚನೆಗಳನ್ನು ನಾವು ಅವಶ್ಯವಾಗಿ ಸ್ವೀಕರಿಸಿ, ನಾಲ್ಕೇ ರೂಪಾಯಿಗಳಲ್ಲಿ ಹೆಚ್ಚಿಗೆ ಪುಟಗಳನ್ನು ಸೇರಿಸುವೆವು.

ಇನ್ನು, ಗುಜರಾಥಿ 'ನವಜೀವನ'ವು ಇಲ್ಲಿಗೆ ಮುಂಗಳವಾರ ಬರುತ್ತದೆ. ಬುಧವಾರ ಒಂದು ದಿನ ಬಿಟ್ಟು ಪ್ರತಿ ಗುರುವಾರ ವ್ಯಾತೀಕಾಲದಲ್ಲಿಯೇ ನಾವೆ ಕನ್ನಡ ನವಜೀವನ ಹೊರಡುವಂತೆ ವ್ಯವಸ್ಥೆ ಮಾಡಿದ್ದೇವೆ. ಅಹಮ್ಮದಾಬಾದಿಂದ ತಾಳೆ (ಪ್ರೂಫ್) ಕಾಗದಗಳನ್ನೇ ತರಿಸಿಕೊಂಡು ಇದಕ್ಕೂ ಮುಂಚೆ ಪ್ರತಿವಾರ ಪ್ರಸಿದ್ಧಿಸಬೇಕೆಂದು ಯತ್ನ ಬಿಟ್ಟೆವು. ಆದರೆ ಅದು ಸಾಧ್ಯವಾಗಲಿಲ್ಲ.

ಹಲವು ಗ್ರಹ ಕೃತ್ಯದ ಅಡಚಣಿಯಿಂ, ಮೊಲಕ ನಮ್ಮ ಮಿತ್ರರಾದ ಶ್ರೀ. ಹುಣಸಮಂತರಾವ ದೇಸಾಯಿ (ಹುನಗುಂದ) ಇವರು ಈಗ್ಗೆ ನಮಗೆ ಸಹಾಯ ಮಾಡಲು ಬರುವಂತಿಲ್ಲ. ಆದರೆ ಮುಂದೆ ಒಂದು ದಿನ ಅವರು ಬಂದು ನಮ್ಮನ್ನು ಕೂಡಿಕೊಳ್ಳುವದೇನೋ ನಿಜ ಸಧ್ಯಕ್ಕೆ ನಾ ಹೊಬ್ಬರೇ ಈ ಕಾರ್ಯದಲ್ಲಿ ಛೇಗೆ ತೊಡಕಿಕೊಳ್ಳಬೇಕೆಂಬ ವಿಚಾರ ಬಿಟ್ಟಿರಲು ಇಲ್ಲಿಯ ನನ್ನ ಒಬ್ಬಿಬ್ಬ ಮಿತ್ರರು ಮುಂದೊದ್ದು ಬಂದು ಸಹಾಯ ಮಾಡಲಿಕ್ಕೆ ಟೊಂಕ ಕಟ್ಟಿದ್ದರಿಂದಲೂ, ಆ ಪಂಢರೀಶನ ಕೃಪೆಯಿಂದ ಮೊದಲಿಗೆ ಪ್ರಸಿದ್ಧ ಬಡಿಸಿದಂತೆ ಮುನ್ನೂರು ಜನರ ಸಹಾಯವು ಸಿಕ್ಕಿದ್ದರಿಂದಲೂ, ಈ ಕಾರ್ಯದಲ್ಲಿ ತೊಡಕಿ ಕೊಂಡೆವು. ಇನ್ನು ಮುಂದೆ ಈ ಕಾರ್ಯದಲ್ಲಿ ನನಗೆ ಯಶಸ್ಸನ್ನು ಕೊಡುವದು ಆ ಜಗದೀಶನಾದ ಪಾಂಡುರಂಗನನ್ನೇ ಕೂಡಿದೆ. ಇತಿ.

ಕನ್ನಡಿಗರ ಮುದ್ದು ಆಳು ಮಗನಾಡ

ಶ್ರೀನಿವಾಸ ರಾಜೇರಾವ
ಮಂಗಳವೇಡ.

ಟಪ್ಪಣಿಗಳು-

ನನ್ನ ಅಸಂಬದ್ಧತೆ.

ಓರ್ವ ಸುದ್ದಿಗಾರನು ಈಗಿನ ಕಾಲಕ್ಕೆ ಚನ್ನಾಗಿ ಒಪ್ಪುವಂಥ ಕೆಲವು ಪ್ರಶ್ನೆಗಳನ್ನು ಕೇಳಿದ್ದಾನೆ. ಕೆಳಗೆ ಕಾಣಿಸಿದಂತೆ ಒಟ್ಟೇ ಕಟು ವೈಲಿಯಲ್ಲಿ ಅವು ಬರೆಯಲ್ಪಟ್ಟಿವೆ—

ತಮ್ಮ ರಾಜ್ಯವನ್ನು ಸೆಳೆದುಕೊಂಡ ಇಂಗ್ಲೀಷರ ವಿರುದ್ಧ ಸ್ವಾತಂತ್ರ್ಯ ಸಂಪಾದನೆಗಾಗಿ ಝುಲು ಜನರು ಯುದ್ಧ ಮಾಡಿದಾಗ್ಗೆ, ದಂಗೆಯೆಂಬ ಪೆಸರನ್ನಿಟ್ಟ ಆ ಯುದ್ಧವನ್ನು ಮುರಿಬಡಿಯಲಿಕ್ಕೆ ನೀವು ಇಂಗ್ಲೀಷರಿಗೆ ಸಹಾಯ ಮಾಡಿದಿರಿ ಪರರಾಜರ ಬಂಧನವನ್ನು ಕಿತ್ತಿಪಾಕಲಿಕ್ಕೆ ಪ್ರಯತ್ನಿಸುವದು ದಂಗೆಯೊ? ಜೀನ ಡಿ-ಅರ್ಕನು ದಂಗೆಗಾರನಿದ್ದನೊ? ಜಿಜಾರ್ಜ ವಾಶಿಂಗಟನ್ನನು ದಂಗೆಗಾರ ನಿದ್ದನೊ? ಡಿ ಹೆಲೆರಾನು ದಂಗೆಗಾರನಿರುವನೊ? ಝುಲು ಜನರು ಹಿಂಸೆಯುಕ್ತ ಮಾರ್ಗವನ್ನು ಹಿಡಿದಿದ್ದರೆಂದು ನೀವು ಅನ್ನಬಹುದು. ಹಾಗಾದರೆ ಅವಾಗ್ಗೆ ಅವರ ದಂಗೆಯ ಪರಿಣಾಮನೇ ಕಾಡಾಯಿತೊ ಅಥವಾ ಅವರ ಮಾರ್ಗವೇ ಕಾಡಾಗಿದ್ದಿತೊ? ಕದಾಚಿತ್ ಮಾರ್ಗವು ಕಾಡಾಗಿರಬಹುದು; ಆದರೆ ಪರಿಣಾಮವು ಮಾತ್ರ ಖಂಡಿತವಾಗಿಯೂ ಪಾಗೆ ಆಗಲಿಲ್ಲ. ಆದ್ದರಿಂದ ಇದರಲ್ಲಿ ಗರ್ಭಿತವಾದ ಒಗಟನ್ನು ತಾವು ದಯಮಾಡಿ ಬಿಚ್ಚಿ ಹೇಳಬೇಕು. ಜಗತ್ತಿನ ರಾಷ್ಟ್ರಗಳೆಲ್ಲ ಒಟ್ಟುಗೂಡಿದಾಗ್ಗೆ ಆವರ ವಿರುದ್ಧ ಆ ಕೂರ ಜರ್ಮನ ಮತ್ತು ಆಸ್ಟ್ರಿಯಾ ಜನರು ವೀರತನದಿಂದ ಮೊನ್ನಿನ ಯುದ್ಧದಲ್ಲಿ ಕಾದಾಡುತ್ತಿರುವಾಗ್ಗೆ, ಯಾವ ರೀತಿಯಿಂದಲೂ ಹಿಂದುಸ್ಥಾನಕ್ಕೆ ಆವರು ಕೇಡು ಬಗೆಯದಿದ್ದರೂ, ಆ ರಾಷ್ಟ್ರಗಳ ವಿರುದ್ಧ ನೀವು ಇಂಗ್ಲೀಷರಿಗೆ ಸಹಾಯ ಮಾಡಿದಿರಿ. ಯಾವದೇ ಎರಡು ಜನಾಂಗಗಳ ನಡುವೆ ಯುದ್ಧವುಂಟಾದಾಗ್ಗೆ ಅವರಲ್ಲಿ ಅನ್ಯಾಯ ಅಥವಾ, ನ್ಯಾಯ ಯಾರ ಕಡೆಗಿರುವದನ್ನು ಕಂಡು ಹಿಡಿಯ ಬೇಕಾಗಿದ್ದರೆ ಮೊಟ್ಟ ಮೊದಲು ಎರಡೂ ಪಕ್ಷದವರನ್ನು ಕೇಳಿ ಕೊಳ್ಳಬೇಕು. ಮೊನ್ನಿನ ಯುದ್ಧದಲ್ಲಿ ಒಂದೇ ರಾಷ್ಟ್ರದವರ (ಇಂಗ್ಲಿಷ) ಕಾರಣಗಳು ನಮ್ಮಮುಂದೆ ಇಡಲ್ಪಟ್ಟವು; ಸತ್ಯ ಅಥವಾ ಪ್ರಾಮಾಣಿಕತನ ಇವುಗಳ ಬಗ್ಗೆ ಆ ರಾಷ್ಟ್ರದವರೂ ಎಂದೂ ಪೆಸರಾಗಿಲ್ಲ, ಸತ್ಯಾಗ್ರಹ ಮತ್ತೂ ಅಹಿಂಸಾಗಳ ಪಕ್ಷವನ್ನು ನೀವು ಯಾವಾಗಲೂ ಸಮರ್ಥಿಸುತ್ತಿರುವಿರಿ. ಅಂದಮೇಲೆ ಯಾವ ಯುದ್ಧದ ಪಾತ್ರಾಪಾತ್ರತೆಯನ್ನು ಜನರು ಚನ್ನಾಗಿ ಅರಿತಿಪ್ಪಿಲ್ಲವೋ ಅಂಥ ಯುದ್ಧಕ್ಕೆ ಸಹಾಯ ಮಾಡಲು ನೀವು ಜನರನ್ನು ಒಲಿಸಲಿಕ್ಕೆ ಯಾಕೆ ಪ್ರಯತ್ನ ಬಟ್ಟಿರಿ? ಮತ್ತೂ ಬ್ರಿಟಿಶ ಸಾಮ್ರಾಜ್ಯವೆಂಬ ಹಂಬಲದ ಹುದಲಿನಲ್ಲಿ ಕಂಗಾಲ ಸ್ಥಿತಿಯಿರ್ದ ಜೊರಳಾಡುತ್ತ ಬಿದ್ದಿರುವ ಇಂಗ್ಲೀಸ ಜನಾಂಗದ ಸ್ವಾರ್ಥ ಬುದ್ಧಿಯುಳ್ಳ ಏಳಿಗೆಗಾಗಿ ನೀವು ಯತ್ನ ಬಟ್ಟಿ ಕಾರಣವೇನು? ಬ್ರಿಟಿಶ್ ನೌಕರಶಾಹಿಯಲ್ಲಿ ಆಗ್ಗೆ ವಿಶ್ವಾಸವಿತ್ತೆಂದು ನೀವು ಅನ್ನ ಬಹುದು. ಚನ್ನಾಗಿ ಸಮಗೆ ಕಾಣುವಂತೆ ತಮ್ಮ ವಚನಗಳನ್ನು ತಾವೇ ಭಂಗ ಮಾಡುವಂಥ ಕೃತಿಗಳೇ ಯಾವ ಪರಕೀಯ ಜನರಲ್ಲಿ ಉಂಟೋ ಅಂಥ ಪರಕೀಯರಲ್ಲಿ ನಂಬಿಗೆಯನ್ನಿಡುವದು ಯಾವ ಮನುಸ್ಯನಿಗಾದರೂ ಕಕ್ಯವಿದೆಯೋ? ಇಮ್ಮಂಥ ಕರ್ಮಯೋಗಿಗಳು ಹೀಗೆ ಮಾಡುವದಂತೂ ಎಂದಿಗೂ ಶಕ್ಯವಿಲ್ಲ ಅದ್ದರಿಂದ ಈ ಎರಡನೇ ಒಗಟಿನ್ನೂ ತಾವು ದಯವಿಟ್ಟು ಬಿಡಿಸಬೇಕು.

ಇನ್ನೊಂದು ವಿಷಯ ನೀವು ಅಹಿಂಸಾ ಧರ್ಮವನ್ನು ಪ್ರತಿಪಾದಿಸುವವರು. ಸಧ್ಯಕ್ಕೆ ನಾವು ಅಹಿಂಸಾ ಧರ್ಮಿಗಳಾಗಿರುವದು ಯೋಗ್ಯ. ಹಿಂದುಸ್ಥಾನವು ಸ್ವತಂತ್ರವಾದ ಮೇಲೆ ಪರರಾಷ್ಟ್ರವರು ನಮ್ಮ ಮೇಲೆ ದಾಳಿಯಿಟ್ಟರೂ ಕೂಡ ನಾವು ಶಸ್ತ್ರಗಳನ್ನೆ ಸರ್ವದಾ ಧರಿಸಬಾರದೆ? ನಮ್ಮ ದೇಶದಲ್ಲಿ ಹುಟ್ಟುವ ಪದಾರ್ಥಗಳನ್ನು ಸೆಳೆದೊಯ್ಯುವ ಕ್ರಮವನ್ನು ನಿಲ್ಲಿಸಿದ ಮೇಲೆ ಸಹೇಬ್ಲೆ, ತಂತಿ, ಉಗೆ ಬಂಡಿಗಳ ಮೇಲೆ ನಾವು ಬಹಿಷ್ಕಾರ ಹಾಕಬೇಕೋ?

ಅಸಂಬದ್ಧ ಕೃತಿಗಳು ಅನೇಕವಾಗಿವೆಯೆಂದು ಜನರು ನನ್ನನ್ನು ದೂಷಿಸುತ್ತಾರೆ. ನನ್ನ ಹೊರತು ಮಿಕ್ಕವರಿಗೆ ಇದರಿಂದ ತೊಂದರೆ ಯಾಗುವದಿಲ್ಲವಾದ್ದರಿಂದ ನಾನು ಆ ತರದ ಪ್ರಶ್ನೆಗಳಿಗೆ ಉತ್ತರ ಕೊಡುವದಿಲ್ಲ. ಆದರೆ ಮೇಲಿನ ಪ್ರಶ್ನೆಗಳಿಗೆ ಸಾರ್ವಜನಿಕ ಮಹತ್ವವಿರುವದರಿಂದ ನಾನು ಉತ್ತರ ಕೊಡುವೆನು. ಈ ಪ್ರಶ್ನೆಗಳು ನನಗೇನೆ ಹೊಸವಲ್ಲ ಆದರೆ ಯಂಗ ಇಂಡಿಯಾದ ಪುಟಗಳಲ್ಲಿ ಅವಕ್ಕೆ ನಾನು ಉತ್ತರ ಕೊಟ್ಟಂತೆ ಕಾಣುವದಿಲ್ಲ.

ನಾನು ಯುದ್ಧದಲ್ಲಿ ಯಾಕೆ ಸಹಾಯ ಮಾಡಿದೆ?

ಝುಲು ಜನರ ಬಂಡಿನ ಕಾಲದಲ್ಲಿ ಸ್ವಯಂಸ್ಫೂರ್ತಿಯಿಂದ ನಾನೇ ಇಂಗ್ಲೀಸರ ಸೇವೆಯಲ್ಲಿ ಸೇರಿಕೊಂಡೆನು; ಅಲ್ಲದೇ ಅನಕ್ಕೂ ಮೂರ್ವದಲ್ಲಿಯ ಬೋರ ಯುದ್ಧದ ಕಾಲದಲ್ಲಿಯೂ ಪಾಗ ಮಾಡಿದ್ದೆನು ಮತ್ತೂ ಮೊನ್ನಿನ ಯುದ್ಧದ ಸಮಯದಲ್ಲಿ ಹಿಂದುಸ್ಥಾನದೊಳಗ ದಂಡಾಳುಗಳನ್ನು ಕಲ ಹಾಕಿ ಕೊಟ್ಟನೆಂಬದಿದ್ದೇ ಅಲ್ಲದೇ, ೧೯೧೪ ರಲ್ಲಿ ಲಂಡನ ಪಟ್ಟಣದೊಳಗ ರಣರಂಗದಲ್ಲಿ ಬೇಕಾಗುವ ಔಸಧಾಲಯದ ಒಂದು ಪಥಕವನ್ನೂ ಎರ್ಪಡಿಸಿದ್ದನು. ಆದ್ದರಿಂದ, ನನ್ನ ಪಾಪ ಕರ್ಮದ ಕುಂಡವು ಸಂಪೂರ್ಣವಾಗಿ ತುಂಬಿ ಹೋಗಿದೆ. ಸರಕಾರಕ್ಕೆ ಸಹಾಯವನ್ನು ಮಾಡುವ ಯಾವ ಪ್ರಸಂಗವನ್ನೂ ನಾನೇ ಕಳೆದು ಕೊಂಡಿಲ್ಲ. ಅಂಥ ಸಂಕಟ ಪ್ರಸಂಗಗಳಲ್ಲೆಲ್ಲ ಎರಡೇ ಪ್ರಶ್ನೆಗಳು ನನ್ನ ಕಣ್ಣೆದುರಿಗೆ ಕಟ್ಟುತ್ತಿದ್ದವು. ಅವು ಯಾವವೆಂದರೆ ನಾನು ಬ್ರಿಟಿಶ್ ಸಾಮ್ರಾಜ್ಯದ ನಾಗರಿಕನೆಂದು ತಿಳಿದು ಕೊಂಡದ್ದರಿಂದ ಈ ನಾಗರಿಕತೆಯ ದೃಷ್ಟಿಯಿಂದ ನನ್ನ ಕರ್ತವ್ಯವೇನು? ಮತ್ತು ಅಹಿಂಸಾ ಧರ್ಮದಲ್ಲಿ ಸಂಪೂರ್ಣ ವಿಶ್ವಾಸವುಳ್ಳವನಾದ್ದರಿಂದ ಈ ದೃಷ್ಟಿಯಿಂದ ನಾನು ಮಾಡತಕ್ಕ ಕರ್ತವ್ಯವೇನು?

ಬ್ರಿಟಿಶ ಸಾಮ್ರಾಜ್ಯದ ನಾಗರಿಕನೆಂದು ತಿಳಿದುಕೊಂಡದ್ದೇ ಮೊದಲಿಗೆ ತಪ್ಪೆಂಬುದನ್ನು ನಾನು ಈಗ್ಗೆ ಮನಗಂಡಿದ್ದೇನೆ. ನನ್ನ ಮಾತೃಭೂಮಿಯು ಆಗ್ಗೆ ದೌರ್ಬಲ್ಯದ ಸೊತ್ತಿನಿಂದ ಹಿಂಡಿ ಹಿಚಿಕಲ್ಪಟ್ಟಿದ್ದರೂ, ನಿಜವಾಗಿ ಸ್ವಾತಂತ್ರ್ಯದ ಕಡೆಗೇ ಅದರ ಗಮನವಿರುವದೆಂದೂ, ಒಟ್ಟಿನ ಮೇಲೆ ನೋಡಲು ಸಾಮಾನ್ಯ ಜನರ ದೃಷ್ಟಿಯಿಂದ ಸರಕಾರವು ಅಷ್ಟು ದುರಾಚಾರ ವೃತ್ತಿಯುಳ್ಳದ್ದಾಗಿಲ್ಲೆಂದೂ ನಡುಗಡ್ಡೆಯಲ್ಲಿರುವವರೂ ದಟ್ಟಾದವನಸಹತಿಯುಳ್ಳವರೂ ಆಗಿದ್ದರು ಕೂಡ ಬ್ರಿಟಿಶ ಅಧಿಕಾರಿಗಳು ನ್ಯಾಯಾಣಿಕರಿರುವರೆಂದು ಆ ನಾಲ್ಕೂ ಪ್ರಸಂಗಗಳಲ್ಲಿ ನಾನು ಪ್ರಾಮಾಣಿಕತನದಿಂದ ನಂಬಿದ್ದೆ. ಈ ಪ್ರಕಾರ ವಿಚಾರಗಳಿದ್ದದರಿಂದ, ಆ ಪ್ರಸಂಗಗಳ

ಲ್ಲಿ ಸರ್ವೇ ಸಾಧಾರಣ ಪೌರ ಇಂಗ್ಲೀಷನು ನ-ಸ್ಯನು ಹೇಗೆ ವರ್ತಿಸತಕ್ಕದ್ದೋ ಹಾಗೆ ನಾನು ವರ್ತಿಸಹತ್ತಿದೆ. ಸ್ವತಂತ್ರ ರೀತಿಯಿಂದ ಯಾವದು ಶಾಸ್ತ್ರವನ್ನು ಕೈಕೊಳ್ಳುವಷ್ಟು ಜಾಣತನವಾಗಲೆ, ನುಹತ್ತವಾಗಲಿ ಆ ಕಾಲಕ್ಕೆ ನನ್ನಲ್ಲಿರಲಿಲ್ಲ. ಗಾಂಭೀರ್ಯವುಳ್ಳ ನ್ಯಾಯಸಭೆಯಂತೆ ಮಂತ್ರಿವರ್ಯರಿಂದ ಗೊತ್ತು ಪಡಿಸಲ್ಪಟ್ಟ ನಿರ್ಣಯಗಳನ್ನು ಪರೀಕ್ಷಿಸುವದಾಗಲಿ ಸೂಕ್ಷ್ಮದೃಷ್ಟಿಯಿಂದ ಅವುಗಳನ್ನು ಪರಿಶೋಧಿಸುವದಾಗಲಿ ಆಗ ನನ್ನಿಂದ ಕೆಲಸವಾಗಿರಲಿಲ್ಲ. ಜೋರಾದ ಯುದ್ಧ, ಝುಲು ಜನರ ಬಂಡು ಅಥವಾ ಬೋಸ್ನಿಯ ಯುದ್ಧ ಈ ಸಮಯಗಳಲ್ಲಿ ಆ ಮಂತ್ರಿಗಳು ದುಷ್ಟ ಬುದ್ಧಿ ಪ್ರೇರಿತರಾಗಿದ್ದರೆಂದು ನಾನೇನು ಎಣಿಸಲಿಲ್ಲ. ಇಂಗ್ಲೀಷ ಜನರೇ ನುಸ್ಸರು, ಅಥವಾ ಬೇರೆ ದೇಶದ ಮಾನವೀ ವ್ಯಾಪಾರಗಳಿಗಿಂತ ಇವರು ಹೆಜ್ಜೆಗೇ ದುಸ್ಟರೆಂದು ನಾನು ಆವಾಗ್ಗೆ ತಿಳಿದಿದ್ದಿಲ್ಲ, ಮತ್ತು ಈಗ್ಯೂ ಹಾಗೆ ತಿಳಿದಿಲ್ಲ ಬೇರೆ ಜನರಂತೆಯೇ ಉದಾತ್ತ ಉದ್ದೇಶ ಮತ್ತು ಕೃತಿಗಳಿಂದ ಪ್ರೇರಿತರಾಗುವ ಶಕ್ತಿಯೂ, ಮತ್ತು ಅಷ್ಟೇ ಪ್ರಕಾರದ ತಪ್ಪು ತಡೆಗಳಲ್ಲಿ ಬೀಳುವ ಶಕ್ತಿಯೂ ಇಂಗ್ಲೀಷ ಜನರಲ್ಲಿ ಇತ್ತೆಂದೂ ಸದ್ಯಕ್ಕೂ ಅವೆಯೆಂದೂ ನಾನು ತಿಳಿಯುತ್ತೇನೆ ಆದರಿಂದ, ಸಾಮ್ರಾಜ್ಯಕ್ಕೆ ಸಂಕಟ ಬಂದೊದಗಿದಾಗ್ಗೆ ಸಂಕಟವು ಸ್ಥಾನಿಕ ಮಹತ್ವದ್ದೇ ಇರಲಿ ಅಥವಾ ಸರ್ವ ವ್ಯಾಪ್ತವಾಗಿರಲಿ ಮಾನವೀ ಪುರುಷ ಮತ್ತು ನಾಗರಿಕ ಈ ದೃಷ್ಟಿಯಿಂದ ಆ ಸಾಮ್ರಾಜ್ಯಕ್ಕೆ ನನ್ನ ನಮ್ರವಾದ ಸೇವೆಯನ್ನರ್ಪಿಸುವದು ಕರ್ತವ್ಯವೆಂದು ಬಗೆದು ಆ ಪ್ರಕಾರ ಸಿಕ್ಕಷ್ಟು ನನ್ನ ಕರ್ತವ್ಯ ಮಾಡಿದ್ದೇನೆಂದು ನನಗೆ ಭಾವನೆಯಾಗಿದೆ. ಸ್ವರಾಜ್ಯ ದೊರೆತ ಮೇಲೆ ತನ್ನ ರಾಷ್ಟ್ರದ ದಕೆಯಿಂದ ಪ್ರತಿಯೊಬ್ಬ ಹಿಂದೀ ಮನುಷ್ಯನು ಇದೇ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ನನ್ನ ಅಪೇಕ್ಷೆಯದೆ. ಮುಂದೆ ಕೂಡತಕ್ಕ ರಾಷ್ಟ್ರೀಯ ಸ್ವರಾಜ್ಯ ಮಂಡಲದ ಪ್ರತಿಯೊಂದು ಕೃತಿಯನ್ನು ಬಹು ಸೂಕ್ಷ್ಮವಾದ ತಕ್ಕಡಿಯಲ್ಲಿ ತೂಗುತ್ತ ಹೋಗಿ, ಪ್ರತಿಯೊಂದು ಪ್ರಸಂಗದಲ್ಲಿ ಪ್ರತಿಯೊಬ್ಬ ಮನುಷ್ಯನು ಕಾಯದೆ ಕಾನೂನುಗಳನ್ನು ತನ್ನ ಕೈಯಲ್ಲಿಯೇ ತೆಗೆದುಕೊಳ್ಳುತ್ತ ಹೋದರೆ ಅವರಿಂದ ನಾನು ಖಂಡಿತವಾಗಿ ವ್ಯಥೆ ಬಡಬೇಕಾಗುವದು ನಾನು ನನ್ನ ನಿರ್ಣಯಗಳನ್ನು ರಾಷ್ಟ್ರೀಯ ಪ್ರತಿನಿಧಿಗಳ ಕೈಯಲ್ಲಿಯೇ ಇಡುವೆನು; ಆದರೆ ಇಂಥ ಪ್ರತಿನಿಧಿಗಳನ್ನು ಆರಿಸುವಾಗ್ಗೆ ನಾತ್ರ ಬಹು ಜಾಗರೂಕನಾಗುವೆನು. ಹೀಗೆ ಮಾಡದಿದ್ದರೆ ಅನ್ಯಾಯ ಮಾರ್ಗದಿಂದಲೂ ಪ್ರಜಾಸತ್ತಾತ್ಮಕ ರಾಜ್ಯವು ಒಂದು ವಿನಾಶದ ಮಟ್ಟಿಗಾದರೂ ನಿಲ್ಲಲಾಸದೆಂದು ನನಗೆ ಗೊತ್ತಿದೆ.

ನನ್ನ ಮಟ್ಟಿಗೆ, ಎಲ್ಲ ಪರಿಸ್ಥಿತಿಯೂ ಈಗ್ಗೆ ಬದಲಿಸಿ ಹೋಗಿದೆ ನನ್ನ ಕಣ್ಣುಗಳು ಈಗ ಮಾತ್ರ ತೆರೆಯಲ್ಪಟ್ಟಿವೆಯೆಂದು ಭಾಸವಾಗಿದೆ. ಸ್ವಾನುಭವದಿಂದ ಹೆಚ್ಚಿಗೇ ಜಾಣನಾಗಿದ್ದೇನೆ. ನಮ್ಮಲ್ಲಿ ರೂಢವಾಗಿದ್ದ ರಾಜ್ಯ ಪದ್ಧತಿಯು ತೀರ ನಿಂದಿತವಾಗಿದೆಯೆಂದೂ, ಅದನ್ನು ತಿದ್ದಲಿಕ್ಕೆ ಅಥವಾ ಒದ್ದು ಮುರಿದು ಹಾಕಲಿಕ್ಕೆ ವಿಶೇಷವಾದ ರಾಷ್ಟ್ರೀಯ ಪ್ರಯತ್ನವನ್ನು ಮಾಡಿಯೇ ತೀರಬೇಕೆಂದೂ ಎಣಿಸುತ್ತೇನೆ. ತನ್ನನ್ನು ತಾನೇ ತಿದ್ದಿ ಕೊಳ್ಳುವ ಬಲವು ಆ ಪದ್ಧತಿಯ ಅಂತರಂಗದಲ್ಲಿ ಇಲ್ಲವೇ ಇಲ್ಲ. ಅನೇಕ ಇಂಗ್ಲೀಷ ಅಧಿಕಾರಿಗಳು ಪ್ರಾಮಾಣಿಕರಿದ್ದಾರೆನ್ನುವ ಸಂಗತಿಯಲ್ಲಿ ನನ್ನ ವಿಶ್ವಾಸವಿದ್ದರೂ, ಅದರಿಂದ ನನಗೆ ಎನೂ ಸಹಾಯವಾಗದು; ಯಾಕಂದರೆ ಸ್ವತಃ ನಾನೇ ಹಿಂದಕ್ಕೆ ಇದ್ದಂತೆ, ಈ ಜನರು ಕುರುಡರೂ ಮರುಳರೂ ಆಗಿದ್ದಾರೆಂದು ನನ್ನ ತಿಳುವಳಿಕೆ. ಆದ್ದರಿಂದ ಸಾಮ್ರಾಜ್ಯವು ನನ್ನದು ಅಥವಾ ನಾನು ಸಾಮ್ರಾಜ್ಯದ ನಾಗರೀಕನು ಎಂಬದರಲ್ಲಿ ಎನೂ ಅಭಿಮಾನವನ್ನು ಹಿಡಿಯಲಾರೆ. ಇಷ್ಟೇ ಅಲ್ಲ; ಸಾಮ್ರಾಜ್ಯದಲ್ಲಿ ಹೊಲೆಯನಂತೆ ಅಸ್ಪೃಶ್ಯನಾಗಿರುವೆನೆಂಬದನ್ನು ಜೀವನ್ನಾಗಿ ಅರಿತುಕೊಂಡಿರುವೆನು. ಆದ್ದರಿಂದ ಆ ಸಾಮ್ರಾಜ್ಯವು ಬುಡ ಮೆಟ್ಟಿನಿಂದ ಪುನಃ ನಿರ್ಮಾಣವಾಗಬೇಕು; ಇಲ್ಲವೆ ಅದು ಪರಿ ಪೂರ್ಣವಾಗಿ ಧ್ವಂಸವಾಗಬೇಕೆಂದು ನಾನು ಯಾವಾಗಲೂ ವ್ಯಾಖ್ಯಿಸುತ್ತೇನೆ; ಮತ್ತೂ ಹಿಂದೂ ಧರ್ಮ ಅಥವಾ ಹಿಂದೂ ಸಮಾಜವು ಹೀಗೆಯೇ ಆಗಬೇಕೆಂದು ಹಿಳ್ಳೆ ಹಿಂದೂ ಹೊಲೆಯನು ಬೇಡಿಕೊಂಡರೆ ಅದು ಹೇಗೆ ತಪ್ಪಲ್ಲವೋ ಹಾಗೆಯೇ ನಾನೂ ತಪ್ಪಿನಲ್ಲಿಲ್ಲ ಎಂಬದು ನಿಶ್ಚಯ.

ಇನ್ನು ಎರಡನೇ ವಿಷಯವಾದ ಅಹಿಂಸೆಯು ಇದಕ್ಕೂ ಹೆಚ್ಚಿಗೇ ಗೂಢವಾಗಿದೆ. ಸಾಧಾರಣತಃ ನಾನು ಕೈಯಲ್ಲಿ ತೆಗೆದುಕೊಂಡ ಪ್ರತಿಯೊಂದು ಕಾರ್ಯವನ್ನು ಬಿಟ್ಟು ಬಿಡಬೇಕೆಂದು ಅಹಿಂಸೆಯ ಬಗ್ಗೆ ನನ್ನಲ್ಲಿದ್ದ ವಿಚಾರಗಳು ಯಾವಾಗಲೂ ನನ್ನನ್ನು ಪ್ರೇರಿಸುತ್ತವೆ. ಅನ್ಯಾಯ ಅಥವಾ ದುರ್ದಶ ಪ್ರಸಂಗವನ್ನು ಕಣ್ಣಾರೆ ಕಂಡು, ಅದರ ನಿವಾರಣೆಗಾಗಿ ಎನೂ ಪ್ರಯತ್ನ ಮಾಡದೇ ಸುಮ್ಮನೇ ಕುಳಿತುಕೊಂಡರೆ, ನನ್ನ ಆತ್ಮವು ಎಂದಿಗೂ ಸಮಾಧಾನ ಹೊಂದದು. ನಾನು ಕಣ್ಣಿನಿಂದ ನೋಡುತ್ತಿದ್ದಂಥ ಎಲ್ಲ ಅನ್ಯಾಯಗಳ ದೋಷದಿಂದ ನಿರ್ಮುಕ್ತನಾಗುವದು, ಅಥವಾ ಪ್ರತಿಯೊಂದು ಅನ್ಯಾಯವನ್ನು ದೂರ ಮಾಡುವದು, ನನ್ನಂಥ ಸಿಬ್ಬಲ, ನಶ್ವರ, ಮತ್ತೂ ಮಂದಭಾಗ್ಯ ವ್ಯಾಪ್ತಿಗೆ ಅಶಕ್ಯವಾದ ಮಾತು ನನ್ನ ದೇಹದೊಳಗಿನ ಆತ್ಮವು ನನ್ನನ್ನು ಒಂದು ಕಡೆಗೆ ಜಗ್ಗಿದರೆ, ಅದೇ ಹೊತ್ತಿನಲ್ಲಿ ಅದೇ ದೇಹದೊಳಗೇ ಇದ್ದ ಇಂದ್ರಿಯಗಳು ನನ್ನನ್ನು ಅದರ ವಿರುದ್ಧ ದಿಕ್ಕಿನಲ್ಲಿ ಜಗ್ಗುತ್ತವೆ. ಈ ಎರಡೂ ವಿರುದ್ಧ ಶಕ್ತಿಗಳ ಇಕ್ಕಳದೊಳಗಿಂದ ಪಾರಾಗುವದಕ್ಕೆ ಮಾರ್ಗವೇನೋ ಉಂಟು, ಆದರೆ ಆ ಮಾರ್ಗವು ಬಹು ಕಷ್ಟ ಸಾಧ್ಯವಾಗಿಯೂ ವಿಲಂಬಿಯಾಗಿಯೂ ಇರುವದು. ಬರೀದು ಕೆಲಸವನ್ನು ಮಾಡಲಿಕ್ಕೆ ಒಲ್ಲೆನೆಂದು ವಿಚಾರ ಮಾಡದೇ ಘಟ್ಟಿಯಾಗಿ ಹಟ ಹಿಡಿದು ಕುಳಿತು ಕೊಂಡರೆ ಆ ಮಾರ್ಗವು ನನಗೆ ಗೊತ್ತಾಗದು; ಆದರೆ ಇಂಥಿಂಥ ಕೆಲಸವನ್ನು ಇಂಥಿಂಥ ರೀತಿಯಿಂದ ಮಾಡಬೇಕೆಂದು ನಿರ್ಣಯಿಸಿ, ಆ ಪ್ರಕಾರ ಜಾಣತನದಿಂದ ಕಾರ್ಯ ಮಾಡಿದರೆ ಆ ಮಾರ್ಗವನ್ನು ಲಭಿಸುವದು. ದೇಹದಲ್ಲಿಯ ಈ ತರದ ಗುದ್ದಾಟದಿಂದ ಸತತವಾಗಿ ಇಂದ್ರಿಯ ನಿಗ್ರಹ ಮಾಡುವದು ಅವಶ್ಯವೆಂಬದು ನಿರ್ಣಯವಾಗುವದು; ಇದರಿಂದ ಆತ್ಮಕ್ಕೆ ಸಂಪೂರ್ಣ ಸ್ವಾತಂತ್ರ್ಯತೆ ದೊರೆಯುವದು.

\+ \+ \+

ಸದ್ಯಸ್ಥಿತಿಯ ವಿಷಯದಲ್ಲಿ.

ನನ್ನ ಸ್ನೇಹಿತರಂತೆ ನಾನೂ ಸರ್ವ ನಾಗರಿಕನು. ನನ್ನ ಬುದ್ದಿದೇನು ಅವರಿಗಿಂತ ಹೆಚ್ಚಿನದಲ್ಲ. ಅಹಿಂಸಾ ಧರ್ಮದಲ್ಲಿ ನನಗೆ ವಿಶ್ವಾಸ; ಅವರಿಗೆ ಮಾತ್ರ ಅದರಲ್ಲಿ ವಿಶ್ವಾಸವಿಲ್ಲ. ಹೀಗಿದ್ದರೂ ಸರಕಾರಕ್ಕೆ ಸಹಾಯ ಮಾಡುವ ತಮ್ಮ ಕರ್ತವ್ಯವನ್ನು ಪಾಲಿಸಲಿಕ್ಕೆ ಅವರು ನಿರಾಕರಿಸುವದು. ಕೋಪ ಮತ್ತು ದ್ವೇಷ

ಕನ್ನಡ ನವಜೀವನ.

ಶ್ರೀಯುತ ಪ. ಗಿಂ ಗುರುನಾರಾಯಣಕೆಲಿಸಿಳಿಸಿ.

ಸತ್ಯವೆಂದರೇನು?

—೦—

ಇಂಗ್ಲಿಷ್ ಧರ್ಮಶಾಸ್ತ್ರದಲ್ಲಿ ಬಂದು ಕಥೆಯುಂಟು. ಅದರಲ್ಲಿ ಒಬ್ಬ ನ್ಯಾಯಾಧೀಶನು 'ಸತ್ಯವೆಂದರೇನು?' ಎಂದು ಮಾಡಿದ ಪ್ರಶ್ನೆಗೆ ಉತ್ತರವು ಸೊರೆಯಲ್ಲಿ ಬಿದ್ದಿರುವಂತೆ ಬರೆದಿದೆ. ಸತ್ಯದ ಸಲುವಾಗಿ ಹರಿಶ್ಚಂದ್ರನು ಸರ್ವಸ್ವವನ್ನು ತ್ಯಾಗಮಾಡಿ ಕಡೆಗೆ ತನ್ನ ಹೆಂಡತಿಯನ್ನೂ ಮಗನನ್ನೂ ಮಾರಿ ಬಿಟ್ಟು ಅವನು ಹೊಲಯನ ಆಳಾದನೆಂದು ಹಿಂದು ಪುರಾಣಗ್ರಂಥವು ಹೇಳುತ್ತದೆ. (ಆ ಕಾಲದಲ್ಲಿ ಅಸ್ಪೃಶ್ಯತೆಯ ಸ್ಥಿತಿಯು ಹೇಗೆ ಇದ್ದಿರಬಹುದಾಗುತ್ತಿತ್ತು?) ಇವರಾಮ ಹಸನ ಹುಸೇನ ಇವರಿಬ್ಬರೂ ಸತ್ಯದ ದೆಸೆಯಿಂದ ತಮ್ಮ ಪ್ರಾಣಗಳನ್ನು ಕಳೆದು ಕೊಂಡರು.

ಅದರೂ ನ್ಯಾಯಾಧೀಶನು ಕೇಳಿದ ಪ್ರಶ್ನೆಗೆ ಉತ್ತರವು ದೊರೆತಿರುವದಿಲ್ಲ. ಹರಿಶ್ಚಂದ್ರನು ತಾನು ಯಾವುದನ್ನು ಸತ್ಯವೆಂದು ತಿಳಿದಿದ್ದನೊ ಆ ಸತ್ಯದ ಸಲುವಾಗಿ ಕಷ್ಟಗಳನ್ನು ಸೋಸಿದನು ಮತ್ತು ಅದಕ್ಕಾಗಿ ಅಮರನಾದನು. ಅದರಂತೆ ಇವರಾಮ ಹಸನ ಹುಸೇನ ಇವರಾದರೂ ತನುಗೆ ಯಾವುದು ಸತ್ಯವೆಂದು ತೋರಿತೊ ಅದಕ್ಕಾಗಿ ತಮ್ಮ ದೇಹಗಳನ್ನು ಬಿಟ್ಟು ಕೊಟ್ಟರು.

ಆದರೆ ಈ ಪರಿಮಿತ ಸತ್ಯವೊಂದಿಲ್ಲದೆ ಬೇರೊಂದು ಶುದ್ಧವಾದ ಸತ್ಯವಿರುವದು ಅದು ಅನಂತವಾಗಿಯೂ ಸರ್ವವ್ಯಾಪಕವಾಗಿಯೂ ಇರುವದು. ಆದರೆ ಅದು ಅವರ್ಣನೀಯವಾದದ್ದಿರುವದು. ಯಾಕಂದರೆ ಸತ್ಯವೇ ದೇವರೇ ಪರಮ ಪರಮೇಶ್ವರನೇ ಸತ್ಯವು. ಉಳಿದದ್ದೆಲ್ಲ ಬಿಟ್ಟಿಫ್ಯಾ ಅಸತ್ಯವು.

ಆದ್ದರಿಂದ ಸತ್ಯವನ್ವೇಷಿಸುವರು ಮನೋವಾಕ್ಕಾಯಗಳಿಂದ ಸತ್ಯವನ್ನೇ ಆಚರಿಸುತ್ತಿರುವರು. ಮತ್ತು ಪರಮೇಶ್ವರನನ್ನು ಅರಿತಿರುವರಾಗಿರುವರು. ಅದುದರಿಂದ ಅವರು ತ್ರಿಕಾಲಜ್ಞರಾಗಿರುವರು. ಅವರಿಗೆ ಈವೊತ್ತೇ ಮೋಕ್ಷವಿರುವದು.

ಇಂಥ ಸತ್ಯಾಚರಣೆಯೊಬ್ಬನು ದಿಸೆಂಬರ್ ತಿಂಗಳೇ ತಾರೀಖಿನೊಳಗಾಗಿ ತಂಗಾಸಾಪ ಪ್ಯಾಪರೆ ಇಂದೇ ಸ್ವರಾಜ್ಯವು ಇರುವದು.

ನಮ್ಮಲ್ಲಿ ಕೆಲವರು ಮಾತ್ರ ಸತ್ಯಾಗ್ರಹಿಗಳು. ಸತ್ಯವನ್ವೇಷಿಸುವದಕ್ಕಾಗಿ ಆಗ್ರಹವಿಡಿದವರು ಇರುವರು. ಅವರಾದರೂ ನಾಕು ಸತ್ಯವಂತರಿಗೆ ಮಾತ್ರ ತೊಗಿರುವದು. ಬಹುದ್ದು ನೋಡಿದರೆ ಸತ್ಯಾನ್ವೇಷಣೆಯ ಪಾಲನೆಯು ಸುಲಭವಾದದ್ದಿಲ್ಲವೆಂದು ಕಂಡು ಬರುವದು.

ಒಬ್ಬ ಮಿತ್ರನು ಕೇಳಿದ್ದೇನೆಂದರೆ, 'ನೀವು ಸತ್ಯಾನ್ವೇಷಣೆ ಮಾಡುವವರಾಗಿರಿ. ಆದರೆ ನಿಮ್ಮ ಶ್ರೀಯುತ ದಾಸರವರ ತಾರೀಖಿನ ಆಗ್ರಹವನ್ನು ನಿಮಗನುಕೂಲ ವಾಗುವಂತೆ ಮಾಡಿಕೊಂಡು ದಿಂಗಾಲದ ಹುದಿನೈದು ಲಕ್ಷದ ಒಳಗೆ ಇಪ್ಪತ್ತೈದು ಲಕ್ಷವೆಂದು ಜಾಹೀರು ಮಾಡಿರಿ. ಅದರಿಂದ ನಿಮ್ಮ ಕೂಟ್ಟಾರ್ಥಿಯಿಂದ ಆಗುವ ಅಸತ್ಯಾಚರಣೆಯನ್ನು ಮಾಡಿದಂತೆ ಆಗಲಿಲ್ಲವೇನು?' ನಾನು ನನಗನುಕೂಲ ವಾಗುವಂತೆ ಅರ್ಥವನ್ನು ಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡಿಲಿಲ್ಲ ನನಗೆ ಬೇಕಾಗುವಂಥ ಅರ್ಥವನ್ನು ನಾನಿಕೊಳ್ಳುವ ಚಟವು ನನಗಿಲ್ಲ ಅದರೆ ಆ ತಾರೀಖಿನ ಅರ್ಥವನ್ನು ಮಾಡುವದರಲ್ಲಿ ಮಾತ್ರ ಉತ್ಸಾಹವಿದ್ದೆನು. ಈ ತಾರೀಖು ರಾತ್ರಿ ಹನ್ನೆರಡು ಹೊಡೆದ ಮೇಲೆ ನನ್ನ ಕೈಸೇರಿತ್ತು. ಆತ್ಮ ಸಮರ್ಥನೆಯನ್ನು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಇದನ್ನು ನಾನು ಹೇಳುವದಿಲ್ಲ. ಅದರೆ ಸತ್ಯವನ್ನು ಇಷ್ಟೆಕೆಸ್ವಾಂತೆ ಹೇಳಬೇಕೆಂಬ ಉದ್ದೇಶದಿಂದಲೇ ಇದನ್ನು ನಾನು ಹೇಳುತ್ತೇನೆ. ತ್ರಿಕಾಲದಲ್ಲಿಯೂ ಸತ್ಯವನ್ನೇ ಆಚರಿಸಲಿಚ್ಛೆಯುಳ್ಳವನೆಂಬ ಈ ವಿಷಯದ ಉತಾವಳಿ ತನವು ಆಗಕೂಡದು. ಸತ್ಯಾಚರಣೆಯು ಅಸತ್ಯವನ್ನಾಡನು. ಮತ್ತು ಆಚರಿಸನು. ಅವನು ಅಸತ್ಯವನ್ನು ಆತಲಿಕ್ಕೂ ಆಚರಿಸಲಿಕ್ಕೂ ಅಸಮರ್ಥನಾಗಿ ಬಿಟ್ಟಿರುವನು. ಈ ವ್ಯಾಖ್ಯೆಯಿಂದ ನೋಡಿದರೆ ನಾನು ಸತ್ಯದ ಭಂಗವನ್ನು ಅವಶ್ಯವಾಗಿ ಮಾಡಿರುವನೆಂದು ಒಪ್ಪಿಕೊಳ್ಳಬೇಕಾಗುವದು.

ನಾನು ಸತ್ಯದ ಆಗ್ರಹವನ್ನು ಹಿಡಿದವನಾಗಿರುವೆನು. ಇದಕ್ಕೆ ಹೆಚ್ಚು ಈ ವ್ರತದ ವಿಷಯದಲ್ಲಿ ನಾನೇನಾದರೂ ಮಾತಿರುವೆನೆಂದು ಹೇಳಲಾರೆ. ತಿಳಿದೂ ತಿಳಿದೂ ನಾನು ಅಸತ್ಯವನ್ನು ಮಾತಾಡಿಲ್ಲ. ಬಂದೇ ಸಲ ಮಾತ್ರ ನಾನು ನನ್ನ ಪೂಜ್ಯರಾದ ತಂದೆಯವರನ್ನು ಜ್ಞಾನ ಪೂರ್ವಕವಾಗಿ ಮೋಸಗೊಳಿಸಿರುವೆನು. ಇದೊಂದು ಪ್ರಸಂಗವನ್ನುಳಿದು ನನ್ನ ಇಡೀ ಜೀವಮಾನದಲ್ಲಿ ಮತ್ತೊಂದು ಸಲ ಜ್ಞಾನಪೂರ್ವಕವಾಗಿ ಅಸತ್ಯಾಚರಣೆಯನ್ನು ಮಾಡಿಲ್ಲ ನನ್ನ ಸ್ಮರಣೆಯಲ್ಲಿಲ್ಲ. ಸತ್ಯವನ್ನು ಹೇಳುವದು ಮತ್ತು ಆಚರಣೆಯಲ್ಲಿತರುವದು ನನ್ನ ಸ್ವಭಾವವಾಗಿದೆ. ಆದರೆ ವಿಚಾರಕ್ಕೆ ವೀತಿಯಿಂದ ಅರಿತಾಗ ಸತ್ಯದ ಪಾಲನೆಯನ್ನು ನಾನು ಮಾಡುತ್ತೇನೆಂದು ಹೇಳುವಾಗಲು ತಿಳಿಯದೆ ನನ್ನಿಂದ ಅತಿಶಯೋಕ್ತಿಯಾಗಿಬಿಡಲಿ, ಆತ್ಮ ವಂಚನೆಯಾಗಲಿ ಹಾನು ನಾನು ನಾನಿನ ಕಾರ್ಯವನ್ನು ಹೆಚ್ಚಿಗೆ ಸಹಕಾರ್ಯವಾಗಿ ನಾನು ಮಾಡಿಸಿಹುದು. ಇದಿಲ್ಲದಿರಲ್ಲಿ ಆಕಾಶ ಭೂಮಿಯಿರುವದು ಮತ್ತು ಅದು ಸರ್ವ ಒಳಗೆ ಕಟ್ಟುವು. ಯಾರ ಜೀವನವು ಸಮಯನಾಗಿರುವನೋ ಅವರು ಕುಲ್ಲಾನ್ವಾ ಸ್ಪಷ್ಟಿಕ ಮಣಿಯಾಂತಿರುವರು. ಅವರ ಹೃದಯದಲ್ಲಿ ಅಸತ್ಯವು ಬಂದು ಕ್ಷಣಮಾತ್ರವೂ ನಿಲ್ಲಲಿಯದು. ಸತ್ಯಾಚರಣೆಯನ್ನು ಯಾವನೂ ನೋಡಿಸಿಕೊಳಿದನು ಯಾಕಂದರೆ ಅಪರೋಕ್ಷವೆ ಅವಶ್ಯವನ್ನಾಪಹುದೇ ಅಕ್ಯನಾಗಿರುತ್ತಾನೆ. ಜಗತ್ತಿನೊಳಗೆ ಎಲ್ಲಿ ವ್ರತಗಳಲ್ಲಿ ಸತ್ಯದ ವ್ರತವು ಅತ್ಯಂತ ಕಠಿಣವಾದದ್ದು. ಲಕ್ಷಜನರು ಪ್ರತಿಜ್ಞೆಮಾಡಿದರೆ ಎಲ್ಲಿಯೋ ಒಬ್ಬನು ಮಾತ್ರ ಪಾರಗಾಣಿಸುವನು.

ನನ್ನೆಮರಿಗೆ ಯಾರಾದರೂ ಸುಳ್ಳು ಸುದ್ದಿ ತಂದರೆ ನಾನು ಅವರ ಮೇಲೆ ಕೋಪಗೊಳ್ಳದೆ ನನ್ನ ಮೇಲೆಯೇ ವಿಶೇಷ ಕೋಪವ್ಯಕ್ತವನಾಗುವೆನು. ಯಾಕೆಂದರೆ ಆ ಸತ್ಯವು ನನ್ನ ಹೃದಯದಲ್ಲಿ ಇನ್ನೂ ಎಲ್ಲಿಯೋ ಗಾಢವಾಗಿ ವಾಸವಾಗಿದೆಯೆಂದು ನನಗೆ ಅನಿಸುತ್ತದೆ.

"ಋತ" ಎಂಬ ಸಂಸ್ಕೃತ ಧಾತುವಿನಿಂದ "ಸತ್ಯ" ಶಬ್ದವು ಉತ್ಪತ್ತಿಯಾಗಿರುವದು. "ಋತ" ಎಂದರೆ "ಇರು". ಮೂರೂ ಕಾಲಗಳಲ್ಲಿ ಬಂದೇ ರೂಪದಿಂದ ಇರಬಲ್ಲವನು ಪರಮಾತ್ಮನೇ ಸೈ. ಈ ಸತ್ಯದ ಭಕ್ತಿಯನ್ನು ಮಾಡುತ್ತ ನಿರಂತರವಾಗಿ ಅದಕ್ಕೆ ತಮ್ಮ ಹೃದಯದಲ್ಲಿ ಇಂಬುಗೊಟ್ಟ ಮಹಾತ್ಮರಿಗೆ ಶತಕೋಟಿ ವಂದನೆಗಳನ್ನು ಅರ್ಪಿಸುವೆನು. ಈ ಸತ್ಯದ ಸೇವೆಯನ್ನು ಮಾಡಲು ನಾನು ಉತ್ಸಾಹಿಸುತ್ತಿರುವೆನು. ಸತ್ಯದ ಸಲುವಾಗಿ ಹಿಮಾಲಯದ ತುದಿಯಿಂದ ಬೀಳಲು ಬೇಕಾಗುವಷ್ಟು ನಾಮರ್ಥ್ಯವು ನನ್ನಲ್ಲಿದೆಯೆಂದು ತಿಳಿದಿರುವೆನು. ಆದಾಗ್ಯೂ ಇನ್ನೂ ನಾನು ಸತ್ಯದಿಂದ ಬಹು ದೂರವಲ್ಲಿರುವನೆಂಬ ವಸ್ತು ಸ್ಥಿತಿಯನ್ನು ಅರಿಯುವೆ ಇಲ್ಲಿ. ನಾನು ಅದನ್ನು ಸನಿಹಾಪಿಸುತ್ತ ಹೋದಂತೆ ನನ್ನ ದುರ್ಬಲತೆಯು ಬಗ್ಗೆ ನನ್ನಲ್ಲಿ ಹೆಚ್ಚು ತಿಳುವಳಿಕೆಯುಂಟಾಗುತ್ತದೆ. ಮತ್ತು ಜ್ಞಾನವು ನನ್ನನ್ನು ನಮ್ರನನ್ನಾಗಿ ಮಾಡುತ್ತದೆ. ತನ್ನ ಯೋಗ್ಯತೆಯು ಎಷ್ಟು ಅಲ್ಪವಾಗಿದೆಂಬದು ತನಗೆ ತಿಳಿಯುವೆ ಮನುಷ್ಯನು ಅಭಿಮಾನ ಯುಕ್ತನಾಗುವದು ನಿಸರ್ಗ ವಿರುದ್ಧವಲ್ಲ. ಆದರೆ ಅರಿತವರ ಗರ್ವವು ಇಳಿಯುತ್ತ ಹೋಗುತ್ತದೆ. ನನ್ನ ಗರ್ವವು ಏಂದೋ ನಷ್ಟವಾಗಿದೆ ತುಲಸೀ ದಾಸನು ತನಗೆ ಗಿಳಿಯ ಉಪಮೆಯನ್ನು ಇಟ್ಟುಕೊಂಡದ್ದು ನನಗೆ ಯೋಗ್ಯವಾಗಿ ಕಾಣುತ್ತದೆ. ಈ ಕಾರ್ಯವು ಶೂರರದಿರುವರು. ಇಲ್ಲಿ ಹೇಡಿಗಳ ಕೆಲಸವಿಲ್ಲ. ಹತ್ತಿಪ್ಪತ್ತು ನಾಲ್ಕು ತಾಸು ಎಡೆಬಿಡದೆ ಯತ್ನಿಸುವವರು – ಊಣುವಾಗ

ಕೂಡುವಾಗ, ಮಲಗುವಾಗ, ಸೂಲುವಾಗ ಮಲವಿಸರ್ಜನೆ ಮಾಡುವಾಗ ಪ್ರತಿಯೊಂದು ಕ್ರಿಯೆಯನ್ನು ಮಾತ್ರವಾಗ ಕೇವಲ ಸತ್ಯ ಚಿಂತನೆಯನ್ನು ಮಾಡುವವರು ನಿಶ್ಚಯವಾಗಿ ಸತ್ಯಮಯರಾಗುವರು. ಸತ್ಯವೇ ಸೂರ್ಯನು ಯಾರಲ್ಲಿ ಯಾವರೂ ಸಂಪೂರ್ಣವಾಗಿ ಪ್ರಕಾಶಿಸಲು ಪ್ರಾರಂಭಿಸಿದೊಡನೆ ಜನರಿಗೆ ಬಳೆಯುವಂತೆ ಅವನು ಇರಲಾರನು. ಅಗ್ಗ ಅವನಿಗೆ ಹೊತಾಡುವದೂ, ಉಪದೇಶಿಸುವದೂ ಜಗತ್ತಿಗೆ ಟೀಲುವದಿಲ್ಲ. ಒಂದು ವೇಳೆ ಅವನು ಮಾತಾಡಿದರೆ ಅವನ ಮಾತಿನ ಪರಿಣಾಮವು ಒನರ ಮೇಲೆ ಶತಾಸ್ಥಿಲವಲ್ಲಿ ಆಗುತ್ತದೆ. ಇಷ್ಟು ಅವನ ಮಾತಿನಲ್ಲಿ ವಿಲಕ್ಷಣನಾದ ಶಕ್ತಿಯೂ ಜೀವಕಳೆಯೂ ತುಂಬಿರುವದು ಇಂಥ ಸತ್ಯನು ನಮ್ಮಲ್ಲಿಲ್ಲ. ಆದರೆ ಅದನ್ನು ಹೊಂದುವ ಮಾರ್ಗದಲ್ಲಿ ನಾನು ನಡೆಯುತ್ತಿರುವದರಿಂದ ಗಿಡಗಳಿಲದ ಹೈಳಿದಲ್ಲಿ ಬೆಂಡುಬೇ ಮಹಾ ವೃಕ್ಷದಂತಿರುವಂತೆ ನನ್ನ ಸ್ಥಿತಿಯಾಗಿ ಬವದು.

ಸತ್ಯದಲ್ಲಿ ಪ್ರೇಮವಿರುವದು. ಸತ್ಯದಲ್ಲಿ ಹಿಂಸೆ, ಬ್ರಹ್ಮಚರ್ಯೆ, ಅಸ್ತೇಯ ಮೊದಲಾದವುಗಳ ಸಮಾವೇಶವಾಗುತ್ತದೆ. ಸತ್ಯವೇ ನಿದೇಬಿದನ್ನು ಅರಿತ ಮೇಲೆ ಹಿಂಸೆಯನ್ನು ಮಾಡಿದರೆ ಸತ್ಯದ ತ್ಯಾಗ ಮಾಡಿದಂತಾಗುವದು. ವ್ಯಭಿಚಾರಕ್ಕೆ ಪ್ರವೃತ್ತವಾಪರೆ ಸೂರ್ಯನು ಪ್ರಕಾಶಿಸುತ್ತಿರುವಾಗ ಅಂಧಕಾರದ ವಶವಲ್ಲಿ ಹೋದಂತಾಗುವದು. ಈ ಶುದ್ಧ ಸತ್ಯವನ್ನೂ ಸಂಪೂರ್ಣವಾಗಿ ಪಾಲಿಸುವಂಥ ಒಬ್ಬನಾದರೂ ಈ ವರ್ಷದ ಕೂನೆಯೊಳಗಾಗಿ ಹೊರಟರೆ ಸ್ವರಾಜ್ಯವು ನೊರತೇ ತೀರುವದು. ಯಾಕಂದರೆ ಅವನು ಹೇಳಿದ್ದನ್ನೆಲ್ಲ ಎಲ್ಲರೂ ಮಾಡಿಯೇ ತೀರಬೇಕಾಗುವದು. ಸೂರ್ಯನ ಪ್ರಕಾಶವನ್ನು ತೋರಿಸಿ ಕೊಡುವದು ಅವಶ್ಯವಿಲ್ಲ. ಸತ್ಯವು ಸ್ವಯಂ ವ್ಯಕಾಶವಾಗಿಯೂ ಸ್ವಯಂಸಿದ್ಧವಾಗಿಯೂ ಇರುವದು. ಇಂಥ ಸತ್ಯಾಚರಣೆಯು ಈ ವಿಷಮ ಕಾಲದಲ್ಲಿ ಕಠಿಣವಾಗಿದೆಂಬದನ್ನು ನಾನು ಒಲ್ಲೆನು. ಅದರೆ ಅಶಕ್ಯವಾದದ್ದಿಲ್ಲ. ಈ ಬಗೆಯ ಸತ್ಯಾಗ್ರಹಿಗಳ ಸಂಖ್ಯೆಯು ಬಹು ಅಲ್ಪವಾಗ ಬಹುದು. ಅದರಿಂದ ಸ್ವರಾಜ್ಯವು ದೊರೆಯುತ್ತದೆಂಬಿದರಲ್ಲಿ ಸಂದೇಹವಿಲ್ಲ. ಪೂರ್ಣ ಪ್ರಮಾಣಕತನವಬೇಕು. ಸತ್ಯದ ಬದಲು ಸತ್ಯದ ಸೋಗು ನೀಡ. ಸತ್ಯವಲ್ಲಿ ಅಸತ್ಯದ ಪಿಶ್ರಣವು ಸ್ವಲ್ಪವಾದರೂ ಆಗ ಕೂಡದು. ಈ ಧರ್ಮ ಯುದ್ಧದಲ್ಲಿ ನಾವೆಲ್ಲರೂ ಸತ್ಯವನ್ನು ಪಾಲಿಸುತ್ತ ನಡೆಯುಬೇಕೆಂದು ನನ್ನ ಪೂರ್ತಾ ವಕಾಂಕ್ಷೆಯಿದೆ.

(ನವಜೀವನ.) ಮೋಹನದಾನ ಕರಮಚಂದ ಗಾಂಧಿ.

ಕಬ್ಬಿಣದ ಕಡ್ಲೆ.

ಗುಜರಾಥವು ಸವಿನಯ ಅಜ್ಞಾಭಂಗವನ್ನು ಪ್ರಾರಂಭಿಸುವದು ಕಬ್ಬಿಣ ಕಡಲೆಯನ್ನು ತಿನ್ನುವದಕ್ಕಿಂತ ಕಠಿಣವಿರುವದು! ಅದರೆ ಒಂದು ತಾಲೂಕಾದರೂ ಅದರೊಳಗಿಂದ ಪ್ರಾರಂಭಿಸಿದೊಡನೆ ಸ್ವರಾಜ್ಯವು ಕೈಕಂಕಣದಂತಾಗುವದೆಂಬದರಲ್ಲಿ ನನಗೆ ಸ್ವಲ್ಪಾದರೂ ಸಂಶಯವಿಲ್ಲ. ಇದರ ಅರ್ಥವೇನಂದರೆ ಒಂದು ತಾಲೂಕಿನಲ್ಲಿ ಸತ್ಯಾಗ್ರಹಿಗಳ ಸೈನ್ಯವು ನಿರ್ಮಿತವಾದಂತಾಯಿತು. ಈ ಸತ್ಯಾಗ್ರಹಿ ಸೈನ್ಯದಲ್ಲಿ ಹೆಂಗಸರು ಮತ್ತು ಗಂಡಸರು, ವೃದ್ಧರು ಮತ್ತು ತರುಣರು, ಪೂರ್ಣಾಂಗರು ಮತ್ತು ವಿಕಲಾಂಗರು, ಅಶಕ್ತರು ಮತ್ತು ಸಶಕ್ತರು, ಹಿಂದು, ಮುಸಲ್ಮಾನ, ಪಾರಸಿ, ಕ್ರೈಸ್ತರು ಯಹುದಿ. ಬ್ರಾಹ್ಮಣ. ಕ್ಷತ್ರಿಯ, ವೈಶ್ಯ, ಶೂದ್ರ ಅಂತ್ಯಜ ಇವರೆಲ್ಲರೂ ಸೇರಬಹುದೆಂದು ನಾನು ಈ ಮೊದಲೇ ಹೇಳಿರುವೆನು. ಪ್ರಹ್ಲಾದನಂಥ ಬಾಲಕರಾರಾದರೂ ಇದ್ದರೆ ಸೇರಬಹುದು ಮತ್ತು ತಾಯಿತಂದೆಯಂದಿರೂ ತಮ್ಮ ಮಕ್ಕಳನ್ನು ಸೇರಿಸಬಹುದು. ಈ ಬಗೆ ಯಾಗಿ ನಿರ್ಮಿತವಾದದ್ದಿದ್ದರೂ ಈ ಸೈನ್ಯವು ಸಶಸ್ತ್ರವಾದ ಸೈನ್ಯದಕಿಂತ ಹೆಚ್ಚು ಉಪಯುಕ್ತವಾಗಿರುವದು. ಮತ್ತು ಅವರ ಸಲುವಾಗಿ ಮಾಡಬೇಕಾದ ವೆಚ್ಚವಾದರೂ ಎಷ್ಟು? ಈ ಸೈನಿಕರಲ್ಲಿ ಅವಶ್ಯವಾಗಿರತಕ್ಕ ಗುಣವೆಂದರೆ ನಿರ್ಭಯತೆ ಮಾತ್ರ. ಅವರಲ್ಲಿ ಸಾಯುವ ಸಾಮರ್ಥ್ಯವು ಇರುವದು ಅತ್ಯಗತ್ಯವಾದದ್ದು. ಅವರಲ್ಲಿ ಆಸ್ತಿಕ ಬುದ್ಧಿಯು ನೆಲೆಗೊಂಡಿರಲಿಕ್ಕೇಬೇಕು.

ನಾನು ಈ ಸಮಯದಲ್ಲಿ ಬೇಡುವ ಇತರ ಗುಣಗಳು ಯಾವಾಗಲೂ ಬೇಕೆಂಬಂತಿಲ್ಲ. ಆದರೆ ಇಂದಿನ ಪರಿಸ್ಥಿತಿಗೆ ಅವು ಅವಶ್ಯಕ ವಾಗಿರುತ್ತವೆ

ಆದರೆ ಹೀಗೆ ಬರಿಯಲು ಸುಲಭವಾದದ್ದಿದ್ದರೂ ನೆಟ್ಟಗೆ ಅದನ್ನು ಅರಿತುಕೊಳ್ಳುವರಿಗೆ ಕಠಿಣವಾಗಿರುತ್ತದೆ. ಸಂಕಲ್ಪ ಮಾಡಿ ಘಂಟವರಿದು ಬಂದ ತಾಲೂಕಿನಲ್ಲಿ ಮಹತ್ವದ ಪರಿವರ್ತನೆ ಯಾಗಿರತಕ್ಕದ್ದು. ಆ ತಾಲೂಕಿನ ಸೈನಿಕರಲ್ಲಿ ಯಾವನೂ ಂರಕ್ಷಣವಾದರೂ ನಿರುದ್ಯೋಗಿ ಯಾಗಿರಕೂಡದು. ಯುದ್ಧವು ಪ್ರಾರಂಭವಾದ ಮೇಲೆ ಪ್ರತಿಯೊಬ್ಬ ಸತ್ಯಾಗ್ರಹಿಯು– ಮರುಷನಿರಲಿ ಸ್ತ್ರೀಯಳಿರಲಿ– ಕಾರಾಗೃಹದಲ್ಲಿ ಹೋಗುವದಕ್ಕಾಗಿ ಒಂದಿಲ್ಲೊಂದು ಸ್ಥಳದಲ್ಲಿ ಸವಿನಯ ಅಜ್ಞಾ ಭಂಗವನ್ನು ಮಾಡುತ್ತಿರಬೇಕು, ಇಲ್ಲವೆ ನೂಲುತ್ತಿರಬೇಕು. ಇಲ್ಲವೆ ನೇಯುತ್ತಿರಬೇಕು, ಇಲ್ಲವೆ ಹಿಂಜುತ್ತಿರಬೇಕು, ಇಲ್ಲವೆ ಹತ್ತಿಯನ್ನು ಅರಿಯುತ್ತಿರಬೇಕು. ಅರಕ್ಷಣವಾದರೂ ಯಾವನೂ ಕೈ ಮುಟ್ಟಿ ಕೂಡಲಾಗದು. ಶ್ರೀಮಂತನಿರಲಿ ದರಿದ್ರನಿರಲಿ ನಿರುದ್ಯೋಗಿ ಯಾಗಿರಕೂಡದು. ಸಿರಿವಂತ ಒಡವರೆಂಬ ಭೇದವು ತಾತ್ಕಾಲಿಗವಿಷಯದಲ್ಲಿಗೂಗಾಗದು. ಪಂಚಿನು ಜಾರ್ಜನ ನಾಕೆಯಮೇಲೆ ಕೆಲವು ಮಾತ್ರುತ್ತಿರುವಾಗ ಒಂದೇ ಜನರಂತೆ ನೆಲದ ಮೇಲೆ ಮಲಗುತ್ತಿದ್ದರು ಹಾಲಿಲ್ಲದೆ ಚಹಾಕಾಫಿಯನ್ನು ಕುಡಿಯುತ್ತಿದ್ದರು ಮತ್ತು ಉಪಯು ಹಿಟ್ಟಿನ ರೊಟ್ಟಿಗಳನ್ನು ತಿನ್ನುತ್ತಿದ್ದರು. ಇದೇ ಸಿವಾಯಿಗಿರಿಯು.

ಸವಿನಯ ಅಜ್ಞಾಭಂಗದ ಸಲುವಾಗಿ ಸಿದ್ಧ ತೆಯನ್ನು ಮಾಡುತ್ತಿರುವ ತಾಲೂಕು ಅರ್ಥಾತ್ ಈಗಾಗಲೆ ಸಿದ್ಧವಾದ ತಾಲೂಕು ಆ ತಾಲೂಕಿನೊಳಗಿನ ಪ್ರತಿಯೊಂದು ಹಳ್ಳಿಯು ಸಲುವಾಗಿ ಒಂದು ಶಕ್ತಿಗಣಯನ್ನು ಮಾಡಿ ಅದರಲ್ಲಿ ಕೆಳಗಿನ ಸಂಗತಿಗಳನ್ನು ಬರಿಯತಕ್ಕದ್ದು.

೧ ಹಳ್ಳಿಯ ಹೆಸರು.

೨ ತಾಲೂಕಿನಿಂದ ಅದರ ಅಂತರವು.

೩ ಜನಸಂಖ್ಯೆ: ಪುರುಷರೆಷ್ಟು, ಸ್ತ್ರೀಯರೆಷ್ಟು, ಹದಿನಾರು ವರುಷದ ಕೆಳಗಿನ ಹುಡುಗ ಹುಡುಗಿಯರೆಷ್ಟು, ಹಿಂದು, ಮುಸಲ್ಮಾನ, ಪಾರಸೀ ಕ್ರೈಸ್ತ, ಯಹುದೀ ಅಸ್ಪೃಶ್ಯ ಮೊದಲಾದವರೆಷ್ಟು?

೪ ರಾಟೆಗಳ ಸಂಖ್ಯೆ,

೫ ಮಗ್ಗಗಳ ಸಂಖ್ಯೆ.

೬ ಪಿಂಜಾರರ ಸಂಖ್ಯೆ.

೭ ಅಳಿಯ ಸಂಗಹ.

೮ ಶಾಲೆಗಳ ಸಂಖ್ಯೆ ಮತ್ತು ಅವುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ.

೯ ಪೋಲೀಸರ ಸಂಖ್ಯೆ.

೧೦ ಸರಕಾರೀ ಸತ್ತಿಗು ಚಿನ್ನಗಳು.

೧೧ ಕಾರಾಗೃಹಕ್ಕೆ ಹೋಗಲು ಸಿದ್ಧರಾದವರ ಸಂಖ್ಯೆ.

೧೨ ಶಿಂದಿ ಶರಾಯ ಅಂಗಡಿಗಳ ಸಂಖ್ಯೆ.

೧೩ ಸಹಕಾರಿಗಳಿದ್ದರೆ ಅವರ ಸಂಖ್ಯೆ.

ನಮಗೆ ಸತ್ಯಾಗ್ರಹಿ ಸೈನ್ಯವನ್ನು ನಿರ್ಮಿಸತಕ್ಕದ್ದಿದ್ದರೆ ಪ್ರತಿಯೊಂದು ಹಳ್ಳಿಯಲ್ಲಿ ಪ್ರಜಾಜನರ ಪ್ರತಿನಿಧಿಗಳೂ ಪ್ರಜಾ ಪಂಚರೂ ಇರತಕ್ಕದ್ದು ಅವಶ್ಯಕವಾದುದು. ಇಪ್ಪತ್ತು ಜನರ ದೊಂದು ಸಮೂಹ, ಆ ಸಮೂಹಕ್ಕೆ ಅಪರಲ್ಲಿಯ ಒಬ್ಬನು ನಾಯಕನು, ಇಪ್ಪತ್ತು ನಾಯಕರದೊಂದು ಸಮೂಹವು ಮತ್ತು ಅದಕ್ಕೆ ಅವರಲ್ಲಿ ಒಬ್ಬನು ಅಧಿನಾಯಕನು ಈ ಬಗೆಯಾಗಿ ಸೈನ್ಯವನ್ನು ನಿರ್ಮಿಸತಕ್ಕದ್ದು. ನಿರ್ಮಿಸುವಾಗ್ಗೆ ಹಿಂದುಮುಸಲ್ಮಾನ ಮುಂತಾದ ಭೇದವನ್ನು ಮಾಡತಕ್ಕದ್ದಲ್ಲ. ಅದಷ್ಟು ಸೇ ಹೊರೆಯ ಜನರದೇ ಸಮೂಹವಾಗತಕ್ಕದ್ದು. ಲೋಕಮತವನ್ನು ಸಿದ್ಧಪಡಿಸಿದ್ದರಲ್ಲಿ ಈ ಕಾರ್ಯದಲ್ಲಿ ಯಾವ ಅಡಚಣೆಯೂ ಬರುವದಿಲ್ಲ. ಈ ಬಗೆಯ ಜನರ ಸಂಘಟನವು ಸಿದ್ಧವಾದ ಲೊಕಮತವನ್ನು ಪರ್ಶಕಪಡಿಸುತ್ತದೆ.

ಕುಶಲವಾದ ಕಾರ್ಯಕಾರಿಗಳಿದ್ದರೆ ಮೇಲೆ ಕಾಣಿಸಿದ ಕೆಲಸವು ಎರಡು ದಿವಸಗಳಲ್ಲಿ ನೆರವೇರುವದು. ಯಾವದೊಂದು ಹಳ್ಳಿಯಲ್ಲಿ ಜನಸ್ತಿಯು ಅಲ್ಪಸಿದ್ದರೆ ಅಲ್ಲಿ ಮುಂಚಾನೆ ಸಭೆಯನ್ನು ನೆರೆಯಿಸಿ ಅವಶ್ಯ ಈ ಕೆಲಸವನ್ನು ಮುಗಿಸಿ ಬಿಡಬಹುದು. ನಾನು ಹೋಗಬೇಕೆಂದೆನ್ನುವ ಪ್ರತಿಯೊಂದು ತಾಲೂಕಿನಲ್ಲಿ ಮೇಲೆ ಕಾಣಿಸಿದ ಮಾತುಗಳ ಸಂಪೂರ್ಣ ಮಾಹಿತಿಯು ಅಲ್ಲಿಯ ಜನರಲ್ಲಿ ಕಂಡು ಬಂದೀತೆಂದು ನನ್ನ ನಂಬಿಗೆಯಿದೆ.

ಈ ಸಣ್ಣ ಗೆಲಸಕ್ಕೆ ನಾನು "ಕಬ್ಬಿಣ ಕಡ್ಲೆ" ಯೆಂಬ ಶಿರೋಲ್ಲೇಖನವನ್ನು ಬರೆದಿರುವೆನೇಕೆ? ಯಾಕಂದರೆ ನಾವು ದಾದಾಳುತನವನ್ನು ಮರೆತಿರುವೆವು. ಹಾಗು ಪರಮಾರ್ಥವನ್ನಾದರು ಮರೆತಿರುವೆವು ನಾವು ನಮ್ಮ ಸಲುವಾಗಿಯೇ ನಾಯಕೂತಪು. ನಮಗೆ ಜನರ ಸಲುವಾಗಿ ನಾಯುವದಿದೆ. ಜನರ ಸಲುವಾಗಿ ನಾಯುವದಕ್ಕಾಗಿ ಮೊದಲು ಜನರು ಸಿದ್ಧರಾಗಿರತಕ್ಕದ್ದೊಂದು ಇಲ್ಲದೆ ಅವರನ್ನು ಸಿದ್ಧರನ್ನಾಗಿ ಮಾಡುವದಕ್ಕಾಗಿ ನಾನಾದರೂ ಸತ್ತು ಹೋಗತಕ್ಕದೊಂದು.

ನಿಜ, ನಾವು ಉದ್ಯೋಗದ ಚಟವನ್ನೇ ಕಳಕೊಂಡಿರುವೆವು, ಅಥವಾ ಯಾವದಾದರೊಂದು ಉದ್ಯೋಗವನ್ನೂ ನಾವು ಮಾಡುತ್ತಿಲ್ಲವೆ ಅದರಿಂದ ಪ್ರಜಾಸುಖವನ್ನಾಗಲಿ ಪ್ರಜಾ ಸಂಗ್ರಹವನ್ನಾಗಲಿ ಸಾಧಿಸಬೇಕೆಂಬ ಅರುವೂ ನಮಗಿರುವದಿಲ್ಲ. ಕುಟುಂಬದ ಮುಂದೆ ನಮ್ಮ ದೃಷ್ಟಿಯೇ ಹೋಗುವದಿಲ್ಲ. ನಮ್ಮಲ್ಲಿನ ಧರ್ಮವು ನಮಗೆ ಕಲಿಸುವದೇನಂದು ವ್ಯಕ್ತಿಯು ಕುಟುಂಬದ ಸಲುವಾಗಿ ಕುಟುಂಬವು ಗ್ರಾಮದ ಸಲುವಾಗಿ, ಗ್ರಾಮವು ತಾಲೂಕಿನ ಸಲುವಾಗಿ ತಾಲೂಕು ಜಿಲ್ಲೆಯ ಸಲುವಾಗಿ ಜಿಲ್ಲೆಯು ಪ್ರಾಂತದ ಸಲುವಾಗಿ ಪ್ರಾಂತವು ಭಾರತವರ್ಷದ ಸಲುವಾಗಿ ಮತ್ತು ಕಡೆಗೆ ಭಾರತವರ್ಷವು ಜಗತ್ತಿನ ಸಲುವಾಗಿ ಸಿದ್ಧವಿರತಕ್ಕದ್ದು. ನಾನು ಈ ಸ್ವದೇಶಭಕ್ತಿಯ ಸಲುವಾಗಿ ಜೀವಿಸುತ್ತಿರುವೆನು. ಮತ್ತು ಅದನ್ನು ಪ್ರಕಟಗೊಳಿಸಲು ಸಾಯುವದು ನನಗೆ ಜೀವದಿಂದಿರುವದು ಎಷ್ಟು ಪ್ರಿಯವಾಗಿದೆಯೋ ಅಷ್ಟೇ ಪ್ರಿಯವಾಗವದು. ಸ್ವದೇಶ ಭಕ್ತಿಯಿಲ್ಲದ ಜೀವನವು ಮೃತ್ಯುವಿಗೆ ಸರಿಯಾದುದು. ಸಂಸಾರದಲ್ಲಿ ನಿಜವಾದ ಸುಖವಿದ್ದರೆ ಅದು ವರದುಃಖದಿಂದ ದುಃಖಿತವಾಗುವದರಲ್ಲಿಯೂ ಪರ ಸಂರಕ್ಷಣೆಗಾಗಿ ಸ್ವತಃ ಸಾಯುವದರಲ್ಲಿಯೂ ಇದೆ. ಹೀಗೆ ಮಾಡುವವನು ಸಹಜವಾಗಿ ಸುಖದಲ್ಲಿಯೇ ಮಗ್ನನಾಗುವನು. ಇಷ್ಟೆಲ್ಲ ನೆರವೇರಿಸಲು ನಮಗೆ ಅಷ್ಟೊಂದು ದೊಡ್ಡ ಕೆಲಸವನ್ನು ಮಾಡುವನು ಅಗತ್ಯವಿಲ್ಲ. ಕೇವಲ ಅಂತಃಕರುಣದಲ್ಲಿ ವರಿವರ್ತನೆಯಾಗತಕ್ಕದ್ದು ಹಾಗು ನಾವು ಸ್ವಲ್ಪನಿಜಾರ ಮಾಡತಕ್ಕದ್ದು. ಇದರಲ್ಲಿ ವಿಲಂಬವಾಗಕೂಡದು.

ಸಿದ್ಧವಿದ್ದ ತಾಲೂಕು ಈ ತತ್ವವನ್ನು ಚನ್ನಾಗಿ ಅರಿತುಕೊಂಡಿದ್ದರೆ ಕಬ್ಬಿಣ ಕಡ್ಲೆಯನ್ನು ತಿನ್ನುವದಕ್ಕಿಂತ ಕಠಿಣವೆಂದು ತೋರುವ ಕೆಲಸವು ನನ್ನಂಥ ವಯಸ್ಸಾದ ಮನುಷ್ಯನಿಗೆ ಹುರಿದು ಹೊರಗೆ ಮಾಡಿದ ಕಡ್ಲೆಯನ್ನು ತಿನ್ನುವದು ಎಷ್ಟು ಸುಲಭವಿದೆಯೊ ಅದಕ್ಕೂ ಹೆಚ್ಚು ಸುಲಭವಾಗಿರುವದೆಂದು ಅದಕ್ಕೆ ತೋರುವದು.

(ನವಜೀವನ)
(ಮೋಹನದಾಸ ಕರಮಚಂದ ಗಾಂಧಿ)

ಮೂರನೇ ಪುಟದಿಂದ ಮುಂದೆ ಸಾಗಿದ್ದು

ಭಾವನೆಗಳಿಂದ ಪ್ರೇರಿತರಾದ್ದರಿಂದ ಅವರು ಹೀಗೆ ನಿರಾಕರಿಸುವರು; ಅಜ್ಞಾನ ಮತ್ತೂ ಬಲಹೀನತಗಳೇ ಅದಕ್ಕೆ ಕಾರಣ. ಅವರ ಸಂಗಡ ಕೆಲಸ ಮಾಡುವವ ನಾದ್ದರಿಂದ ಇದೇ ಒಳ್ಳೇ ಮಾರ್ಗವೆಂದು ಅವರಿಗೆ ತೋರಿಸುವದು ನನ್ನ ಕರ್ತವ್ಯವಾಯಿತು. ಆದ್ದರಿಂದ ಅವರ ಸ್ಪಷ್ಟ ಕರ್ತವ್ಯವೇನೆಂಬದನ್ನು ಅವರಿಗೆ ಅರುಹಿ, ಅಹಿಂಸಾ ತತ್ವವನ್ನು ತಿಳಿಸಿಕೊಟ್ಟು, ನಿಮ್ಮ ಇಷ್ಟವಿದ್ದಂತೆ ಮಾಡಬೇಕೆಂದು ಹೇಳಲು, ಅವರು ಈ ತತ್ವವನ್ನೇ ಸ್ವೀಕರಿಸಿದರು. ಅಹಿಂಸಾ ಧರ್ಮವನ್ನು ತಿಳಿ ಹೇಳಿದ ಬಗ್ಗೆ ನಾನೇನು ಪಶ್ಚಾತ್ತಾಪ ಪಡುವದಿಲ್ಲ. ಸ್ವರಾಜ್ಯ ದೊರೆತ ಮೇಲೆ ಸಹ ಶಸ್ತ್ರಧಾರಿಗಳಿಗೆ ಅಹಿಂಸಾ ಧರ್ಮವನ್ನು ಸ್ವೀಕರಿಸಿ, ರಾಷ್ಟ್ರದ ಜಕಿಯಿಂದ ಹೋರಾಡಬೇಕೆಂದು ಉಪದೇಶ ಮಾಡಲು ನಾನು ಹಿಂದೆ ಮುಂದೆ ನೋಡುವದಿಲ್ಲ.

× × ×

ಮುಂದಣ ವಿಚಾರವೇನು?

ಮೇಲಿನ ವಿವೇಚನೆಯಿಂದ, ಮುಂದಿನ ಪ್ರಶ್ನೆಯ ಉತ್ತರಕ್ಕೆ ಬಂದಂತಾಯಿತು. ನನ್ನೆ ಮತನಂತೆ ಸ್ವರಾಜ್ಯ ದೊರೆತ ಮೇಲೆ ಸಹ ಶಸ್ತ್ರಧರಿಸುವ ಅವಶ್ಯಕತೆಯೇ ಇಲ್ಲ. ಆದರೆ ಸೈನ್ಯಕ್ಕೆ ನಾನು ನಡೆಸಿದ ಪ್ರಯತ್ನದ ಫಲವೆಂದು ನನ್ನ ಮತವನ್ನು ಎಲ್ಲರೂ ಸ್ವೀಕರಿಸುವರೆಂದು ನನಗೆ ಅನಿಸುವದಿಲ್ಲ. ಯಾಕಂದರೆ ಅಹಿಂಸೆಯ ಧ್ಯೇಯವನ್ನು ಮುಂದಿಟ್ಟುಕೊಂಡು ಅದನ್ನೇ ಪ್ರಸಾರ ಮಾಡುವ ಕಾರ್ಯಕ್ಕೆ ನಾನು ಹತ್ತಿಲ್ಲ. ಅಲ್ಲದೆ, ಇಡೀ ರಾಷ್ಟ್ರವು ಅಹಿಂಸಾತತ್ವವನ್ನು ಸ್ವೀಕರಿಸುವಂತೆ ಸವಿಸ್ತರವಾದ ಒಂದು ವಿಶಿಷ್ಟ ಕಾರ್ಯಕ್ರಮವನ್ನು ತಯಾರಿಸಿ ವಸ್ತು ಕಕ್ಕಿಯು ನನ್ನಲ್ಲಿ ಇನ್ನೂ ಉಂಟಾಗಿಲ್ಲಿಂದು ನನ್ನ ಭಾವನೆ. ನನ್ನಲ್ಲಿಯೇ ಇನ್ನೂ ವಿಧವಿಧದ ಮನೋವಿಕಾರಗಳು ತುಂಬಿವೆ ಮಾನವೀ ಸ್ವಭಾವದ ಬೇರೆ ದೋಷಗಳು ಅವೆ; ಅದರಿಂದ ಸಾಕಷ್ಟು ಬಲವಾಗಲಿ, ಈಶ್ವರೇತರಿಯಾಗಲಿ ಲಭಿಸುವದೆಂದು ನನ್ನ ಮನವು ನನಗೆ ಹೇಳುವದಿಲ್ಲ. ನನ್ನಲ್ಲಿರುವ ನಿರ್ಬಲತ್ವವನ್ನು ಹೊಡೆದೋಲಿಚ್ಚಿಸಲಿಕ್ಕೆ ಸರ್ವದಾ ನಾನು ಶ್ರಯತ್ನ ಬಡುತ್ತಿರುವೆನೆಂಬವನ್ನು ಮಾತ್ರ ನಾನು ಎವೆ ತಪ್ಪಿಸಿ ಹೇಳಬಲ್ಲೆ. ಇಂದ್ರಿಯಗಳನ್ನು ಒದಿಗೊತ್ತಿ ಅವುಗಳನ್ನು ನಿಗ್ರಹಣ ಮಾಡುವ ಸಾಮರ್ಥ್ಯವನ್ನು ಸಂಪಾದನೆ ಮಾಡಿರುವೆನೆಂದು ನನಗೆ ಅನಿಸುತ್ತದೆ; ಆದರೆ ಯಾವ ಪಾಪ ಕರ್ಮವನ್ನು ಎಂದಿಗೂ ಮಾಡದೇ ಇರುವಷ್ಟು ಯೋಗ್ಯತೆ ಬಂದಿಲ್ಲ ಅಂದರೆ ಇಂದ್ರಿಯಗಳು ಪಕ್ಕನೆ ನನ್ನ ಮೇಲೆ ದಾಳಿ ಇಟ್ಟರೆ ಅವನ್ನು ಸಂಪೂರ್ಣವಾಗಿ ಮುರಿಬಡೆಯಲಾರೆ. ಪರಮೇಶ್ವರನ ಸಾನಿಧ್ಯದ ಹೊರತೂ ವಿಕ್ಕು ಯಾವ ಪಸ್ತುವು ನನ್ನ ಹೃದಯದಲ್ಲಿರುವದಿಲ್ಲೆಂಬ ಭಾವನೆಯಿಂದ ಯುಕ್ತನಾದ, ಅವರ್ಣನೀಯವಾದ ಬ್ರಹ್ಮಾನಂದವನ್ನು ಕೊಡುವಂಥ ಮತ್ತು ಪಾಪದ ಕಣವು ಕೂಡ ಇಲ್ಲದಂಥ ಪದವಿಯನ್ನು ಸಂಪಾದಿಸುವದು ಸ್ವಾಭಾವಿಕವೆಂಬ ಮಾನವೀ ಪ್ರಾಣಿಗೆ ಶಕ್ಯ ವಿದೆಯೆಂಬ ನನ್ನ ವಿಶ್ವಾಸವಿದೆ. ಈ ತರದ ಯೋಗ್ಯತೆ ನನ್ನಲ್ಲಿ ಬರಬೇಕಾದರೆ ಇನ್ನೂ ಬಹುಕಾಲ ಅಳಿಯಬೇಕಾಗಬೇಕೆಂದೆನ್ನು ಒಪ್ಪಿಕೊಳ್ಳುತ್ತೇನೆ ಆದ್ದರಿಂದ ಸಂಪೂರ್ಣವಾದ ಅಹಿಂಸೆಯಿಂದ ಕೂಡಿದ ಒಂದು ಮಾರ್ಗವನ್ನು ಶೀಘ್ರದಲ್ಲಿಯೇ ಆಚರಣೆಯಲ್ಲಿ ತರುವಂತೆ ರಾಷ್ಟ್ರಕ್ಕೆ ತೋರಿಸುವದು ನನಗೆ ಶಕ್ಯವಿಲ್ಲ.

ರೇಲ್ವೇ ಮತು ತಂತಿ.

ನಾನು ಮೇಲೆ ವಿವೇಚಿಸಿದ ಗಹನವಾದ ತತ್ವಕ್ಕೆ ಸರಿ ಹಚ್ಚಿ ನೋಡಿದರೆ ಈ ರೇಲ್ವೇ ತಂತಿಗಳ ಪ್ರಶ್ನೆಯು ಬಹು ಕ್ಷುಲ್ಲಕವಾದದ್ದೆಂಬದರಲ್ಲಿ ಸಂಶಯವಿಲ್ಲ. ಈ ಸೌಕರ್ಯಗಳನು ಸ್ವತಃ ನಾನೇ ನನ್ನ ಸ್ವಂತ ಉಪಯೋಗಕ್ಕೆ ಬೇಡೆಂದು ಬಿಟ್ಟಿಲ್ಲ. ಈ ಸೌಕರ್ಯಗಳನ್ನು ರಾಷ್ಟ್ರವು ತ್ಯಜಿಸಬೇಕೆಂದು ನಾನು ನಿಜವಾಗಿ ಇಚ್ಛಿಸುವದಿಲ್ಲ ಸ್ವರಾಜ್ಯ ದೊರೆತ ಮೇಲೆ ಸಹ ಅವುಗಳನ್ನು ದೂರೀ ಕರಿಸಬೇಕೆಂದು ಅಪೇಕ್ಷಿಸುವದಿಲ್ಲ. ಆದರೆ ಈ ಉಪಕರಣಗಳು ನಮ್ಮ ನೈತಿಕ ಉನ್ನತಿಗೆ ಅತ್ಯವಶ್ಯಕವಾದವುಗಳೆಂದು ಅಥವಾ ನಮ್ಮ ಭೌತಿಕ ಸುಖದ ಅಭಿವೃದ್ಧಿಗೆ, ಸರ್ವಥಾ ಬಿಡಲಿಕ್ಕೆ ಬಾರದ ವಸ್ತುಗಳೆಂದೂ ಹೇಳಲ್ಪಡುವ ನಿಧಾನಗಳಲ್ಲಿ ಸ್ವರಾಜ್ಯ ದೊರೆತ ಮೇಲೆ ನಂಬಿಗೆ ಇಡಬಾರದೆಂದು ಖಂಡಿತವಾಗಿಯೂ ನನ್ನ ಅಪೇಕ್ಷೆಯಿದೆ ಈ ಸೌಕರ್ಯಗಳನ್ನು ಅತಿಶಯ ಮಹತ್ವದಿಂದ ಉ

ಸಹಕರಿಸಬೇಕೆಂದು, ಹಿಂದುಸ್ಥಾನದ ಏಳು ನೂರಾ ಐವತ್ತು ಹಳ್ಳಿಗಳನ್ನು ರೇಲ್ವೇ, ತಂತಿಗಳಿಂದ ಕೂಡಿಸಲಿಕ್ಕೆ ಜ್ವರ ಪೀಡಿತ ಮನುಷ್ಯರಂತೆ ವಿಮೂಢರಾಗಿರಬಾರದೆಂದೂ ಗ್ರಾಮಕ್ಕೆ ಉಪದೇಶ ಮಾಡುವನು ನಮ್ಮ ಜ್ಞಾನಾಭಿವೃದ್ಧಿಗಿಂತ ಸಮ್ಮುಖ್ಯ ವೃತ್ತಿ ರಸ್ತೇ ಮೆಷಿನರಿಗಳಿಗಾಗಿ ಇಪ್ಪ ಸಮ್ಮತರಾಗಿನ ಬೇಕಾಗಿದ್ದವೆಂದೆಸ್ಸ ನ್ಯಾಶನಲ್ ಜ್ಯೋತಿಯು ಪ್ರಕಾಶವನ್ನು ಉಪಯೋಗಿಸಿ ಲತ್ತ ಹಸ್ತಿಗಳಾಡಿಸಿ ಜನರಿಗಿಂತ ವಿವಿಧ ಸುಧಾರಣೆಯಿಂದಲೆ ಕುಂಟು ಹೆಂಗಸೇ ತಂತಿಯಿಂದಾಗಲಿ, ರೇಲ್ವೇಯಿಂದಾಗಲಿ ಆಕೆಯನ್ನು ಯಾರೂ ಕಳಿಸಲಾರರು ಕಂಟು ತ್ತ ಕಂಟುತ್ತ ಸಾವಕಾಶವಾಗಿ ಆಕೆಯಿಂದಾಕ್ಕ ವಳು,

ದೇಶೀ ಸಂಸ್ಥಾನಗಳು

ಪರರಾಷ್ಟ್ರಗಳ ಬಗ್ಗೆ ಕಾಂಗ್ರೆಸ್ಸಿನ ರಾಜ ನೀತಿ ಯಾವ ಬಗೆಯಾಗಿರಬೇಕೆಂಬುದನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಪೂರ್ಣ ನಿರ್ಧರಿಸಿದಷ್ಟರ್ಲೇ ಅಂದಮೇಲೆ ನಮ್ಮ ಲ್ಲಿಯ ದೇಶೀಯ ಸಂಸ್ಥಾನಗಳ ಬಗ್ಗೆ ಕಾಂಗ್ರೆಸ್ಸಿನ ವ್ಯವಹಾರ ಯಾವ ತರದ್ದಿರಬೇಕೆಂಬುದನ್ನು ಗೊತ್ತು ಪಡಿಸಲಿಕ್ಕೆ ಜನರು ಕಳಿದ್ದು ಸ್ವಾಭಾವಿಕವೇ ಈ ಸಂಸ್ಥಾನಗಳ ಆಂತರ್ವ್ಯವಸ್ಥೆಗೆ ಬಾಧೆ ಬಾರದಂತೆ ನಡೆಯುವದೇ ಕಾಂಗ್ರೆಸ್ಸಿನ ಧೋರಣವಿರತಕ್ಕದ್ದೆಂದು ನಾಗಪೂರದಲ್ಲಿ ಹೋದ ಸಾರೆ ಕೂಡಿದ ಕಾಂಗ್ರೆಸ್ಸಿನ ಕಾಲಕ್ಕೆ ಸಾಧಾರಣವಾಗಿ ನಿರ್ಣಯಿಸಲ್ಪಟ್ಟಿದೆ ಸ್ವತಃ ಸಂಸ್ಥಾನಗಳೇ ಇದಕ್ಕೂ ಹಚ್ಚಿನ ಧೋರಣವನ್ನಾಗಲೀ, ಹೆಚ್ಚಿಗೆ ಸ್ಪಷ್ಟರೀತಿಯಿಂದಾಗಲೀ, ಕಾಂಗ್ರೆಸಿನವರು ಮಾಡತಕ್ಕದ್ದಿತ್ತೆಂದು ಅನ್ನಲಾರೆವು ಆದ್ದರಿಂದ ಆ ರರಾಪಿಗೆ ನಮ್ಮತಿ ಬೀಳುವಂತೆಯೇ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯವರು ತಮ್ಮ ಧೋರಣವನ್ನು ನಿರ್ಣಯಿಸಬೇಕಾಗುವದು ಆ ರರಾವಿಗೆ ಕಿಂಚಿತ್ತಾದರೂ ಬಾಧೆ ಬರಬಾರದೆಂದು, ಅಸಹಕಾರದ ಸಂದೇಶವನ್ನು, ಕಾಂಗ್ರೆಸ್ಸಿನ ಸಲುವಾಗಿ ಕೆಲಸ ಮಾಡತಕ್ಕವರು ಸಂಸ್ಥಾನಗಳಿಗೆ ಮುಟ್ಟಿಸಿರುವದಿಲ್ಲ. ಆದರೆ ತ್ರಿಕಾಲದಲ್ಲಿಯೂ ಜನರ ಮನಸ್ಸಿಗೆ ಪಾತ್ರವಾಗಿ ಅಸಹಕಾರದಲ್ಲಿ ಅಡಕವಾಗಿದ್ದ ಆದರೆ ಶಾಶ್ವತ, ಚಿತ್ತಶುದ್ಧಿ, ಅಧವಾ ಬಡತನವನ್ನು ಹೋಗಲಾಡಿಸುವಂಥ ಅಸರ ಆರ್ಥಿಕಸ್ವರೂಪದ ಪ್ರಶ್ನೆ ಇವುಗಳನ್ನು ಮಾತ್ರ ಸಂಸ್ಥಾನದಲ್ಲಿ ಹರಡುವಂತೆ ವ್ಯಯತ್ನ ಬಿಟ್ಟಿದ್ದಾರೆ. ಅವು ಯಾವವೆಂದರೆ:— ಮದ್ಯಪಾನ, ಸ್ವದೇಶಿ, ಹಿಂದೂ ಮುಸಲ್ಮಾನರ ಐಕ್ಯ, ಅಹಿಂಸಾ ಮತ್ತು ಅಸ್ಪೃಶ್ಯತೆ. ಎಲ್ಲಿಯು ತನಕ ಈ ಸಂಸ್ಥಾನಗಳಲ್ಲಿಯ ಪ್ರಜೆಗಳನ್ನು ಅಲ್ಲಲ್ಲಿಯ ರಾಜರುಗಳು ಒಳ್ಳೇ ರೀತಿಯಿಂದ ನಡೆಸಿಕೊಳ್ಳುವರೋ ಅಲ್ಲಿಯು ವರೆಗೆ ಈ ಸಂಸ್ಥಾನಗಳ ಅಭಿವೃದ್ಧಿಯನ್ನೇ ಕಾಂಗ್ರೆಸ್ಸವು ಬಯಸುತ್ತ ಹೋಗುವದು. ಪ್ರಜೆಗಳನ್ನು ಕೆಟ್ಟ ರೀತಿಯಿಂದ ನಡೆಸುತ್ತ ಹೋದರೂ ಕೂಡಿ, ಯಾವದೇ ತರದ ಒತ್ತಳಿಕೆ ಅಧವಾ ಆಗ್ರಹವನ್ನು ತರುವದು ಕಾಂಗ್ರೆಸ ನವರಿಗೆ ಶಕ್ಯವೂ ಇಲ್ಲ ಮತ್ತೂ ಹಾಗೆ ಅವರು ಮಾತಾಡಲಿಕ್ಕೂ ಇಚ್ಛಿಸುವದಿಲ್ಲ. ಆವರೆ ಸಂಸ್ಥಾನಗಳ ದುಸ್ಕೃತಿಗಳನ್ನು ಹೊರಗೆಡವಿ ಅವುಗ್ಗೆ ಜನರಲ್ಲಿ ಜಾಗೃತಿಯನ್ನು ಮಾತ್ರ ಉಂಟು ಮಾಡಲಿಕ್ಕೆ ಬಿರುವಂತಿದೆ ಆದ್ದರಿಂದಲೇ ರಾಷ್ಟ್ರೀಯ ಸಪ್ತದ ಪ್ರತ್ಯೇಕ ಪತ್ರಿಕೆಗಳೆಲ್ಲಿ ಈ ದೇಶೀಯ ಸಂಸ್ಥಾನಗಳಲ್ಲಿಯ ಪ್ರಜೆಗಳ ಕಷ್ಟಗಳನ್ನು ಪ್ರಸಂಗವಿದಾಗೆಲ್ಲ ಕಡುತರವಾದ ಟೀಕೆಗಳಿಂದ ಬಿಚ್ಚಿಸುತ್ತಾರೆ. ಉದಾಹರಣಾರ್ಥ, ಮೈಸೂರಿನ ಶರ ಜಮ್ಮಾಲಂಬ ಹೆಚ್ಚು ಅವನ ಸಂಗಡಿಗರು ಬಿಕಾನೇರ ಸಂಸ್ಥಾನದಲ್ಲಿ ಸ್ವದೇಶಿ ಸಂಬಂಧವಾಗಿ ಜನರನ್ನು ಜಾಗೃತ ಮಾಡಿ ಲಿಕ್ಕೆ ಪ್ರಯತ್ನಿಸುತ್ತಿರುವಾಗ್ಗೆ ಅಲ್ಲಿಯ ರಾಜರು ವಿಚಾರವಿಲ್ಲದೇ ಸೂಕ್ಷ್ಮದಿಂದ ಅವರಿಗೆ ಅನ್ಯಾಯವನ್ನುಂಟು ಮಾಡಿದ್ದಕ್ಕಾಗಿ ದೇಶದಲ್ಲೆಲ್ಲ ಆ ರಾಜನ ಒಗ್ಗೆ ಉಂಟಾದ ಕತ್ತು ತರವಾದ ಪ್ರತೀಭೆಯು ಸ್ವಾಭಾವಿಕವೇ ಅದ್ದರಿಂದ ಉದಾರ ಬುದ್ಧಿಯು ಸಂಸ್ಥಾನಗಳೆಲ್ಲ ಕಾಂಗ್ರೆಸ್ಸಿನಿಂದ ಕಮಗೆ ಉತ್ತೇಜನವೇ ದೊರಯುವನೆಂದು ತಿಳಿಯ ಬಹುದು. ಹಾಗಂಯೇ ದುಷ್ಟ ಬುದ್ಧಿಯಿಂದ ಪ್ರೇರಿತವಾದ ಸಂಸ್ಥಾನಗಳಲ್ಲ ದುರ್ನಡತೆ ಮತ್ತು ದಬ್ಬಾಳಿಕೆಗಳ ಬಗ್ಗೆ ಓಪಳವಾದರೆ ಕಾಂಗ್ರೆಸಿನಲ್ಲಿ ಭಯಂಕರವಾದ ಕ್ಷೋಭೆ ಉತ್ಪನ್ನವಾಗುವದೆಂಬಿದನ್ನು ಅರಿತಿರಬಹುದು ಇಲ್ಲದೇ ಈ ರಾಜರುಗಳ ದೀನವಾದ ಅವಸ್ಥೆಯ ಒಗ್ಗೆ ಕಾಂಗ್ರೆಸವು ಅವರಿಗೆ ಸಹಾನುಭೂತಿಯನ್ನು ತೋರಿದೇ ಇರಲಾರದು ಸಾಮ್ರಾಜ್ಯ ಸರಕಾರದವರು ತಮ್ಮ ವಿಶಿಷ್ಟ ಉದ್ದೇಶ ಸಾಧನೆಯು ಆಟದಲ್ಲಿ ಈ ರಾಜರುಗಳನ್ನು ಚಪರಂಗಿನ ಪೇದೆಯಂತೆ ಉಪಯೋಗಿಸಿದ್ದಾರೆ. ಆಗಿಂದಾಗ್ಗೆ ಈ ರಾಜರುಗಳ ಮೇಲೆ ತರಲ್ಪಡುವ ಅನ್ಯಾಯ ಮತ್ತು ಕವಟಗಳನ್ನೊಳಗೊಂಡ ಒತ್ತಳಿಕೆಗಳನ್ನು ಕಡೆಪುಕೊಳ್ಳುವ ಸಾಮರ್ಥ್ಯವೇ ಅವರಲ್ಲಿಲ್ಲ ಆದ್ದರಿಂದ ಪ್ರಜೆಗಳ ಅಧಿಕಾರವು ಹೆಚ್ಚುತ್ತ ಹೋದಂತೆ ತಮ್ಮ ಮಾನ ಭಂಗವಾಗುವಂಥ ದೀನ ಪರಿಸ್ಥಿತಿಯು ಅಳಿದು ಹೋಗುವದೆಂಬುವನ್ನು ಈ ರಾಜರಗಳೆಲ್ಲ ತಿಳಿದಿರಲಿ

× ×

ಪತಿತ ಭಗಿನಿಯರು

ನಮ್ಮ ಪತಿತ ಭಗಿನಿಯರಾದ ವೇಶ್ಯಾ ಸ್ತ್ರೀಯರನ್ನು ನೀಚ ವೃತ್ತಿಯಿಂದ ದೂರ ಮಾಡಿ ಅವರನ್ನು ಒಳ್ಳೇ ಮಾರ್ಗಕ್ಕೆ ಹಚ್ಚುವ ಕಾರ್ಯವನ್ನು ಬಾರೀಕಾಲ ವಟ್ಟಣದಲ್ಲಿಯ ಜನರು ಒಳ್ಳೇ ಅತ್ಸುತಿಯಿಂದ ಪ್ರಾರಂಭಿಸಿದ್ದಾರೆಂಬುದು ಸಂತೋಷದ ಮಾತು. ಈ ಸ್ತ್ರೀಯರಲ್ಲಿ ಅನೇಕರಿಗೆ ಸಮರ್ಥವು ಫಿಟ್ಟಿಯಾಗಿ ಅವರಲ್ಲಿ ಕೈರಾಟಿಗಳು ಪ್ರಸಾರವಾಗುವಂತೆ ವ್ಯಯತ್ನ ನಡೆದಿದೆಯೆಂದು ಡಾ. ರಾಯರವರು ಒರೆದು ತಿಳಿಸಿದ್ದಾರೆ ಜನಾಬ್ದರಿಯುಳ್ಳ ಈ ಮಹತ್ಕಾರ್ಯವನ್ನು ಮಾಡಲಿಚ್ಛಿಸುವ ತರುಣರಿಗೆ ಸ್ವತಃ ತಾವೇ ಮಾರ್ಗದರ್ಶಿಗಳಾಗುವೆನೆಂದು ಹಿಗರಿಸಿ ಪ್ರಾಮಾಣಿಕವರು ಪತ್ರವನ್ನು ಕೂಟ್ಟಿದ್ದಾರೆ. ಅತ್ಯವಶ್ಯಕವಾದ ಈ ಸೇವೆಯಲ್ಲಿ ಸ್ವಸಂತೋಷವಿಂದ ನಿರಿಕೊಂಡ ಜನರು, ಅರ್ಜಿಕ್ಕೆ ಈ ಕಾರ್ಯವನ್ನು ಬಿಡತಿಂಪು ಸಾನ ಆರಿಸುತ್ತೇನೆ ಪೊಲೀಸ್ ನಿರಾಶ್ರಿತಾಗವದೆಂಬಿದನ್ನೂ ಈ ಕಾರ್ಯದಲ್ಲಿ ಜಯುವ ಸಾವಕಾಸವಾಗಿ ದೊರೆಯುವದೆಂಬಿದನ್ನೂ ಅವರು ತಿಳಿದಿರಲಿ ಹುರಿಮಾಂಡಿಕೊಂಡಾಗಲೀ ಜೀಗಸೆ ಸ್ರಸಿದ್ಧ ವರುಷನಾಗಬೇಕೆಂಬ ಆಕೆಯಿಂದಾಗಲೀ ಮಾಡುವ ಕಾರ್ಯವಿದಲ್ಲ ಅದ್ದರಿಂದ ಕಿಂಕರಾಪಿಷ್ಟಿಯಿಂದ ಪೇರಿತರಾಗಿ ನೀವಾ ವೃತ್ತಿಯ ಸ್ಥೈರ್ಯವನ್ನು ತಿಳಿಸಿಕೊಂಡ ಪನುಷ್ಯನ ಪರೀಕ್ಷೆಯು ಇದರಲ್ಲಿ ಸಿಪಾಯಿಯೂ ಆಗುತ್ತದೆ ಬಾರೀ ನಾಲಯವರು ಹಾಕಿ ಕೊಟ್ಟಿ ಮೇಲ್ಪಂಕ್ತಿಯನ್ನು ಬೇರೆ ಬೇರೆ ನಗರದ ಜನರೂ ತೀತ ಟೀಕೊಂಡು ನಾನು ಹೇಳಲೇ ಇರಲಾರೆ ಸ್ವರಾಜ್ಯ ದೊರೆತ ಮೇಲಿನ ಈ ಚಿತ್ತ ಶುದ್ಧಿಯ ಕಾರ್ಯವು ನಡೆದಿರಬೇಕು. ಈ ಕೆಲಸವನ್ನು ಮಾಡಲಿಕ್ಕೆ ಪ್ರತಿಯೊಬ್ಬ ಮನುಷ್ಯನೂ ಯೋಗ್ಯನಾಗಲಾರನು. ಈ ಕಾರ್ಯದಲ್ಲಿ ಯಾರಿಗೆ ಅಂತರ್ನೀರಣೆಯಿನಿಸುವದೋ, ಮತ್ತೂ ಇದಕ್ಕೆ ಅತ್ಯವಶ್ಯಕವಾದ ಪವಿತ್ರತೆಯು ಯಾರಲ್ಲಿ ಉಂಟೋ, ಅಂಥವರು ದಿನೇ ದಿನೇ ಬೆಳೆಯ ತ್ತಿರುವ ಈ ಹೇಸಿ ವ್ಯಸನವನ್ನು ಕಿತ್ತಿ ಹಾಕುವದರಲ್ಲಿ ತೊಡಗಿಕೊಳ್ಳಬೇಕು. ಸ್ವಾಭಾವಿಕವಾಗಿ ಈ ಚಳವಳಿಯಲ್ಲಿ ಎರಡು ಭೇದಗಳುಂಟು. ಪತಿತ ಭಗನಿಯರು ನಮ್ಮವರೇ ಎಂದು ಶುದ್ಧ ಪಾತಿ ಅವರನ್ನು ಮೆರಳಿತೆಗೆದು ಕೊಳ್ಳುವದೊಂದು, ತನ್ನ ಭಗಿನಿಯಲ್ಲಿಯೇ ವಿಷಯ ವಾಸನೆಯನ್ನು ಹುಟ್ಟಿಸಿ, ಈ ವಾಸನೆಗೆಂದು ಆಕೆಯನ್ನು ಬಲಿ ಕೂಡಲಿಕ್ಕೆ ಅವನನ್ನು ಎಳೆಯುವಂಥ, ಮತ್ತು ಮನುಷ್ಯನನ್ನು ಅವನತಸ್ಥಿತಿಗೆ ಜಗ್ಗುವಂಥ, ಈ ವ್ಯಸನದಿಂದ ಜನರ ಮನಸ್ಸನ್ನು ತಿರುಗಿಸುವದು ಎರಡನೇದು. ಈ ಎರಡೂ ತರದ ಕೆಲಸಗಳಿಗೆ ಒಂದೇ ಬಗೆಯ ಪದ್ಧಣಗಳಾಗಬೇಕು ಮತ್ತೂ ಈ ಕೆಲಸವು ಸಲಕಾರಿಯಾಗಬೇಕಾದರೆ, ಮೇಲೆ ಹೇಳಿದ ಎರಡೂ ತರದ ಕಾರ್ಯಗಳನ್ನು ಒಂದೇ ಕಾಲಕ್ಕೆ ಮಾಡಬೇಕು.

(ಯಂಗ ಇಂಡಿಯಾ) ಮೋಹನದಾಸ ಕರಮಚಂದ ಗಾಂಧೀ.

———

ಶಾಮರಾವ ವಿಠ್ಠಲರಾವ ಮುಂಗಳವೇಢೇಕರ ಮತ್ತು ಕಂಪನಿ

ಸರಾಫೀ ವ್ಯಾಪಾರಸ್ಥರು

ಬಾಗಲಕೋಟೆ

ಬೆಳ್ಳಿ, ಒಂಗಾರ, ಪಂಚಲೋಹ, ಹರಳು, ಮೊದಲಾದ ವಸ್ತುಗಳು ನಮ್ಮಲ್ಲಿ ರಿಯಾಯ್ತಿ ಬೆಲೆಗೆ ದೊರೆಯುತ್ತವೆ. ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧಿಹೊಂದಿದ ಕಸೂತಿಪೂರ್ಣ ಕಾಂಗಲಿಗಳಲ್ಲಿಯೂ ಒಳ್ಳೆ ಪದ್ಧತಿಯ ಎಲ್ಲ ತರದ ಬಟ್ಟೆಗಳೂ ಸಾಮಾನುಗಳೂ ಇವೆ. ಬೆಳ್ಳಿಯ ತಿರುಗಣಿತಂಬಿಗೆ, ಬೆಳ್ಳಿ ಒಂಗಾರದ ಒಡವೆ ಗಡಿಗೆ ಒಂಗಾರದ ಗುಲಾಬಿ ಹೂವು, ಮುಗ್ಗಿಮಾಲಿಗಳು ಒಳ್ಳೆ ಮಾಟ. ಬೆಂಗಳೂರ ಕಛೇರಿಯ ಹಾಗೂ ಸಾಮಾನುಗಳೂ ಉಂಟು.

ಅಲ್ಲದೇ ಪೇಲ್ತರದ ಕಸ್ತೂರಿ ಕೇತಕಿರವೂ ನಮ್ಮಲ್ಲಿ ದೊರೆಯುತ್ತಿದೆ.

ವ್ಯವಹಾರಿಕತನದ ಬಗ್ಗೆ ನಮ್ಮ ಅಂಗಡಿಯು ಹೆಸರಾಗಿದೆ.

ಕೃಷ್ಣರಾವ ಶ್ಯಾಮರಾವ
ಮುಂಗಳವೇಢೇಕರ
ವ್ಯವಸ್ಥಾಪಕ

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಪ್ರತಿಗಳು ಸ್ವಲ್ಪವೇ ಹೊರಬೀಳುವವು

ಬೇರೆ ಬೇರೆ ರಾಷ್ಟ್ರಗಳಲ್ಲಿಯ

ಅಸಹಕಾರ

ಎಂಬ ಗ್ರಂಥವು ಅಚ್ಚಾಗುತ್ತಲಿದೆ. ಬೇಗನೆ ಹೊರಬೀಳುವದು. "Non-co-operation inother lands" ಇದರ ಭಾಷಾಂತರ ಮಾಡಿಸುವ ಕನ್ನಡಿಗರ ದಶೆಯಿಂದ ಒದಗಿಬಂದಿದೆ. ಬೇಗನೇ ಹೆಸರು ನೊಂದಾಯಿಸಿರಿ. ಶಿಷ್ಟವಾದ ಅಚ್ಚುಗಟ್ಟಿದ ಛಾಪಿನ ಅಂದವಾದ ಮುದ್ರಣ.

ವಿಳಾಸ :— ನರಸಿಂಹ ಶ್ರೀನಿವಾಸ ಕವಲಾಪೂರ
ಮಂಗಳವಾರ ಪೇಟೆ ಧಾರವಾಡ

ಶ್ಯಾಮರಾವ ಮತ್ತು ರಾಜೇರಾವ ಮುಂಗಳವೇಢೇಕರ ಕಂಪನಿ.

ಜವಳೀ ವ್ಯಾಪಾರಸ್ಥರು

ಬಾಗಲಕೋಟೆ

ಕೈ ನೂತಿನಿಂದ ಸಿದ್ಧವಾದ ಖಾದೀ ಅರಿವೆಯೂ, ಹಿಂದುಸ್ತಾನದ ಗಿರಣಿಗಳಲ್ಲಿ ತಯಾರಾದ ಬೇಕಬೇರೆ ತರದ ಎಲ್ಲಾ ಜವಳೀ ವಸ್ತುಗಳೂ ನಮ್ಮಲ್ಲಿ ದೊರೆಯುತ್ತವೆ. ಒಳ್ಳೆ ವಿಧವಾದ ಅಂದ ದೇಶೀ ಧೋತ್ರಂಗಳೂ ಶ್ಯಾಲಿಗೆಗಳೂ ನಮ್ಮಲ್ಲಿ ವಿಶೇಷ.

ಒಂದಾವರ್ತಿ ನಮ್ಮಲ್ಲಿ ಬಂದು ಹೋದರೆ ನಮ್ಮ ವ್ಯಾಪಾರಿಕತನದ ಬಗ್ಗೆ ಯಾರಿಗೂ ಏನೂ ಸಂದೇಹ ಉಳಿಯುವದು.

ಪದ್ಮೋಜಾ ಸಿಂಗರಿ
ವ್ಯವಸ್ಥಾಪಕ.

ನೀತಿ ಧರ್ಮ

ಮಹಾತ್ಮಾ ಗಾಂಧಿಯವರ ನೀತಿಧರ್ಮವೆಂಬ ಅತ್ಯುತ್ಕೃಷ್ಟವಾದ ಪುಸ್ತಕದ ಅನುವಾದವು.

ಪ್ರತಿಯೊಬ್ಬ ಕನ್ನಡಿಗನು ಓದಿ ಮನನ ಮಾಡಲಿಕ್ಕೆ ಯೋಗ್ಯವಾದದ್ದು ಸಮಯ ಬಂದಾಗ ಈಗಲೇ ಹೆಸರುಗಳನ್ನು ರಿಜಿಸ್ಟರ ಮಾಡಬೇಕು.

ವಿಳಾಸ — ರಂಗಾಚಂದ್ರ ಸಂಬರಾವ ಸಾಲಿ. ಬಿ. ಏ.
ವಿಜಾಪೂರ

ಹೊಸ ಸುದ್ದಿ! ಹೊಸ ಸುದ್ದಿ!!

ಹಿಂದುಸ್ತಾನದ ರಾಷ್ಟ್ರೀಯ ಸಭೆ

(Indian Administration)

ರಾಜ್ಯಪದ್ಧತಿಯ ಸುಧಾರಣೆಯ ಬಗ್ಗೆ ಮಾಡಿದ ವಿವೇಚನೆ

ನವೆಂಬರ ಸುಧಾರಣೆಯ ಸಮಗ್ರ ವಿವೇಚನೆ ಮಾಡುವದು.

ಗಳಿಂದಿಗೆ ಬರಿಯಲ್ಪಟ್ಟಿದೆ.

ಮೊದಲೇ ಹೆಸರು ರಿಜಿಸ್ಟರ ಮಾಡಿಕೊಂಡವರಿಗೆ ಪತ್ರಿಕೆಯು ಕಳುಹಿಸಲ್ಪಡುವದು.

ವಿಳಾಸ — ಸಂಪಾದಕ ಕರ್ನಾಟಕ ನವಜೀವನ
ಬಾಗಲಕೋಟೆ.

ಮಹತ್ವದ ಸೂಚನೆಯು.

ಕನ್ನಡ ನವಜೀವನದ ಕಛೇರಿಯು ಬಾಗಲಕೋಟೆಯಲ್ಲಿರುವುದು. ಅದಕ್ಕೆ ಸಂಬಂಧಿಸಿದ ಪತ್ರ ವ್ಯವಹಾರ ಮನಿಯಾರ್ಡರ ಮೊದಲಾದವುಗಳೆಲ್ಲ ಕಳಗಿನ ವಿಳಾಸಕ್ಕೆ ಕಳಿಸಲ್ಪಡಬೇಕು.

"ವ್ಯವಸ್ಥಾಪಕ ಕನ್ನಡ ನವಜೀವನ"
ಬಾಗಲಕೋಟೆ ಜಿಲ್ಲಾ ವಿಜಾಪೂರ.

ಚಂದಾದಾರರಲ್ಲಿ

ವಿಜ್ಞಾಪನೆ.

ಕನ್ನಡ ನವಜೀವನವನ್ನು ವ್ಹಿ. ಪಿ. ಯಿಂದ ಕಳಿಸುವ ಪದ್ಧತಿಯನ್ನು ನಾವು ಇಡುವದಿಲ್ಲ. ಆದ್ದರಿಂದ ಹೊಸದಾಗಿ ಚಂದಾದಾರರಾಗಲಿಚ್ಛಿಸುವವರು ವರ್ಗಣೀ ಹಣವನ್ನು ಮನಿಯಾರ್ಡರದಿಂದ ಮುಂಗಡ ಕಳಿಸಿಕೊಡಬೇಕು.

ಈಗಾಗಲೇ ಹೆಸರುಗಳನ್ನು ನೊಂದಾಯಿಸಿದ ಮೊದಲಿನ ಆಶ್ರಯದಾತರಿಗೆ ಮಾತ್ರ ಸರಬಿಕೆಗಳು ವ್ಹಿ. ಪಿ. ಯಿಂದ ಕಳಿಸಲ್ಪಡುವವು.

ವ್ಯವಸ್ಥಾಪಕ ಕನ್ನಡ 'ನವಜೀವನ'
ಬಾಗಲಕೋಟೆ

ಈ ಪತ್ರವನ್ನ ಮಿ॥ ಗುಂಡೆರಾವ ರಾಮಚಂದ್ರ ಮಣೂರಕರವರು ತಮ್ಮ ವಿಜಾಪೂರ ಗ್ರಾಮೋದ್ಧಾರೀ ಮುದ್ರಾಲಯದಲ್ಲಿ ಮುದ್ರಿಸಿ, ಮಾಲಕ ಶ್ರೀನಿವಾಸ ರಂಗೇರಾವ ಮುಂಗಳವೇಢೇಕರ ಬಾಗಲಕೋಟೆ ಇವರ ಗೋಸ್ಕರ ವಿಜಾಪೂರದಲ್ಲಿ ಪ್ರಸಿದ್ಧಪಡಿಸಿದರು.

ನಿದ್ರೋಹಿ ವಿರುದ್ಧ ಅಪರಾಧಿ.

ವಾರ್ಷಿಕ ವರ್ಗಣಿ ರೂ. ೪-೧೨-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೩
ನೂತನ ಸಂಚಿಕೆ ಬೇಕಾದವರು
೨-೧-೬ ತಿಕೀಟು ಕಳಿಸಬೇಕು

ಶ್ರೀ.

ಜಾಹೀರಾತಿನ ದರಃ-
'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಸ್ಥಿರವೊಂದು ಸಾರೆ ೧ ರೂಪಾಯಿ ಕಾಯಸು ಜಾಹೀರಾತುಗಳ ಬಗ್ಗೆ ಸಮಕ್ಷವು ಅಥವಾ ಪತ್ರದ್ವಾರದಿಂದ ತಿಳಿಕೊಳ್ಳಬೇಕು.

ಕನ್ನಡ ನವಜೀವನ.

ಮೆಹಾತ್ಮಾಗಾಂಧಿಯವರ 'ಯಂಗ ಇಂಡಿಯಾ' ಮತ್ತೂ 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಮಾರ್ಗಶೀರ್ಷ ಶುದ್ಧ ೨ ಶಕೆ ೧೮೪೩. ಗುರುವಾರ ತಾ. ೧೯ನೇ ದಿಶಂಬರ ೧೯೨೧ ಇಸ್ವಿ. | ಸಂಚಿಕೆ ೨

ಟಿಪ್ಪಣಿಗಳು.

ಭೂಷಣ ಮತ್ತೂ ದೂಷಣ.

ಭೂಷಣಯುಕ್ತ, ಹಾಗೆಯೇ ದೂಷಣಯುಕ್ತ ಅನೇಕ ಸಂಗತಿಗಳು ಈ ನಾಲ್ಕಾರು ದಿವಸಗಳಲ್ಲಿ ನನಗೆ ನಿವೇದಿಸಲ್ಪಟ್ಟಿವೆ. ಅಸಹಕಾರಿಗಳಿಗೆ ಛಾಯು! ಹಿಂದೂ ಮುಸಲ್ಮಾನರಿಂದ ವಾಶೀ ಜನರಿಗೆ ಬಡತ! ಅವರ ಮೇಲೆ ವಾರ್ಶೀಯವರ ಗುಂಡಿನ ಮಳೆ! ಬಾವೀ ಟೊಪ್ಪಿಗೆ ಬಾದೀ ಅಂಗಿಯುವರ ಮೇಲೆ ಕ್ರಿಶ್ಚನ್ನರ ಹಲ್ಲೆ! ಕ್ರಿಶ್ಚನ್ನರ ಮೇಲೆ ಹಿಂದೂ ಮುಸಲ್ಮಾನರ ಹಲ್ಲೆ! ಈ ಬಗೆಯ ಸುದ್ದಿಗಳಲ್ಲಿ ಅನೇಕ ತರದ ಸಂಗತಿಗಳು ಅಡಕವಾಗಿವೆ—ವಾಶೀರ್ಯವರ ಹಲ್ಲೆಯಿಂದ ಹಿಂದೂ ಮುಸಲ್ಮಾನರನ್ನು ವಾಶೀರ್ ಜನರೇ ವಾರುಮಾಡುತ್ತಾರೆ. ಹಿಂದೂ ಮುಸಲ್ಮಾನರನ್ನು ಹಲ ಕೆಲವು ಕ್ರಿಶ್ಚನ್ನರೇ ರಕ್ಷಿಸುತ್ತಿರುವರು. ಹಿಂದೂ ಮುಸಲ್ಮಾನರು ವಾರ್ಶಿ ಕ್ರಿಶ್ಚನ್ನ ಈ ಎರಡೂ ಧರ್ಮದವರಿಗೆ ಆಶ್ರಯ ಕೊಡುತ್ತಾರೆ. ಮತ್ತೂ ಜೀವದ ಎಗ್ಗಿಲ್ಲದೇ ಅಸಹಕಾರಿಗಳು ಶಾಂತತೆಯನ್ನುಂಟು ಮಾಡುತ್ತಿರ್ದಾರೆ ಅತಿಶಯ ಬಲವಾದ ಮತ್ತು ಖಂಡಕ್ಕೊಂದು ವಿರುದ್ಧವಾದ ಮನೋ ಭಾವನೆಗಳಿಂದ ಛಿನ್ನವಿಚ್ಛಿನ್ನವಾಗುವಂಥ ದುರ್ದೈವಿಯು ನಾನೆಂದೂ ಆಗಿಲ್ಲ ಇಂಥ ಗಂಡಾಂತರ ಕಾಲದಲ್ಲಿ ಮಾರ್ಗ ತೋರಿಸಿ ವೃತ್ಯುವಿನ ದವಡೆಯಲ್ಲಿ ಹೋಗಿ ನಿಗಿಬೀಳೆರೆಂದು ನನ್ನಗೆಳೆಯರಿಗೆ ಹೇಳಿ, ಸ್ವತಃ ನಾನೇ ಆ ಮೃತ್ಯುವಿನಿಂದ ದೂರ ಉಳಿಯುವ ದರ್ಥ ಪ್ರಸಂಗವಂತೂ ನನಗೆ ಎಂದೂ ಬಂದಿಲ್ಲ! ನನ್ನ ಬಹಿರ್ಗತ ಅಧಾರವೆಂದರೆ ಉಪವಾಸವೇ; ಅಂತರ್ಗತ ಶಕ್ತಿಯಂದರೆ ಈಶ್ವರನಲ್ಲಿಟ್ಟ ನನ್ನ ಮನಃಪ್ರಾರ್ಥನೆ. ನನ್ನ ಎಲ್ಲ ಶಕ್ತಿಯೂ ಹಾರಿಹೋದಂತೆ ೧೭ ನೇ ತಾರೀಖಿನ ದಿವಸ—ಯು ವರಾಜರು ಬಂದಾಗ್ಗ ಮುಂಬಯಿಯಲ್ಲಿ ದಂಗೆಯಾದ ದಿನ--ಭಾಸವಾಯಿತು. ಜನ ಸಮ್ಮರ್ದನೆಯಲ್ಲಿ ಪರಿಣಾಮವಾಗುವಂಥ ನನ್ನ ಬಲವು ಅಳಿದು ಹೋದ ಕಾರಣವೇನು? ಅಹಿಂಸಾ ಶಕ್ತಿಯು ಎಲ್ಲಿ ಅಡಿಗಿತು? ನಾನು ಮಾಡತಕ್ಕದ್ದಾದರೂ ಏನು? ಸರಕಾರದ ಸಹಾಯ ತೆಗೆದು ಕೊಳ್ಳಿರೆಂದು ಪೀಡಿತರಾದ ಜನರಿಗೆ ಹೇಳಲಿಲ್ಲ; ಹೇಳುವಂತೆಯೂ ಇಲ್ಲ. ತೀರ್ಪನ್ನು ಸಾರಲಿಕ್ಕೆ ಪಂಚಾಯತವಂತೂ ಇಲ್ಲವೇ ಇಲ್ಲ; ಯಾರಿಗಾದರೂ ಹೊರೆಯಿಡಬೇಕೆಂದರೆ, ಶಾಂತತೆಯನ್ನು ಸ್ಥಾಪಿಸಲಿಕ್ಕೆ ತಕ್ಕಷ್ಟು ಬಲವುಳ್ಳವರು ಯಾರೂ ಇಲ್ಲ. ಶಾರೀರಕ ಬಲವುಳ್ಳ ಸೈನ್ಯವನ್ನು ಸಿದ್ಧಗೊರಿಸೇವ ಶಕ್ತಿಯು ನನ್ನಲ್ಲಿಲ್ಲ; ಮತ್ತೂ ನನಗೆ ಅದು ಬೇಡವೇ ಬೇಡ; ಜನ ಸಮ್ಮರ್ದನೆಯಿಂದುಂಟಾದ ಹಿಂಸೆಯಿಂದ ಪೀಡಿತರಾದವರ ದುಃಖವನ್ನು ಹೇಗೆ ಪರಿಹಾರ ಮಾಡಬೇಕು? ಖಂಡಿತವಾಗಿಯೂ ರೇಗಿಸಲ್ಪಟ್ಟ ವಾಶೀರ್ ಕ್ರಿಶ್ಚನ್ನ ಜನರಿಂದ ಹರಿದು ಚೂರು ಚೂರು ಮಾಡಿಸಿಕೊಳ್ಳಲಿಕ್ಕೆ ಎನೂ ಅಡ್ಡಿ ತೋರಲಿಲ್ಲ; ಖಂಡು ಬೇಳೆ ಅಡ್ಡಿ ಮಾಡಿದ್ದರೆ ನಾನು ಹೆಚ್ಚೆಗೇ ರಕ್ತ ಪಾತಕ್ಕೆ ಸಹಾಯ ಮಾಡಿದಂತಾಗುತ್ತಿತ್ತು. ತಪ್ಪಿಸಲಿಕ್ಕೆ ಬಾರದಂಥ ಕುತ್ತಿನಲ್ಲಿ ತೊಡಕಿಕೊಂಡಿದ್ದರೆ ಭಟನು ಹಿಂದೆ ಮುಂದೆ ನೋಡುತ್ತ ಅಂಜತಕ್ಕದ್ದಲ್ಲೆಂಬದನ್ನು ಬಲ್ಲೆ; ಆದರೆ ಕೊಸ್ಲಿಸಿಕೊಳ್ಳುವಂಥ ಕುತ್ತಿನಲ್ಲಿ ಹುಂಬತನದಿಂದ ಸೇರಿಕೊಳ್ಳತಕ್ಕದ್ದಲ್ಲೆಂಬದನ್ನೂ ಬಲ್ಲೆ ಹಾಗಾದರೆ ನಾನು ಮಾತಕ್ಕಾದ್ದೇನು? ಕಟ್ಟ ಕಡಿಗೆ ನನ್ನ ಆತ್ಮವನ್ನು ಶಾಂತಗೊಳಿಸಲಿಕ್ಕೆ ಉಪವಾಸವೇ ಉಚಿತೆವೆಂದು ತೋರಿತು. ಮಾನವೀ ಕೃತಿಗಳಿಂದ ಕೊಲ್ಲಿಸಿಗೊಳ್ಳುವದಂತೂ ನನಗೆ ಸರಿದೋರಲಿಲ್ಲ. ಅಂದ ಮೇಲೆ ಆ ಪರಮಾತ್ಮನಲ್ಲಿಯೇ ಮೊರೆಯಿಟ್ಟು, ಅವನು ನನ್ನ ಪ್ರಾರ್ಥನೆಯನ್ನು ಸ್ವೀಕರಿಸುವ ವರೆಗೆ ಎನೂ ತಿನ್ನದೇ ಸಾಯುವದು ಅತ್ಯವಶ್ಯವಾಯಿತು. ದಿವಾಳೀ ಏರೋರನಂತೆ ಕುಳಿತು ಕೊಳ್ಳುವದೊಂದೇ ಮಾರ್ಗವು ನನಗೆ ಉಳಿದಂತಾಯಿತು ನಿರಪರಾಧಿ ಜನರಿಂದ ಹಣವನ್ನು ಸೆಳೆದುಕೊಳ್ಳುವದಂತೂ ನನ್ನ ಕೈಯಿಂದಾಗದು; ೧೭ ನೇ ತಾರೀಖಿನ ದಿನ ಸ್ವತಃ ನನ್ನ ಹೆಸರಿನಿಂದ ತೆಗೆದ ಹುಂಡಿಯನ್ನು ಜನರು ಅಪಮಾನಿಸಿದರು. ಅದ್ದರಿಂದ ಕಳಿದು ಕೊಂಡಂಥ ನನ್ನ ಪತ್ತನ್ನು ಹೇಗಾದರೂ ಮರಳಿ ಸಂಪಾದಿಸುವದು ಅಥವಾ ಈ ಕಾರ್ಯದಲ್ಲಿ ಸಾಯುವದು ನನಗೆ ಯೋಗ್ಯವಾಗಿ ತೋರಿತು. ಆ ಪರಮೇಶ್ವರನ ಕಾರ್ಯವನ್ನು ಈ ಜಗದಲ್ಲಿ ನೆರವೇರಿಸಲಿಕ್ಕೆ ನನಗೆ ಮನಃ ಪತ್ತು ಬೇಕಾಗಿದ್ದರೆ ನಾನು ಅವನಲ್ಲಿಯೇ ಮೊರೆಯಿಡತಕ್ಕದ್ದು. ಅವನೆದುರಿನಲ್ಲಿ ನನ್ನನ್ನು ನಾನೇ ನಮ್ರನನ್ನಾಗಿ ಮಾಡಿಕೊಂಡು, ಮಣ್ಣಿನಲ್ಲಿ ಹೊರಳಾಡುತ್ತ, ಅವನು ನನಗೆ ಕೊಟ್ಟಂಥ ಅನ್ನವನ್ನು ಬಿಟ್ಟು ಬಿಟ್ಟರೆ ಮಾತ್ರ ನಾನು ಅವನಲ್ಲಿ ಮೊರೆಯಿಟ್ಟದ್ದು ಖಚಿತ ಆ ಪರಮಾತ್ಮನ ಕಾರ್ಯವನ್ನು ನೆರವೇರಿಸಲಿಕ್ಕೆ ನಾನು ಖಂಡಿತವಾಗಿ ಅತರನಿದ್ದೇನೆಂಬದನ್ನು ಸಾವಿಗಾಗಿ ಮಾ

ರ್ಗಗಳಿಂದ ಅವನಿಗೆ ತೋರಿಸಲೇಬೇಕು. ಇನ್ನು ಈ ಅವನ ಕಾರ್ಯವನ್ನು ನೆರವೇರಿಸಲಿಕ್ಕೆ ನಾನು ಸರ್ವಥಾ ಅಯೋಗ್ಯನಿದ್ದೆ "ನನ್ನೆನ್ನು ಮನಃ ಪರಲೋಕಕ್ಕೆ ಕರೆದೊಯ್ದು ನನ್ನಲ್ಲಿಯ ಯೋಗ್ಯತೆಯ ಪ್ರಕಾರ ನನ್ನ ಬೆಲೆ ಕಟ್ಟು, ಪರಮಾತ್ಮನೇ, ನಿನ್ನ ಇಚ್ಛೆಯಂತೆ, ನನ್ನೆನ್ನು ಮರಳಿ ನಿರ್ಮಾಣ ಮಾಡೆಂದು ನಾನು ಬೇಡಿಕೊಳ್ಳತಕ್ಕದ್ದು ಆದ್ದರಿಂದಲೇ ನಾನು ಉಪವಾಸ ವ್ರತವನ್ನು ಕೈಕೊಂಡೆ. ನನ್ನ ಸಂಗಡ ಕೆಲಸ ಮಾಡುವವರೂ ಮೊನ್ನಿನ ದಂಗೆಯಲ್ಲಿ ಬೇರೆ ತರದಿಂದ ಭಾಗ ತೆಗೆದು ಕೊಂಡವರೂ ಛಾಯ ಹೊಂದಿದರೆಂದು ಈಗ ನನಗೇನೂ ಕೆಡಕೆನಿಸುವದಿಲ್ಲ. ಯಾಕಂದರೆ ಅಹಿಂಸೆಯೇ ನನಗ ಮೂಲಾಧಾರ. ಅದನ್ನೇ ಯಾರೂ ಪಾಲಿಸದಿದ್ದರೆ ವ್ಯಥೆಯೇಕೆ? ತಟ್ಟಿದ ಹಾಸಿಯನ್ನು ಇಲ್ಲದಂತೆ ಮಾಡಿ ಪಶ್ಚಾತ್ತಾಪ ಬಟ್ಟು ಚಿತ್ತ ಶುದ್ಧಿಯನ್ನು ಮಾಡಿಕೊಳ್ಳವದಕ್ಕೆ ಈ ಉಪವಾಸ ವ್ರತವು ನನಗೆ ಬಹು ಸಹಾಯವಾಗಿದೆ. ತಮ್ಮ ಮನಬಂದಂತೆ ಆಚರಿಸುವದು ಕೆಲಸದ್ದಲ್ಲೆಂಬದನ್ನು ಈ ಉಪವಾಸ ವ್ರತದಿಂದ ಈ ಕಾರ್ಯದಲ್ಲಿ ನನ್ನ ಸಂಗಡ ಕೆಲಸ ಮಾಡತಕ್ಕವರು ತಿಳಿದಿರತಕ್ಕದ್ದು. ಅಹಿಂಸೆಯಲ್ಲಿ ಯಾರಿಗೆ ಶ್ರದ್ಧೆಯಿದೆಯೋ ಅವರೇ ಈ ರಾಷ್ಟ್ರೀಯ ಹೋರಾಟದಲ್ಲಿ ಸೇರಬಹುದು. ಧೀರರೂ ಸತ್ಯವಾದಿಗಳೂ ಆಗಿ ಕೆಲಸ ಮಾಡುವವರು ಸ್ವಲ್ಪೇ ಜನರಿದ್ದರುಕೂಡ ಎನೂ ಕೊಂದರೆ--ತೊಡಕುಗಳಿಲ್ಲದೇ ಈ ಕಾರ್ಯವನ್ನು ಮಾಡಬಹುದು. ಅಸತ್ಯವಾದಿಗಳ ಸಂಖ್ಯೆಯು ದೊಡ್ಡದಿದ್ದರೂ ಅವರಿಂದ ಕಾರ್ಯಕ್ಕೆ ಹಾನಿ ಮಾತ್ರ ತಟ್ಟುವದು. ಕಡೆಯ ಮಾತೆಂದರೆ ಶಾಂತತೆಯನ್ನು ತೀವ್ರದಲ್ಲಿ ಸ್ಥಾಪಿಸುವದಕ್ಕೆ ಅಹಿಂಸೆಯು ಒಳ್ಳೇ ಮಾರ್ಗವು. ಶಾಂತತೆಯೇ ನಮ್ಮಗೆ ಲಭಿಸತಕ್ಕ ಧ್ಯೇಯವು, ಶಕ್ತಾಸ್ತ್ರ, ಚಿತ್ತಶುದ್ಧಿ, ನಮ್ಮಿಂದ ಪರರಿಗಾದ ಹಾನಿಯನ್ನು ಇಲ್ಲದಂತೆ ಮಾಡುವದು, ಇವೇ ಅಧ್ಯೇಯ ಪ್ರಾಪ್ತಿಗೆ ಸಾಧನಗಳು. ಶಾಂತತೆಯೆಂದರೆ ದೇವರಿಂದ ಕಳಿಸಲ್ಪಟ್ಟ ಪ್ರತಿಕ್ಷೆಯಲ್ಲವೇ.

ಅಸಹಕಾರಿಗಳಿಗೆ ಎಚ್ಚರ.

ನಾನು ಉಪವಾಸ ಮಾಡತಕ್ಕದ್ದಲ್ಲೆಂದು ಅನೇಕರು ನನ್ನ ಸಂಗಡ ಪಾದಿಸಹತ್ತಿದ್ದಾರೆ. ಕೆಲವರಂತೂ ನನಗೆ ಸಪಾನುಭೂತಿಯನ್ನು ತೋರಿಸುವದಕ್ಕಾಗಿ ತಾವೂ ಉಪವಾಸ ಮಾಡಹತ್ತಿದ್ದಾರೆ ಇವರೆಲ್ಲರು ತಪ್ಪು ಮಾರ್ಗವನ್ನು ಹಿಡಿದಿರುವರೆನುನಿಶ್ಚಯ. ಉಪವಾಸ ವ್ರತವು ನನ್ನ ಮಟ್ಟಿಗೆ ಅವಶ್ಯಕವಾಗಿದ್ದಿತ. ನಾನೆಂದರೆ ಅಪರಾಧಿಯಾಗಿದ್ದೆನು, ದಿಮಾಳೀ ಜೋರನಾಗಿದ್ದೆನು. ಪರಿಸ್ಥಿತಿಯನ್ನವಲೋಕಿಸಿ, ಅಲ್ಲಿ ಏನಾದರೂ ಹಿಂಸಕೃತಿಗಳಿದ್ದರೆ ಅವನ್ನು ಕೆತ್ತಿ ಹಾಕಿ, ಎಲ್ಲ ಜನರಲ್ಲಿಯೂ ಅಹಿಂಸಾ ತತ್ವವು ನೆಲಗೂಳ್ಳುವಂತೆ ಮಾಡಿ, ಹಿಂಸೆಯ ಪ್ರತಿಜೊಂದು ಕಣವು ಕೂಡ ನಮ್ಮ ಪವಿತ್ರ ಕಾರ್ಯಕ್ಕೆ ಕುಂದನ್ನುಂಟು ಮಾಡುವದೆಂಬದನ್ನು ನಂಬಿ, ಕೆಲಸ ಮಾಡುವದೇ ಉಳಿದವರ ಕರ್ತವ್ಯ. ರಾಟೆಯ ಕಾರ್ಯವನ್ನು ಕೈಕೊಂಡು ಹಿಂದೂ ಮುಸಲ್ಮಾನರ ಒಕ್ಕಟ್ಟನ್ನು ವೃದ್ಧಿಗೊಳಿಸುವದಲ್ಲದೆ ಬೇರೆ ಬೇರೆ ಧರ್ಮದವರಲ್ಲಿ ಸಹ ಐಕ್ಯ ಉಂಟಾಗುವಂತೆ ಪ್ರಯತ್ನಿಸಬೇಕು ತನಗಿಂತ ಅಲ್ಪ ಸಂಖ್ಯಾಕರಾದ ಧರ್ಮದವರ ಹಿತವನ್ನು ಬಯಸದಿದ್ದರೆ ಹಿಂದೂ ಮುಸಲ್ಮಾನರ ಒಕ್ಕಟ್ಟಿಗೆ ಎಳ್ಳಷ್ಟಾದರೂ ಬೆಲೆ ಬಾರದು. ಕ್ರಿಶ್ಚನ್ನರು ಜ್ಯುಜನರು ಅದರಂತೆಯೇ ಪಾರ್ಸೀ ಜನರು ಹಿಂದುಸ್ತಾನಕ್ಕೆ ಪರಕೀಯರಲ್ಲ. ನಮ್ಮಲ್ಲಿ ಪ್ರಚಲಿತವಾದ ರೂಢಿಗೆ ಕೊಂಚ ವಿರುದ್ಧವಾದರೂ ಆದನ್ನು ಲೆಕ್ಕಿಸದೆ ಆ ಜನರ ಸಂಗಡ ಗೆಳೆತನವನ್ನು ಬೆಳಸಲಿಕ್ಕೇ ಬೇಕು. ಸಮಾಜ ಸೇವೆಯನ್ನೂ ಉಳಿದ ತರದ ಸಹಾಯವನ್ನು ಅವರಿಗೆ ಸಲ್ಲಿಸಬೇಕು. ಎಲ್ಲಕ್ಕೂ ಹೆಚ್ಚಿನ ಮಹತ್ವದ್ದೆಂದರೆ ನಮ್ಮಿಂದ ಅವರಿಗೆ ಯಾವ ತರದ ಹಿಂಸೆಯೂ ಆಗದಂತೆ ಎಚ್ಚರವಹಿಸಿ ಅವರನ್ನು ರಕ್ಷಿಸಬೇಕು. ಅಸಹಕಾರಿಗಳು ಸಹಕಾರಿಗಳ ಸಂಗಡ ಸಹಕಾರಿಗಳೆತನವನ್ನು ಮಾಡಬೇಕು. ಅವರು ಇಂಗ್ಲೀಷರೇ ಇರಲಿ, ಹಿಂದೀಯರೇ ಆಗಲಿ, ಅವರನ್ನು ದೂಷಿಸಕೂಡದು. ಕಷ್ಟವನ್ನು ಸಹಿಸಲಿಕ್ಕೆ ನಾವು ಸಿದ್ಧರಾಗಿರಬೇಕು. ನಮ್ಮ ಪವಿತ್ರ ಕಾರ್ಯದಲ್ಲಿ ನಂಬಿಗೆಯನ್ನಿಟ್ಟು ಕೆಲಸ ಮಾಡಬೇಕು. ಇಂಗ್ಲೀಷ ಜನರು ನಮಗೆ ಎನೇ ಮಾಡಲಿ; ನಾವು ಮಾತ್ರ ಅವರ ಕೂದಲವನ್ನು ಸಹ ಮುಟ್ಟುವದಿಲ್ಲೆಂದು ಆ ಜಗನ್ನಿಯಾಮಕನ ಪೆಸರಿನಿಂದ ಈಗಿನ ಮುಷ್ಟಿಗಾದರೂ ಇಡೀ ಜಗತ್ತಿಗೆ ಸಾರಿದ್ದೇವೆ. ಆದ್ದರಿಂದ ಆಂಗ್ಲೇಯರಲ್ಲಿಯಾಗಲಿ, ಹಿಂದೀ ಸಹಕಾರಿಗಳಲ್ಲಿಯಾಗಲಿ ಒಬ್ಬನಿಗೆ ಸಹ ಬಾಧೆಯಾಗದಂತೆ ನಾವು ಎಚ್ಚರ ಪಡಬೇಕು. ಹಾಗೆ ಮಾಡದಿದ್ದರೆ ಮಾನವೀ ವ್ಯಾಣಿಯ ಮುಂದಿಷ್ಟೇ ಅಲ್ಲದೇ ಆ ಜಗದೀಶ್ವರನ ಮುಂದೆ ಸಹ ನಾವು ನಮ್ಮ ವ್ರತವನ್ನು ವಿರದದ್ದಕ್ಕೆ ಅಪರಾಧಿಗಳಾಗಿ ನಿಲ್ಲಬೇಕಾಗುವದು.

ಶಾಂತತೆಯೆಂದರೇನು ?

ಕೆಲವೆಡೆಯಲ್ಲಿ ಉದಹರಿಸಿದ ಶಾಂತತೆಯ ಶಬ್ದಾರ್ಥವನ್ನು ನನ್ನ ಮಿತ್ರರು ತಪ್ಪಾಗಿ ತಿಳಿಕೊಂಡಿರುವರು. ನಾನನ್ನುವಂಥ ಶಾಂತತೆಯು ಅರಹಯೋಗಿಗಳಿಂದಲೇ ಹೊರಥಬೇಕಾಗಿದೆ. ಕಾರ್ಯಕ್ಕೆ ಶೌರ್ಯಗಳು ದೊರೆಯಬೇಕೆಂಬ ಉದ್ದೇಶದಿಂದ ತತ್ವವನ್ನಾಗಲೀ ಮಾರ್ಗವನ್ನಾಗಲೀ ಬಿಡಬೇಕೆಂದು ಅದರ ಅರ್ಥವಲ್ಲ. ನನ್ನ ಅಭಿಪ್ರಾಯದಂತೆ ಹಾಗಾಗುವದು ಅಶಕ್ಯದ ಮಾತು. ಯಾಕಂದರೆ ಬೇರೆ ಬೇರೆ ಪಕ್ಷದವರ ಪದ್ಧತಿಗಳು ಶೀರ ಭಿನ್ನವಾಗಿರುವವು. ದೇಶೋದ್ಧಾರಕ್ಕಾಗಿ ಒಂದು ಪಕ್ಷದವರು ಕೌನ್ಸಿಲಗಳನ್ನು ಸೇರಬೇಕೆಂದರೆ ಬೇರೊಂದು ಪಕ್ಷದವರು ಬೇಡೆನ್ನುವರು. ಅಂದ ಮೇಲೆ ಇಂತಹ ಎರಡೂ ಪಕ್ಷಗಳಿಗೆ ಕೂಡಿ ನಡೆಯುವ ಅನುವು ಉಳಿಯದ, ಮತಭೇದ ವುಂಟಾಗುತ್ತದೆಂಬ ಕಾರಣದಿಂದಿಷ್ಟೇ ನಾವು ಪರಸ್ಪರರ ಗೂಡ ಅಯೋಗ್ಯ ರೀತಿಯಿಂದ ಆಚರಿಸುವದು. ಒಬ್ಬರ ತಲೆಯನ್ನೊಬ್ಬರು ಒಡೆಯುವದು ಸರಿಯೆಲ್ಲ. ಅಹಿಂಸಾ ತತ್ವವು ಪ್ರಸಾರದಲ್ಲಿರುವಾಗ್ಗೆಯೇ ಪರರ ಮೇಲೆ ಹರಿ ಬೀಳುವದು ಸರಿಯಲ್ಲ. ಮತ ಸಹಿಷ್ಣತೆಯ ಗಾಳಿಯು ಎಲ್ಲ ಕಡೆಯಲ್ಲಿ ಬೀಸುವಂಥ ಪರಿಸ್ಥಿತಿಯನ್ನು ನಾವು ತಂದರೆ ನಮ್ಮ ಕಾರ್ಯಹ್ಕೇತ್ರವನ್ನು ಮಿತಿ ವಿಸಾರಿ ಬೆಳೆಸಲು ಶಕ್ಯವಿದೆ ಎಂದು ನಾನು ಮನಗಂಡಿದ್ದೇನೆ. ಈಗ್ಗೆ, ನಮ್ಮ ಸಂಕಯಗಳೂ ವಿಲಕ್ಷಣ ವಿಚಾರಗಳೂ ನಮ್ಮನ್ನು ತಿನ್ನುತ್ತಲಿವೆ. ಸಭೆಗೆ ಬರುವ ನಾವಿರಾರು ಜನರೆಲ್ಲರೂ ಅಹಿಂಸಾ ವ್ರತವನ್ನು ಪಾಲಿಸುವರೆಂದು ಹೇಳಕೂಡದು. ನಮ್ಮ ಮೇಲಿದ್ದ ಜನರ

ಪೂಜ್ಯ ಭಾವನೆಯು ಸ್ವಲ್ಪ ಕಡಿಮೆಯಾಗಿದ್ದರೆ ಇದಕ್ಕೂ ಹೆಚ್ಚಿನ ಕಾರ್ಯವನ್ನು ನಾವು ಮಾಡುತ್ತಿದ್ದೆವು. ಈ ಕಾರಣ ಕ್ಕೋಸುಗ ನಮ್ಮ ವಿರೋಧಿಗಳ ಕೂಡ ನಮ್ಮ ಆಚರಣೆಯು ಅತ್ಯವಶ್ಯವಾಗಿ ಕುದ್ದಾಗಿರತಕ್ಕದ್ದು. ಸರಕಾರದ ಇಲ್ಲವೇ ಅದರ ಬೆಂಬಡಿಗರ ತಪ್ಪು ತಡೆಗಳನ್ನು ನಾವು ವಿವೇಚಿಸಲಾಗದು. ನಮ್ಮ ಕಾರ್ಯ ಕ್ರಮವನ್ನು ಸಿದ್ಧಿಗೊಯ್ಯುವದಕ್ಕಾಗಿ ನಮ್ಮ ಭಾಷಣಗಳಲ್ಲಿಯೂ ನಮ್ಮ ಲೇಖನಗಳಲ್ಲಿಯೂ ನಮ್ಮ ಆಚರಣೆಯಲ್ಲಿಯೂ ನಮ್ಮ ಉತ್ಸಾಹವನ್ನು ಒಳ್ಳೇ ನಿಷ್ಕಾಮಪ್ರೀತಿಯಿಂದ ಉಪಯೋಗಿಸುತ್ತಿರಬೇಕು ಮುಂಡಾಡಿಗರ ಪುಂಡತನಕ್ಕಾಗಿ ನಮ್ಮ ಮೆನಸ್ಸು ಬಿಗಿ ಹಿಡಿದರೆ ಸ್ವರಾಜ್ಯವು ಸ್ವಲ್ಪಾವಕಾಶದಲ್ಲಿಯೇ ಸಿಗುವದು

ನಾಟಕ ಗ್ರಹಗಳಲ್ಲಿಯೂ ಖಾದೀ

ಮುಂಬೈ ಮತ್ತು ಇತರ ಸ್ಥಳಗಳಲ್ಲಿಯಿರುವ ನಾಟಕ ಕಂಪನಿಯವರು ಖಾದೀ ಅರಿವೆ ಉನ್ನೇ ಉಪಯೋಗಿಸಹತ್ತಿದರೆ, ಅದರ ಪ್ರಸಾರವು ಹೆಚ್ಚಿಗೇ ಬೆಳೆದು ಅದು ಜನರಂಡನೆಗೆ ಅಧಿಕವಾಗಿ ಪಾತ್ರವಾಗುವದೆಂದು ಒರ್ವನು ಬರೆಯುತ್ತಾನೆ. ಒಳ್ಳೇ ಕಲ್ಪನೆ. ಆದರೆ ಅದನ್ನು ಅಮಲಿನಲ್ಲಿ ತುವದು ಮುಖ್ಯವಾಗಿ ಶ್ರೋತೃಸಮಾಜದ ಕೈಯ್ಯಲ್ಲಿಯೇ ಇರುತ್ತದೆ. ಉಡಿಗೆ ತೊಡಿಗೆಗಳೆಲ್ಲ ಖಾದೀ ಅರಿವೆಯಲ್ಲಿಯೇ ಇರಬೇಕೆಂದು ಪ್ರೇಕ್ಷಕರು ಆಗ್ರಹತೊಟ್ಟರೆ, ಕಂಪನೀ ಮಾಲಕರು ಆ ಬಗೆಯ ಅದಲು ಬದಲು ಮಾಡಲಿಕ್ಕೇ ಬೇಕಾಗುವದು. ಯಾಕಂದರೆ ಶ್ರೋತೃ ಸಮಾಜದ ಮನರಂಜನೆ ಮಾಡುವದೊಂದೇ ಅವರಿಗೆ ಗೊತ್ತು; ಮಿಕ್ಕ ರಸಿಕತೆಯನ್ನ ಅವರು ಅರಿಯರು. ನಾಟಕದಲ್ಲಿ ಅಡುಪೆಲ್ಲ ಖಾದೀ ಅರಿವೆಯದಾಗಲಿಕ್ಕೆ ನಾಟಕಗಳಿಗೆ ಅತ್ಯುತ್ತುವನ್ನು ಕೊಡುವ ಜನರು, ಖಾದೀ ಅರಿವೆಯನ್ನು ನೀವು ಉಪಯೋಗಿಸಬೇಕೆಂದು ಕಂಪನಿಯವರಿಗೆ ಹೇಳುವದೇ ಉತ್ತಮೋಪಾಯ. ಕದ್ದು ಮುಚ್ಚಿ ಕಕ್ಕಿಸುವದಕ್ಕಾಗಿ ಅವರು ಖಾದಿಯನ್ನು ಕಾಪಯೋಗಿಸುವರೇ ಹೇಗೆ ಪರಿಪ್ಲಿಸಬೇಕು. ಯಾಕಂದರೆ ಕಲಾಕೌಶಲ್ಯ ಅಥವಾ ಅಭಿರುಚಿ ಎಂಬ ಹೆಸರಿನಿಂದ ಸತ್ಯವನ್ನು ಮುಚ್ಚುವದೇ ಈಗಿನ ಜನರಲ್ಲಿ—ವಿಶೇಷತಃ ನಾಟಕ ಕಂಪನಿಗಳಲ್ಲಿ—ಕಂಡುಬರುತ್ತದೆ. ಬಣ್ಣ, ಸೊಗಸು, ಬೆಡಗು ಇವುಗಳ ವೇಲೆಯೇ ಈಗಿನ ಶ್ರೋತೃ ಸಮಾಜದವರ ಪ್ರೀತಿ ಹೆಚ್ಚಿದ್ದಂತೆ ತೋರುತ್ತದೆ. ಚಂದಕಾಣುವಂತೆ ಹದಮಾಡಿದ ಬಣ್ಣವನ್ನು ಖಾದೀಅರಿವೆಗೆ ಕೊಡುವದು ಶಕ್ಯವಿದೆ. ಮತ್ತೂ ಅದನಲ್ಲಿ ಹೊಸಗಿನ ಆಲಂಕಾರವನ್ನುಂಟು ಮಾಡುವದೂ ಶಕ್ಯವಿದೆ. ಎನೂ ಕುರೂಪತೆ ಖಾದಿಂದ ತೆ ಬೇರೆ ಬೇರೆ ತರದ ನುನೋಹರವಾದ ಬಣ್ಣವನ್ನು ಈ ದಪ್ಪಾದ ಖಾದೀ ಅರಿವೆಗೆ ಹಾಕುವದು ಮಾತ್ರ ಆಶಕ್ಯ. ಆದ್ದರಿಂದ ಈ ತರದ ದಪ್ಪಾದ ಅರಿವೆಯೇ ಜನರ ಮೋಹಕ್ಕೆ ಒಲಿಯುವಂತೆ ಮಾಡುವದು ದೊಡ್ಡ ಕೆಲಸ. ದೊಡ್ಡ ಪ್ರಮಾಣದ ಮೇಲೆ ಖಾದೀ ಅರಿವೆಯನ್ನ ನಾಟಕಗಳಲ್ಲಿ ರೂಢವಾಗುವಂತೆ ಮಾಡಿದರೆ ಜನರ ಅಭಿರುಚಿಯಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದಂತಾಗುವದು ಇದರಿಂದಲೇ ಈಗ್ಗೆ ಕಳೆದು ಹೋದ ಶುದ್ಧವಾಹ ಮತ್ತೂ ಸ್ವಾಭಾವಿಕವಾದ ಸೌಂದರ್ಯವು ಮರಳಿ ಬರುವದು. ಬೇರೆ ರಾಷ್ಟ್ರಗಳಲ್ಲಿದ್ದಂತೆ ವಿಶಿಷ್ಟವಾದ ನಮ್ಮ ರಾಷ್ಟ್ರೀಯ ಸಂಸ್ಕೃತಿ ಅಥವಾ ರಾಷ್ಟ್ರೀಯ ರಸಿಕತೆ ನಮ್ಮ ಈಗಣ ನಾಟಕಗಳಲ್ಲಿ ಇಲ್ಲವೇ ಇಲ್ಲ ನಮ್ಮ ರಸಿಕತೆಯಲ್ಲಿ ಕೆಟ್ಟು, ರೋಗಗ್ರಸ್ತವಾಗಿದೆ; ಅದು ನಮ್ಮ ಆಚಾರ ವಿಚಾರಗಳಲ್ಲಿ ಬೆರೆತು ಕೊಳ್ಳಲಿಕ್ಕೆ ಅಶಕ್ಯವಿದ್ದರೂ, ರಾಷ್ಟ್ರದಲ್ಲಿ ಇಂಥ ರಸಿಕತೆಯೇ ದೊಡ್ಡ ಪ್ರಮಾಣದಿಂದ ಹಬ್ಬಿಕೊಂಡು ಜೀವನೆ. ನಮ್ಮಲ್ಲಿ ರಾಷ್ಟ್ರೀಯ ಭಾವನೆ ಯಿಲ್ಲದ್ದೇ ಇವಕ್ಕೆಲ್ಲ ಕಾರಣ. ಜನತೆಯಲ್ಲಿ ಈಗ್ಗೆ ಉಂಟಾದ ಪ್ರಗತಿಪ್ರದವಾದ ಅಭಿರುಚಿಯನ್ನು ಕಂಡುಪಿಡಿದು, ಸಾಹಸಿಯಾಪ ಮ್ಯಾನೇಜನು ನಾಟಕದ ಉಡಿಗೆ ತೊಡಿಗೆ ಸೀನರಿಗಳಲ್ಲಿ ಸಂಪೂರ್ಣವಾಗಿ ಹೆಚ್ಚುಕಡಿಮೆ ಮಾಡಿದರೆ, ನಾಟಕಪ್ರಿಯ ಜನರ ಅಭಿನಂದನೆಗೆ ಪಾತ್ರನಾಗುವಪರಲ್ಲಿ ಸಂಶಯವಿಲ್ಲ.

(ಯಂಗ ಇಂಡಿಯಾ) ಮೋಹನದಾಸ ಕರಮಚಂದ ಗಾಂಧಿ

ಸವಿನಯ ಆಜ್ಞಾ ಭಂಗದಲ್ಲಿಯ ಭಯವು.

ಈ ಲೇಖನವನ್ನು ನಾನು ನನ್ನ ಉಪವಾಸವು ಮುಗಿದ ಮೇಲೆ ಬರೆಯಲುಪಕ್ರಮಿಸುವೆನು. 'ಯಂಗ ಇಂಡಿಯಾದ'ಲ್ಲಿಯು ಲೇಖನಗಳು ನಾನು ಉಪವಾಸವ್ರತವಾಗ್ಗೆ ಬರೆಯಲ್ಪಟ್ಟಿರುವ ಉಪವಾಸದ ಕಾಲದಲ್ಲಿಯ ವಿಚಾರಗಳು ಈಗಿನ ವಿಚಾರಗಳಿಂದ ಬಹು ಭಿನ್ನವಾಗಿವೆಯೆಂದು ನನಗೆ ತೋರುವದಿಲ್ಲ. ಉಪವಾಸದ ಮೊದಲಿದ್ದ ನನ್ನ ವಿಚಾರಗಳು ಈಗ ದೃಢವಾಗಿವೆ.

ಆದರೆ ಒಂದು ವಿಷಯದಲ್ಲಿ ಮಾತ್ರ ಭೇದವುಂಟಾಗಿದೆ. ಅದಕ್ಕೆ ಉಪವಾಸವು ಕಾರಣವಿಲ್ಲ ಆದರೆ ಮುಂಬಯಿಯಲ್ಲಿ ಗುರುವಾರ ತಾ॥ ೧೭ನೇ ದಿವಸ ನಾನು ನೋಡಿದ, ಮತ್ತು ಶುಕ್ರವಾರ ಶನಿವಾರ ದಿವಸ ನನಗೆ ಗೊತ್ತಾದ ಸಂಗತಿಗಳೇ ಅದಕ್ಕೆ ಕಾರಣವು. ಸವಿನಯ ಆಜ್ಞಾ ಭಂಗದ ಸಲುವಾಗಿ ಈ ವರಿಗೂ ನಾವು ತಯಾರಾಗಿಲ್ಲೆಂಬು ನನಗೆ ಈಗ ತೋರುತ್ತದೆ. ಬರಡೋಲಿಯಲ್ಲಿ ಈಗ ಸವಿನಯ ಭಂಗವನ್ನು ಪ್ರಾರಂಭಿಸಿದರೆ ನಿಜವಾಗಿ ನಮ್ಮ ಕೆಲಸವು ಕೆಡುವದು. ನಮಗೆ ಸ್ವರಾಜ್ಯವು ಪ್ರಾಪ್ತವಾಗಬೇಕೆಂದೂ ಖಿಲಾಫತ ಪ್ರಕರಣದಲ್ಲಿ ನ್ಯಾಯವು ದೊರೆಯಬೇಕೆಂದೂ ಪಂಜಾಬಿನ ಅತ್ಯಾಚಾರದ ಬಗ್ಗೆ ಸರಕಾರವು ಕ್ಷಮೆ ಬೇಡಬೇಕೆಂದೂ ನಾವು ಸವಿನಯ ಭಂಗವನ್ನು ಮಾಡಬೇಕಾಯಿತು. ಈ ಮೂರು ಉದ್ದೇಶಗಳಲ್ಲಿ ಎಂದಾದರೂ ಈ ಸ್ಥಿತಿಯಲ್ಲಿ ಸವಿನಯ ಭಂಗವನ್ನು ಮಾಡುವದರಿಂದ ಕೈಗೂಡದು. ಮುಂಬಯಿ ಮತ್ತು ಬಾರಡೋಲಿ ಆನಂದಗಳಲ್ಲಿ ನಿಕಟವಾದ ಸಂಬಂಧವಿರುವದು. ಒಂದಕ್ಕೊಂದು ನೆರವಾಗುವ ಶಕ್ತಿಯೂ ಇಚ್ಛೆಯೂ ಉಂಟಾಗಿರುವದು. ನಾವೀಗ ಬಾರಡೋಲಿಯಲ್ಲಿ ಮತ್ತು ಆನಂದದಲ್ಲಿ ಸವಿನಯ ಭಂಗವನ್ನ ಆರಂಭಿಸಿದಾಗ ಮುಂಬಯಿಯು ಅವಿನಯಿಯಾದರೆ ಮುಂಬಯಿಯಿಂದ ಸಹಾಯವು ದೊರೆಯುವ ಮಾತು ಒತ್ತಟ್ಟಿಗಿರಲಿ, ನಮ್ಮ ಕಾರ್ಯಕ್ಕೆ ಹಾನಿಯಾಗದಿರದೆಂಬ ಮಾತು ನಿಶ್ಚಯವು. ಈ ಮಾತು ಸ್ವಲ್ಪ ವಿಚಾರ ಮಾಡಿದರೆ ತಿಳಿದು ಬರುವದು.

ಸ್ವಚ್ಛಂದತನದಿಂದ ಕಾಯ್ದೆಯನ್ನು ಭಂಗಿಸುವದು—ಅತ್ಯಾಚಾರಕ್ಕೆ ಪ್ರವೃತ್ತರಾಗುವದು ಸಂಕಾರದೊಂದಿಗೆ ಪೂರ್ಣರೀತಿಯಿಂದ ಸಹಕಾರ ಮಾಡುವದೇ ನ್ಯೆ. ಈ ಸರಕಾರದ ಅಸಿತ್ವವು ನಮ್ಮ ದುರ್ಬಲತೆಯ ಮೇಲೆ, ಕಾಯ್ದೆಯನ್ನು ಸ್ವಚ್ಛಂದತನದಿಂದ ಮುರಿಯುವ ನಮ್ಮ ಸ್ವಭಾವದ ಮೇಲೆ, ನಮ್ಮ ಆತತಾಯಿತನದ ಅತ್ಯಾಚಾರದ ಮೇಲೆ ಅವಲಂಬಿಸಿಯಿದೆಂಬುದು ನಮಗೆ ಈ ವರೆಗೂ ತಿಳಿಯದೆ ಇಪ್ಪೆಯೊ

ವಕೀಲರ ಅಸಹಕಾರದಿಂದ ಸರಕಾರವು ಎಷ್ಟು ಹತಬಲವಾಗಿದಿಯೋ ಅದಕ್ಕೂ ಹೆಚ್ಚು ನಮ್ಮ ಶಾಂತವೃತ್ತಿಯಿಂದ ಹತಬಲವಾಗಿದೆ ವಕೀಲರ ಸಹಕಾರದಿಂದ ಸರಕಾರಕ್ಕೆ ಎಷ್ಟು ಬಲವು ದೊರೆತಿದೆಯೋ ಅದಕ್ಕೂ ಹೆಚ್ಚು ಬಲವು ನೆಮ್ಮ ಜನರು ಮಾಡಿದ ಶಾಂತತಾ ಭಂಗದಿಂದ ಬೆಳೆದಿದೆ; ಯಾಕಂದರೆ ಅದರಿಂದ ಸರಕಾರಕ್ಕೆ, ಜನರ ಮೇಲಿನ ಅತ್ಯಾಚಾರವನ್ನು ಮಾಡಿ ಅವರನ್ನು ಬಗೆಬಗೆಯಿಂದ ಪೀಡಿಸಿ ತನ್ನ ಅಧಿಕಾರವನ್ನು ಹೆಚ್ಚಿಗೆ ದೃಢಪಡಿಸಿಕೊಳ್ಳಲು, ಸಂಧಿಯು ದೊರೆಯುವದು. ಸಾರಾಂಶ ಒಂದೆಡೆಗೆ ವಿನಯವು, ಮತ್ತೊಂದೆಡೆ ಅವಿನಯವು ಇರುವದೆಂದರೆ ಮೈಕೊಳೆ ಮಣ್ಣಿನಲ್ಲಿ ಉರುಳಾಡುವಂತೆ ಇರುತ್ತದೆ. ಬಹಳ ವಾತ್ರ್ಯಯಲ್ಲಿ ಎಷ್ಟು ನೀರು ಸುರುವಿದರೂ ಅದರಲ್ಲಿ ಹೇಗೆ ನಿಲ್ಲದೊ ಹಾಗೆಯೇ ಅವಿನಯಯುಕ್ತ ವಾತಾವರಣದಲ್ಲಿ ಎಷ್ಟು ವಿನಯವನ್ನು ಪ್ರಕಟಗೊಳಿಸಿದರೂ ಆ ವಿನಯವು ನಿಷ್ಫಲವಾಗುವದು. ಮೊದಲಿಗೆ ನಾವು ಅವಿ

(ಗಿನೇ ಪುಟ ನೋಡಿರಿ)

ಕನ್ನಡ ನವಜೀವನ.

ಮಾರ್ಗಶೀರ್ಷ ಶು. ೨ ಗುರುವಾರ ಶಕೆ ೧೮೪೪.

ನಿರ್ದೋಷಿ ವಿರುದ್ಧ ಅಪರಾಧಿ.

—೦—

ಮನುಷ್ಯನು ತಾನು ಮಾಡಿದ ಕಾಯಿದೆಗಳನ್ನು ತಾನೇ ಮುರಿದರೆ ಅದು ಅಪರಾಧವೆನಿಸುತ್ತದೆ. ಆದರೆ ಆ ಅಪರಾಧದ ಸಲುವಾಗಿ ಅವನಿಗೆ ಏನೂ ಶಿಕ್ಷೆಯಾಗುವದಿಲ್ಲ. ಯಾಕಂದರೆ ಆ ಅಪರಾಧಕ್ಕೆ ಏನು ಶಿಕ್ಷೆಯನ್ನು ವಿಧಿಸಬೇಕೆಂದು ಮೊದಲೇ ಗೊತ್ತು ಮಾಡಲ್ಪಟ್ಟಿರುವದಿಲ್ಲ. ಒಂದು ವೇಳೆ ಗೊತ್ತು ಮಾಡಲ್ಪಟ್ಟರೂ ಶಿಕ್ಷೆ ವಿಧಿಸುವವನೂ ಶಿಕ್ಷೆ ಅನುಭವಿಸುವವನೂ ಅವನೇ ಇರುವದರಿಂದ ಆ ಶಿಕ್ಷೆಯನ್ನು ಅವನು ತಪ್ಪಿಸಿಕೊಳ್ಳುತ್ತಾನೆ. ಇದರಂತೆ ಖಾಸಮಾದರೊಂದು ಸಂಸ್ಥೆಯ ಸ್ಥಿತಿಯಾದರೂ ಇರುತ್ತದೆ. ಸಧ್ಯಕ್ಕೆ ನಮ್ಮ ಸರಕಾರವು ತಾನು ಮಾಡಿದ ಕಾಯಿದೆಗಳನ್ನು ತಾನೇ ಭಂಗ ಮಾಡುತ್ತದೆ. ಪೀನಲಕೋಡ ಮತ್ತು ಕ್ರಿಮಿನಲ್ ಪ್ರೋಸೀಜರ ಕೋಡುಗಳ ಕಲಮುಗಳ ದುರುಪಯೋಗವನ್ನು ನಮ್ಮ ಸರಕಾರವು ಒಂದೇ ಸವನೇ ಮಾಡುತ್ತದೆ. ಅಸಹಕಾರವಾದಿಗಳು ಅಧಿಕಾರಿಗಳ ಅಪ್ಪಣೆಯನ್ನು ವಿಚಾರುವದಿಲ್ಲವೆಂದು ತಿಳಿದು, ಬೇಕಾದ ಅನ್ಯಾಯಗಳನ್ನು ಅಧಿಕಾರಿಗಳು ಮಾಡುತ್ತಾರೆ. ಬುಲಂದ ಶಹರ, ಚಿತಗಾಂಗ ಮತ್ತು ಸಿಂಧ ಪ್ರಾಂತದಲ್ಲಿ ಇಂಥ ಅನ್ಯಾಯಗಳಾದದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಆದರೆ ಮದ್ರಾಸ ಇಲಾಖೆಯಲ್ಲಾದಷ್ಟು ಅನ್ಯಾಯಗಳು ಮತ್ತೆಲ್ಲಿಯೂ ಕಂಡು ಬರುವದಿಲ್ಲ. ವ್ಹಾಯಿಸರಾಯರು ಕೊಟ್ಟ ವಚನವನ್ನು ಬದಿಗಿಟ್ಟು ತಮಗೆ ಶಿಕ್ಷೆಯು ವಿಧಿಸಲ್ಪಟ್ಟತ್ತೆಂದು ಮಿ. ಯಾಕೂಬ ಹಸನ್ ರವರು ಸ್ಪಷ್ಟವಾಗಿ ತೋರಿಸಿ ಕೊಟ್ಟಿರುತ್ತಾರೆ. ಅಸಹಕಾರ ಚಳವಳಿಯು ಶಾಂತತಾ ಮಯವಾಗಿರುವ ತನಕ ದಬ್ಬಾಳಿಕೆಯನ್ನು ಪ್ರಾರಂಭಿಸುವದಿಲ್ಲವೆಂದು ಹಿಂದಿನ ವ್ಹಾಯಿಸರಾಯರು ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದರು. ಪುನ: ಈಗಿನ ವ್ಹಾಯಿಸರಾಯರಾದ ಲಾರ್ಡ ರೀಡಿಂಗರು ಇದರಂತೆಯೇ ವಚನ ಕೊಟ್ಟಿದ್ದರು. ಆದರೆ ದೇಶದಲ್ಲೆಲ್ಲಿ ಇದರ ವಿರುದ್ಧವಾಗಿ ಕೃತಿಯು ನಡೆದಿರುತ್ತದೆ. ಮಿ. ಯಾಕೂಬ ಹಸನ್ ರವರು ತಂಜಾವರದಲ್ಲಿ ಮಾಡಿದ ಭಾಷಣವು ಅತ್ಯಾಚಾರಕ್ಕೆ ಪ್ರವೃತ್ತ ಮಾಡುವಂಥಾದ್ದಿಲ್ಲೆಂದು ಯಾರೂ ಎದೆತಟ್ಟಿ ಹೇಳಲಾರರು. ಅವರ ಭಾಷಣದಿಂದ ತಂಜಾವರ ಜಿಲ್ಲೆಯಲ್ಲಿ ಯಾವ ತರದ ಅತ್ಯಾಚಾರವೂ ಆಗಿಲ್ಲ. 'ದೇಶ ಭಕ್ತನ್' ಪತ್ರಿಕೆಯ ಮಿ. ಅಯ್ಯರವರ ಖಟ್ಲೆಯ ನಿರ್ಣಯವನ್ನು ಹೇಳುವಾಗ ಮಿ ಅಯ್ಯರವರ ಲೇಖಗಳು ಅತ್ಯಾಚಾರ ಪ್ರವೃತ್ತಿ ಮಾಡುವಂತಿದ್ದಿಲ್ಲ. ಇಷ್ಟೇ ಅಲ್ಲ ಶಾಂತತೆಯನ್ನು ಕಾಯಲಿಕ್ಕೆ ಜನರಿಗೆ ಬೋಧಿಸುವಂಥವಾಗಿದ್ದವೆಂದು ಹಾಜಿಸ್ಟೇಟರು ಒಪ್ಪಿಕೊಂಡಿದ್ದಾರೆ. ಕೊಯಿಮತ್ತೂರದ ಸುಪ್ರಸಿದ್ಧ ವಕೀಲರಾದ ಮಿ! ರಾಮಸ್ವಾಮಿ ಅಯ್ಯಂಗಾರವರು ಹಿಂದೂ ಪತ್ರಿಕೆಗೆ ಒಂದು ಪತ್ರವನ್ನು ಬರೆದದ್ದಕ್ಕಾಗಿ ಅವರನ್ನು ಪಿತೂರಿ ರಾ. ರಾ. ಪದವಿ ರಾಜಲು ಮತ್ತು ಗೋವಿಂದ ಕೃಷ್ಣಯ್ಯನವರ ಖಟ್ಲೆಗಳಾದರೂ ಇದರಂತೆ ಇರುತ್ತವೆ. ಅವರ ಲೇಖನಗಳು ಮತ್ತು ಭಾಷಣಗಳು ಶಾಂತತೆಗೆ ಪ್ರವೃತ್ತ ಮಾಡುವಂಥವಾಗಿದ್ದವು. ಈ ತರದ ದಬ್ಬಾಳಿಕೆಯಿಂದ ಜನರನ್ನು ಸಿಟ್ಟಿಗೆಬ್ಬಿಸಿ ಅತ್ಯಾಚಾರಕ್ಕೆ ಪ್ರವೃತ್ತ ಮಾಡುವದೇ ಸರಕಾರದ ಉದ್ದೇಶವಿರುತ್ತದೆಂದು ತರ್ಕಿಸುವದರಲ್ಲಿ ಆಶ್ಚರ್ಯವೇನಿಲ್ಲ. ಈ ರೀತಿಯಾಗಿ ಸರಕಾರವು ತನ್ನ ಕಾಯಿದೆಗಳನ್ನು ತಾನೇ ಭಂಗ ಮಾಡಿದ ಅಪರಾಧಕ್ಕೆ ಗುರಿಯಾಗಿರುತ್ತದೆಂಬುದು ನಮಗೆ ತೋರುತ್ತದೆ. ಸರಕಾರವು ದುಷ್ಟ ಉದ್ದೇಶದಿಂದ ಪ್ರೇರಿತವಾಗಿ ತನ್ನ ಕಾಯಿದೆಯ ದುರುಪಯೋಗವನ್ನು ತಾನೇ ಭಂಗ ಮಾಡಿದರ ಸಲುವಾಗಿ ಯಾವ ಶಿಕ್ಷೆಯನ್ನು ವಿಧಿಸಬೇಕೆಂದು ಆ ಕಾಯಿದೆಯಲ್ಲಿ ಉಲ್ಲೇಖಿಸಿಲ್ಲ. ಸರಕಾರವು ಕಾಯಿದೆಯನ್ನು ಬಿಟ್ಟು ಮನ ಬಂದಂತೆ ನಡೆಯ ಹತ್ತಿದಾಗ ಸವಿನಯ ಕಾಯಿದೆ ಭಂಗವನ್ನು ಪ್ರಾರಂಭಿಸುವದೇ ಕರ್ತವ್ಯವಾಗಿರುತ್ತದೆ. ಯಾರಿಗೆ ಆ ಕಾಯಿದೆ ಮಾಡುವದರಲ್ಲಿ ಅಂಗವಿರುವದಿಲ್ಲವೋ ಅಂಥವರಿಗಂತೂ ಅದೊಂದೇ ಉಪಾಯವಿರುತ್ತದೆ. ಎರಡನೆಯ ಉಪಾಯವೆಂದರೆ ಬಂಡಾಯ ಮಾಡುವದು. ಆದರೆ ಅದು ಪರಿಣಾಮದಲ್ಲಿ ಕಾಯಿದೆ ಭಂಗದಷ್ಟು ಯಶಸ್ವಿಯಾಗಲಾರದು. ಬೇಕಾಯಿದೇಶೀರ ಮತ್ತು ಅನ್ಯಾಯವಾದ ಸರಕಾರೀ ಅಧಿಕಾರಿಗಳ ಅಪ್ಪಣೆಯನ್ನು ಅತಿತಯಶಾಂತ ರೀತಿಯಿಂದ ಸಹನ ಮಾಡಿ ಕಾಯಿದೆ ಭಂಗಕ್ಕೆ ತಕ್ಕ ಪರಿಸ್ಥಿತಿಯನ್ನುಂಟು ಮಾಡಿಕೊಂಡಿರುತ್ತೇವೆ. ಇದರಿಂದ ಸರಕಾರದ ಜುಲುಮೆಯು ಹೆಚ್ಚೆಚ್ಚು ಒಡೆದು ಕಾಣ ಹತ್ತಿದೆ. ಸರಕಾರದ ನೀತಿಯೊಂದು ಕಾಯಿದೆಯನ್ನು ಪಾಲಿಸಲಿಕ್ಕೆ ಸಮರ್ಥನಿರುವಂಥ ನಾಗರಿಕನು ಕ್ವಚಿತ್ ಪ್ರಸಂಗದಲ್ಲಿ ಬುದ್ಧಿಪೂರ್ವಕವಾಗಿಯೂ, ಶಾಂತ ರೀತಿಯಿಂದಲೂ, ಅವುಗಳನ್ನು ಭಂಗಮಾಡಲಿಕ್ಕೆ ಅವನಿಗೆ ಶ್ರಮವೆನಿಸುವದಿಲ್ಲ ಅಲ್ಪ ಕಾಲದಲ್ಲಿ ಮಹತ್ವವಾದ ಉದ್ದೇಶವನ್ನು ನೆರವೇರಿಸಬೇಕಾದರೆ ನಿಯಮಿತ ಭಾಗದಲ್ಲಿ ಕಾಯಿದೆ ಭಂಗವನ್ನು ಬಹು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸಬೇಕು. ಆಗ ಉಳಿದ ಎಲ್ಲಿ ಭಾಗಗಳಲ್ಲಿ ಯಾರೂ ಕಾಯಿದೆಭಂಗವನ್ನು ಮಾಡಬಾರದು. ಅದೇ ಸಮಯದಲ್ಲಿ ರಾಷ್ಟ್ರದ ಪರೀಕ್ಷೆಯ ಕಾಲವು. ಇಂಥ ಸಮಯದಲ್ಲಿ ಯಾರಾದರೂ ತಮ್ಮ ಜನಾಭಿಪ್ರಾಯವನ್ನು ಅರಿಯದೇ ಕಾಯಿದೆ ಭಂಗವನ್ನು ಪ್ರಾರಂಭಿಸಿದರೆ ಅದರಿಂದ ನಮಗೆ ಹಾನಿ ತಪ್ಪುತ್ತದೆ; ಮತ್ತು ರಾಷ್ಟ್ರಕ್ಕೆ ಕಾಯಿದೆ ಭಂಗದ ನಿಜವಾದ ಮಹತ್ವವು ತಿಳಿದಿರುವದಿಲ್ಲವೆಂದು ತೋರಿಸಿಕೊಡುತ್ತದೆ.

ಕಾಯಿದೆ ಭಂಗವನ್ನು ಮುರಿಬಿಡಿಯಲು ಸರಕಾರವು ಕಠೋರವಾದ ಉಪಾಯಗಳನ್ನು ಯೋಜಿಸುವದು ಸಾಹಜಿಕವು. ಯಾಕಂದರೆ ಕಾಯಿದೆಯ ಮೇಲೆಯೇ ಸರಕಾರದ ಅಸ್ತಿತ್ವವು ಅವಲಂಬಿಸಿ ಇರುತ್ತದೆ ಆತ್ಮರಕ್ಷಣಬುದ್ಧಿಯಿಂದಲೇ ಅದು ದಡಪಶಾಹಿಗೆ ಪ್ರವೃತ್ತವಾಗುವದು. ದಡಪಶಾಹಿಯು ಯಶಸ್ವಿಯಾಗಲಿಲ್ಲವೆಂದರೆ ಸರಕಾರದ ಅಧಿಕಾರವು ತಾನಾಗಿಯೇ ಹೇಳ ಹೆಸರಿಲ್ಲದೆ ಹೋಗುವದು. ಅಂದರೆ ಅದು ರಾಷ್ಟ್ರದ ಇಚ್ಛೆಗೆ ತಲೆ ಬಗ್ಗಿಸುವದು. ಇಲ್ಲದಿದ್ದರೆ ನಷ್ಟವಾಗಿ ಹೋಗುವದು. ಸರಕಾರವು ಕೆಣಕಿದರೆ, ಅತ್ಯಾಚಾರವಾಗ್ಯವ ಭಯಂಕರ ಪ್ರಸಂಗವಿರುತ್ತದೆ. ನಾವು ಸ್ವತಃ ಕಠೋರ ಉಪಾಯಗಳನ್ನು ಯೋಜಿಸಲು ಸರಕಾರಕ್ಕೆ ಹಚ್ಚಿ ಅಮೇಲೆ, ಅದರ ವಿಷಯಕ್ಕೆ ಸಂತಾಪಗೊಳ್ಳುವದು ಯೋಗ್ಯವಾದದ್ದೂ ಬೆದಾರ್ಯವಾದದ್ದೂ ಆಗಲಾರದು. ಮತ್ತು ನಾವು ಕೈಕೊಂಡ ಅಹಿಂಸಾವ್ರತಕ್ಕಂತೂ ಅದರಿಂದ ಬಾಧೆಯು ತಟ್ಟೇ ತಟ್ಟುವದು. ನನ್ನನ್ನು ಹಿಡಿಯಬಹುದು; ಶಾಂತಿಮಯವಾದ ಈ ಒಂಡಿನಲ್ಲಿ ಅಂಗವಿದ್ದವರನ್ನು ಹಿಡಿಯಬಹುದು; ಪರಿಪಸಿಯಿಂದ ಕಾಡಬಹುದು. ಇಷ್ಟಾದರೂ ದೇಶದ ಇತರ ಭಾಗದವರು ಸಿಕಾರವಶರಾಗತಕ್ಕದ್ದಲ್ಲ. ಯೋಗ್ಯಕಾಲವು ಪ್ರಾಪ್ತವಾದ ಕೂಡಲೆ, ಉಳಿದವರೆಲ್ಲರು ಕಾಯದೆ ಭಂಗವನ್ನೂ ಮಾಡಬಹುದು; ಮತ್ತು ತುರಂಗವಾಸ ಮೊದಲಾದ ಕಷ್ಟಗಳನ್ನೂ ಅನುಭವಿಸಲು ಸಿದ್ಧರಾಗಬಹುದು ನಿರಪರಾಧಿ ಜನರ ಪ್ರಾಣಗಳನ್ನು ಅರ್ಪಿಸಲು ನಾವು ಇಚ್ಛಿಸುತ್ತೇವೆ. ಅದರಿಂದಲೇ ದೇವರು ಸಂತುಷ್ಟನಾಗುವನು. ದೇಶವು ಇನ್ನು ಮೇಲೆ ಮಹಾಯುದ್ಧವನ್ನು ಪ್ರಾರಂಭಿಸುವದರಲ್ಲಿ ಇರುತ್ತದೆ. ಆದ್ದರಿಂದ ದಿಲ್ಲಿಯಲ್ಲಿ ಹೇಳಿದ ಕಾಯಿದೆ ಭಂಗವೆ ಎಲ್ಲ ಶತ್ರುಗಳನ್ನು ಅಖಂಡವಾಗಿ ಪಾಲಿಸಿ ಎಲ್ಲ ಅಸಹಕಾರವಾದಿಗಳು ಕಾಯದೆ ಭಂಗಕ್ಕೆ ಹೊಗ್ಯತೆಯುಳ್ಳವರಾಗಬೇಕೆಂದೂ, ಮತ್ತು ಎಲ್ಲ ಕಡೆಯಲ್ಲಿಯೂ ಶಾಂತತೆಯು ಸ್ಥಿರವಾಗಿ ಉಳಿಯುವು

ವಂತೆ ವ್ಯಯಿಸಿಸಬೇಕೆಂದೂ ನನ್ನ ಉಪ ದೇಶವಿರುತ್ತದೆ ನಾವಷ್ಟೇ ವ್ಯಕ್ತಿಕಃ ಶಾಂತ ನೃತ್ತಿಯುಳ್ಳವರಾದರೆ ನಮ್ಮ ಕಾರ್ಯಭಾಗ ವಾದಾತ್ಮಾಗುವದಿಲ್ಲ ಅಸಹಕಾರವು ಎಲ್ಲ ಕ ಡೆಯಲ್ಲಿಯೂ ವ್ಯಾಪಿಸಿರುತ್ತದೆಂದು ನಾವು ಅಭಿಮಾನದಿಂದ ಹೇಳುತ್ತೇವ. ಸಾಮಾನ್ಯ ಜನತೆಯು ನಮ್ಮ ಆಫೀಸದಲ್ಲಿದ್ದು ಅದನ್ನು ಅತ್ಯಾಚಾರದಿಂದ ವಂಚಿತ್ತ ಮಾಡುವಷ್ಟು ನಮ್ಮಲ್ಲಿ ಶಕ್ತಿ ಬಂದಿರುವದೆಂದು ನಾವು ಹೆ ಮ್ಮೆ ಕೊಚ್ಚಿಕೊಳ್ಳುತ್ತೇವೆ. ನಾವು ಅದನ್ನು ಸಿದ್ಧ ಮಾಡಿ ತೋರಿಸೋಣ.

ಮೋಹನದಾಸ ಕರಮಚಂದ ಗಾಂಧಿ.
(ಯಂಗ ಇಂಡಿಯಾ)

ನೈತಿಕ ವಾದವು

ನೀತಿ ಮಾರ್ಗವನ್ನು ಬಿಟ್ಟು ಕೂಡಲೆ ನ ಮ್ಮ ಧಾರ್ಮಿಕ ವೃತ್ತಿಗೆ ಸಮಾಪ್ತಿಯ ಕಾ ಲವು ಬರುವದು. ನೀತಿ ಶಾಸ್ತ್ರವನ್ನು ಬದಿಗಿರಿ ಸುವ ಈ ಧರ್ಮವು ಧರ್ಮವೇ ಅಲ್ಲ ಉ ದಾಹರಣಾರ್ಥ:— ಅಸತ್ಯವಾದಿಯು ಕ್ರೂರಾ ಚರಣೆಯು ಇಲ್ಲವೆ ವ್ಯಭಿಚಾರಿಯು ಆಪ ತ್ಕಾಲದಲ್ಲಿ ದೇವರಿಂದ ಸಹಾಯವನ್ನು ದೊರ ಕಿಸಲಾರನು. ಅಸಹಕಾರಿತೆಯು ಹಿಂಸಾತ್ಮಕ ವಾದ ಮಾತ್ರ ಮುಂಬಯಿಯಲ್ಲಿ ತಮ್ಮ ನೀತಿ ಪಥವನ್ನು ಬಿಟ್ಟರು. ಯುವರಾಜರ ಸ್ವಾಗತ ಕಾರ್ಯದಲ್ಲಿ ಟೊಂಕ ಕಟ್ಟಿದ ಪಾರ್ಸೀ ಮ ತ್ತು ಕ್ರಿಶ್ಚಿಯನ್ನರ ಮೇಲೆ ಕೋಪಾವಿಷ್ಟ ರಾಗಿ. ಅವರಿಗೆ ಹಿಂದು ನೀತಿ ಪಾಠವನ್ನು ಕ ಲಿಸಲುದ್ಯುಕ್ತರಾದರು. ಆವರೆಲ್ಲರು ಪ್ರತ್ಯಹ ಹಾರಕ್ಕೊಳಗಾಗಿ ೧೭ ನೇ ತಾರೀಖಿನ ದಿವಸ ಒಂದು ಪ್ರಕಾರದ ಜೀಕದಾಟವನ್ನು. ಆ ಡಿ ಸ್ವಲ್ಪಾದರೂ ಲಾಭ ಹೊಂದದೇ ಕೇವಲ ಹಾನಿಯಲ್ಲಿಯೇ ಮುಳುಗಿದರು.

ಸ್ವರಾಜ್ಯವು ಇಂತಹ ದಾರಿಯಿಂದ ಸಿಗದು. ಈ ಬೊಲ್ಸವಿಹ್ಕ್ ಪದ್ಧತಿಯು ಭಾರತ ಮಾ ತೆಗೆ ಬೇಡವು. ಎದೆತಟ್ಟಿ ಅರಾಜಕತೆಯನ್ನು ಸಹಿಸಪಷ್ಟು ಮೀತಿಮೀರಿದ ಶಾಂತತೆಯು ಭಾ ರತೇಯರಲ್ಲಿ ನೆಲೆಗೊಂಡಿದೆ. ಈ ಪದ್ಧತಿಯನ್ನು ಮನಜೀರ್ವಿಸುವ ವ್ಯಕ್ತಿಗೆ ಅವರು ಶರಣಾಗತ ರಾಗುವರು. ಭಾರತೇಯರ ಆತ್ಮ-ಲಕ್ಷಣ—ಬು ದ್ಧಿಯನ್ನು ಪರಿಶೀಲಿಸಿ ನೋಡುವಾ! ಅಂದರೆ ಶಾಂತತೆಯನ್ನು ಸ್ಥಾಪಿಸಲಿಕ್ಕೆ ಉತ್ಕಟೇಚ್ಛೆಗ ಳಾಗುವದು ಸದ್ಗುಣವೋ? ಇಲ್ಲವೆ ದುರ್ಗ ಣವೋ? ಎಂದರಿತುಕೊಳ್ಳಲು ತಡೆದು ನಿಲ್ಲು ವ ಕಾರಣವಿಲ್ಲ. ಪೃಥ್ವಿಯ ನಾನಾ ಭಾಗಗಳ ಲ್ಲಿ ವಾಸಿಸುವ ಮುಸಲ್ಮಾನರು ನಮ್ಮ ಹಿಂದು ಸ್ಥಾನದಲ್ಲಿ ಜೀವಿಸುವ ಮುಸಲ್ಮಾನರಿಗಿಂತಲೂ ಭಿನ್ನರಾಗಿರುವರು ಹಿಂದುಸ್ಥಾನದಲ್ಲಿ ಬ ಹು ದಿವಸ ವಾಸವಾಗಿದ್ದರಿಂದ ಇಲ್ಲಿಯ ಮು ಸಲ್ಮಾನರು ಹಿಂದುತ್ವಾಸದ ಹೊರಗಿನ ಮುಸ ಲ್ಮಾನರಿಗಿಂತ ಹೆಚ್ಚು ಪಿನಯಶೀಲರಾಗಿದ್ದಾರೆ ತಪ್ಪು ಬೇವ ಮತ್ತು ಸಂಪತ್ತು ಇವುಗಳಿ ಗೆ ಜಾನಿ ತಟ್ಟುವಂಥ ಪ್ರಸಂಗವನ್ನು ಕೆಂಚಿ ತ್ತಾದರೂ ಇಲ್ಲಿಯ ಮುಸಲ್ಮಾನರು ತಡೆದು ಕೊಳ್ಳಲಾರರು. ತಿರಸ್ಕಾರ ಬುದ್ಧಿಯನ್ನು ಹು ಟ್ಟಿಸುವಷ್ಟು ಹಿಂದೂ ಜನರು ಮೈದುಸ್ತಭಾವದ ವರೆಂದು ಗಾಂಧೀ ಮಾತಾಗಿದೆ ಅದೇಕೆ ಈಸ್ತ ಭಾವದ ಕೂಲಕ ಅವರು ತಾಳಿಗೆ ಕಾರ ಣೀಭೂತರಾಗಿದ್ದಾರೆ. ಪಾರ್ಸೀ ಮತ್ತು ಕ್ರಿ ಶ್ಚನ್‌ರಂತೆ ಬಡಿದಾಟ ಕಚ್ಚಾಟಿಗಳಿಗಿಂತ ಶಾಂತತೆಯ ನೇ ಹೆಚ್ಚು ಪ್ರೀತಿಸುವರು. ಧ ರ್ಮವನ್ನು ಶಾಂತತೆಯ ಸೇವಕನನ್ನಾಗಿ ಮಾ ಡಿದ್ದೇವೆ ಈ ಮಹೋಭಾವನೆಯು ನಮ್ಮ ನಿರ್ಬಲಕ್ಕೂ ಸಬಲಕ್ಕೂ ಕಾರಣವಾಗಿದೆ

ಈ ಭಾವನೆಯ ಭಾಗಿಯಾದ ಪತ್ತು ಮು ಹತ್ವವಾದ ಧಾರ್ಮಿಕ ವೃತ್ತಿಯನ್ನು ನಾವು ಒ ಳ್ಳೆಯ ಜಾಗ್ರತೆಯಿಂದ ರಕ್ಷಿಸಬೇಕು ಧಾರ್ಮಿ ಕವಿಷಯದಲ್ಲಿ ಒಲಾತ್ಕಾರವು ಇರಕೂಡದು. ಸ್ವದೇಶೀ ವ್ರತವನ್ನು ಪಾಲಿಸುವದು ನಮ್ಮ ಧರ್ಮದಲ್ಲಿರುವದಿಲ್ಲವೇ? ಕಾರಣ ನಾವು ಖಾ ದಿಯನ್ನು ಧರಿಸಬಾರದೆ? ಆದರೆ ಸ್ವದೇಶಿವ್ರತ ವನ್ನು ಸ್ವೀಕರಿಸುವದು, ವರ್ಜಿಸಲ್ಪಟ್ಟ ವಸ್ತ್ರಗಳ ಮೇಲೆ ಬಹಿಷ್ಕಾರ ಹಾಕುವದು ಇವು ಗಳು ಧರ್ಮಕ್ಕೆ ಬೇಡವಾದ ವಿಷಯಗಳಲ್ಲ. ಅವು ಗಳು ಕೇವಲ ರಾಜಕೀಯ ಸಾಧನಗಳು ಮಾತ್ರ. ಅವುಗಳನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ನಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಅವುಗಳನ್ನು ಸ್ವೀಕರಿಸಿದ್ದರಿಂದ ಅಥವಾ ತಿರಸ್ಕರಿಸಿದ್ದರಿಂದ ನಾವು ಧರ್ಮಭ್ರಷ್ಟರಾಗುವದಿಲ್ಲ. ಆದರೆ ಅಸಹಕಾರಿತೆಯ ಹಿಂಸಾತ್ಮಕ ವಾದ ಮಾತ್ರ ಮುಂಬಯಿಯಲ್ಲಿ ತಮ್ಮ ನೀತಿ ಪಥವನ್ನು ಬಿಟ್ಟರು. ಯುವರಾಜರ ಸ್ವಾಗತ ಕಾರ್ಯದಲ್ಲಿ ಟೊಂಕ ಕಟ್ಟಿದ ಪಾರ್ಸೀ ಮ

ಬೆಲೆಯೇ ಇಲ್ಲ. ಸರಕಾರಕ್ಕಿಂತ ನಾವು ಹೆ ಚ್ಚಿಗೆ ಬಲಾತ್ಕಾರವನ್ನು ಉಪಯೋಗಿಸಿದರೆ, ಹಿಂದುಸ್ತಾನವನ್ನು ಈಗಿನಕಿಂತ ಹೆಚ್ಚು ದಾ ಸ್ಯ ವೃತ್ತಿಯಲ್ಲಿ ಇರಿಸಲಿಕ್ಕೆ ನಾವೇ ಕಾರಣರಾ ಗುವೆವು.

ಸ್ವರಾಜ್ಯದಲ್ಲಿ ಪ್ರತಿಯೊಬ್ಬನಿಗೆ ವ್ಯಕ್ತಿ ಸ್ವಾ ತಂತ್ರ್ಯವು ಸಂಪೂರ್ಣವಾಗಿರತಕ್ಕದ್ದು. ನ ಮ್ಮಲ್ಲಿಯ ಸಣ್ಣ ಪ ಟ್ಟಿ ಜನರಿಗೆ ಸಹ ಅವರ ಶರೀರಕ್ಕೆ ಕಿಂಚಿತಾದ ೂ ತೊಂದರೆಯಾಗ ದಂತೆ ಸ್ವಾತಂತ್ರ್ಯವನ್ನು ಕೊಡತಕ್ಕದ್ದು.

ಅತ್ಯಧಿಕ ಸ್ವತಂತ್ರತೆಯನ್ನು ಗಳಿಸಿ ಬೆಳೆ ಸುವ ನಿಜವಾದ ಮಾರ್ಗವೆಂದರೆ ಅದು ಅಹಿಂಸಾತ್ಮಯು ಅಸಹಕಾರ ಮಂತ್ರವೇಸರಿ ಪೂರ್ಣ ಲೋಕಮತಸ್ವಾತಂತ್ರ್ಯವು ದೊ ರೆತ ಮೇಲೆ ಅದರಲ್ಲಿ ಒಹು ಜನ ಸಮಾ ಜಾಭಿಪ್ರಾಯವೇ ಸರ್ವ ಮಾನ್ಯವಾಗುವದ ಮತಾಭಿಪ್ರಾಯಗಳು ಕಡಿಮೆಂ ಾದಪಕ್ಷದಲ್ಲಿ ನೈತಿಕ ಧೈರ್ಯದಿಂದಲೇ ನಾವು ಜನ ಸಮೂ ಹದಿಂದ ದೂರಿದ್ದು ನಮ್ಮ ಧರ್ಮಸಂಹಿತೆ ಯನ್ನು ಸಿದ್ಧ ಪಡಿಸಿ ತೋರಿಸ ಬೇಕು ಮ ಹವ್ಮೊದನು ಲೋಕಮತಬಲಾತ್ಕಾರಕ್ಕೊ ಪ್ಪಿ ತಾನು ದೂರಿದ್ದು ಕೊಂಡು ತನ್ನ ಧ ರ್ಮಾಸಕ್ತಿಯನ್ನು ಕಾಯ್ದಿಟ್ಟು ಕೊಂಡಿದ್ದು ಆದರೆ ಅವನಿಗೆ ತಾನು ಶೋಕಾಭಿಪ್ರಾಯಕ್ಕೆ ಸರಿಯಾದೆನೆಂದು ಕಂಡು ಬಂದ ಕೂಡಲೆ ಧ ರ್ಮ ಪ್ರಸಕ್ತಿಯಲ್ಲಿ ಯಾವ ತ ದ ಒಲಾತ್ಕಾ ರವು ಇರಕೂಡದೆಂದು ನಾರಿ ಹೇಳ ತೊಡ ಗಿದನು ಆದರಂತೆಯೇ ನಾವು ಸಹ ಇದೇ ಬಾಯಿ ಮಾತಿನಿಂದಾಗಲಿ, ಶಾರೀರಕ ಬಲ ದಿಂದಾಗಲಿ ರಾಷ್ಟ್ರಜ್ಞೆಯನ್ನುಲ್ಲಂಘಿಸಿ, ಬ ಲ್ಲೋ ಭರದಿಂದ ಬೆಳೆ ಸಿತ್ತ ನಡೆದ ಈ ಚ ಳವಳಿಯಲ್ಲಿ ನಮ್ಮ ಸ್ವಂತ ತಪ್ಪಿನಿಂದ ಲೇ ನಮ್ಮ ಹೆಜ್ಜೆಗಳನ್ನು ಹಿಂದಿಡಲಾ ಗದು.

ಮೋಹನದಾಸ ಕರಮಚಂದ ಗಾಂಧಿ.

(ಯಂಗ ಇಂಡಿಯಾ)

ಆತ್ಮ ನೀರೀಕ್ಷಣ

ಕೆಲವರು ನನಗೆ ಬಹು ಕಳಕಳಿಯಿಂದ ಪ ತ್ರಗಳನ್ನು ಬರೆದಿರುವರು ಮುಂದಿನ ಜಾನೇ ವಾರಿ ಒಳಗಾಗಿ ಸ್ವರಾಜ್ಯವು ದೊರೆಯದಿ ದ್ದರೆ ಮುತ್ತು ಅಗ್ನಿ ನಾನು ಕಾರಾಗೃಹವ ಹೊರಗೆ ಉಳಿದರೆ ನಾನು ಆತ್ಮ ಹತ್ಯೆಯಿಂದನ್ನು ಮಾಡಕೂಡದೆಂದು ಅವರೆಷ್ಟಿರು ನನಗೆ ಹೇ ಳಿ ಕೊಂಡಿರುವರು. ಬಾಷೆಯು ಅಂತಃಕರಣ ದೊಳಗಿನ ವಿಚಾರಗಳನ್ನು ಸಂಪೂರ್ಣವಾಗಿ ವ್ಯಕ್ತ ಮಾಡಲರಿಯದೆಂದು ನನಗೆ ತೋರುತ್ತ ದೆ ವಿಚಾರಗಳು ಅನಿಶ್ಚಿತ ಇಲ್ಲವೆ ಅಪೂ ರ್ಣವಿದ್ದರೆಂಕೂ ತೀವ್ರ ಹೇಳಿಯಿತು ನವಜೀ ವನದಲ್ಲಿ ನಾನು ಬರೆದದ್ದು ಸಾಕಷ್ಟು ಸ್ಪಷ್ಟ ವಾಗಿದ್ದಿತ್ತೆಂದು ನನ್ನ ಕಲ್ಪನೆಯಿತ್ತು ಆದರೆ ಭಾಷಾಂತರವು ಜನರಲ್ಲಿ ತಪ್ಪು ತಿಳುವಳಿ ಕೆಯನ್ನು ಹುಟ್ಟಿಸಿರುತ್ತದೆಂದು ನನಗೆ ತೋರು ತ್ತದೆ. ಮೂಲ ಲೇಖನದ ಬಗ್ಗೆಯಾದರೂ ಇ ದೇ ಹಾಡು ಆಗಿದೆಯೆಂಬಂತೆ ಕಾಣುತ್ತದೆ.

ಜನರು ನಾನು ಪೂರ್ಣತ್ವವನ್ನು ಹೊಂ ದಿರುವೆನೆಂದು ತಿಳಿದುಕೊಂಡಿರುವದರಿಂದ ಈ ಬಗೆಯು ತಪ್ಪು ತಿಳುವಳಿಕೆಯು ಅವ ಲ್ಲಿ ತಲೆ ದೋರಿರುತ್ತದೆ ಭಗವದ್ಗೀ ಯ ಬಗ್ಗೆ ನನ್ನ ಗಿರುವ ಆದರವನ್ನು ನೋಡಿ ಅನೇಕ ಜನ ಮಿತ್ರರು ಆದರೊಳಗಿನ ಕಲವು ಶ್ಲೋಕಗಳ ನ್ನು ನನ್ನೆದುರಿಗೆ ಇಟ್ಟು ನೀವು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೆದರಿಕೆ ತೋರಿಸುವದು ನೀವು ಆಚರಿಸಲೆತ್ನಿಸುತ್ತಿರುವ ತತ್ವಗಳಿಗೆ ವಿರುದ್ಧವಾಗಿದೆಯೆಂದು ಹೇಳು ವರು ಈ ಎಲ್ಲ ಜನರು ನಾನೊಬ್ಬ ಕೇವಲ ಸತ್ಯ ವನ್ನು ಹುಡುಕುವವನಾಗಿದುವೆನೆಂಬ ಮಾ ತನ್ನು ನಂಬಿರುವರೆಂಬಂತೆ ತೋರುತ್ತದೆ. ಸತ್ಯದ ಮಾರ್ಗವು ನನಗೆ ದೊರೆತಿದೆಂಬುದೇ ನೋನಿಜ ಅದರಂತೆಯೇ ಸತ್ಯವನ್ನು ಕಾಣಿ ಸುವಕ್ಕೋಸ್ಕರ ಅವಿರತವಾಗಿ ನಾನು ಪ್ರಯ ತ್ನಿಸುತ್ತಿರುವದಾದರೂ ನಿಜ. ಅದರೆ ಈ ವರೆಗೂ ನನಗದು ದೊರೆತಿಲ್ಲೆಂದು ನಾನು ಒಪ್ಪಿಕೊ ಳ್ಳದಿರಿನು ಸತ್ಯವನ್ನು ಸಂಪೂರ್ಣವಾಗಿ ಕಾ ಯವದೆಂದರೆ ಆತ್ಮ ಸಾಕ್ಷಾತ್ಕಾರ ಮಾಡಿಕೊ ಳ್ಳುವದು, ಅಂದರೆ ಪೂರ್ಣತ್ವವನ್ನು ಹೊಂದು ವದು ನನ್ನಲ್ಲಿರುವ ನ್ಯೂನತೆಗಳ ಜ್ಞಾನವು ನನಗಿರುವದು. ಮತ್ತು ಈ ಜ್ಞಾನದಲ್ಲಿಯೇ ನ ನ್ನ ನಿಜವಾದ ಸಾಮರ್ಥ್ಯ ವಿರುವದು ಯಾ ಕೆಂದರೆ ಮನುಷ್ಯರು ತಮ್ಮಲ್ಲಿಯ ನ್ಯೂನತೆಗ ಳನ್ನು ಶ್ವಚಿತವಾಗಿಯೇ ಅರಿತುಕೊಳ್ಳುವರು.

ನಾನು ಪೂರ್ಣತ್ವವನ್ನು ಪಡೆದವನಾಗಿ ದ್ದರೆ ನನ್ನ ನೆರೆ ಹೊರೆಯ ಜನರ ಬಳಲು ಕೆಂಡು ನನಗೀಗಾಗುವ ದುಃಖವು ಆಗುತ್ತಿ ದ್ದಿಲ್ಲ. ಅವರ ಬಳಲು ಕಂಡು ಅವನ್ನು ಹೋ ಗಲಾತಿಸಲು ಉಪಾಯವೊಂದನ್ನು ಶೋಧಿ ಸಿ ನನ್ನಲ್ಲಿ ನೆಲೆಗೊಂಡಿದ್ದ ಸತ್ಯದ ಬಲದಿಂದ ಆ ಉಪಾಯವನ್ನು ಉಪಯೋಗಿಸಿಕೊಳ್ಳಲು ಅವರಿಗೆ ಅಗತ್ಯ ಪಡಿಸುತ್ತಿದ್ದೆ

ಆದರೆ ಈ ವರೆಗೂ ಸತ್ಯವು ನನಗೆ ನಿಶ್ಚಿಳ ವಾಗಿ ಕಾಣ ವದಿಲ್ಲ. ಕಾಚಿನೊಳ ಗಿಂದ ನೋಡಿದರೆ ಹೇಗೆ ಮಸಕು ಕಾಣುವದೋ ಹಾ ಗೆ ಕಾಣುತ್ತದೆ. ಅದ್ದರಿಂದ ಜನರನ್ನು ಮು ನಗಾಣಿಸುವದು ನನ್ನ ಸಾಲಿಗೆ ಬಹು ಕಷ್ಟ ಸಾಧ್ಯವಾದ ಕೆಲಸವಾಗಿದೆ ಈ ಕೆಲಸದಲ್ಲಿ ನನಗೆ ಯಾವಾಗಲೂ ಯಶಸ್ಸು ದೊರೆಯು ತ್ತದೆಂಬ ನೇಮವಿಲ್ಲ. ಹೀಗಿರಲು, ನನ್ನ ಮಾ ತೃಭೂಮಿಯು ದುಃಖದಿಂದ ಜರ್ಜರಿತವಾ ದ್ದನ್ನು ಮತ್ತು ಪ್ರತ್ಯಕ್ಷ ವಿಶ್ವನಾಯಕನ ನೆ ರಳಿನಲ್ಲಿ ನನ್ನ ದೇಶಬಾಂಧವರ ಶರೀರಗಳು ಅಸ್ಥಿಸಂಜರದಂತೆ ಇರುವದನ್ನು ಕಂಡು ನನ್ನ ಅಂತಃಕರಣಕ್ಕೆ ಪೆಪೆನೆಯಾ ದಿದ್ದರೆ ನಾನು ಮನುಷ್ಯನೆಂದೆನಿಸಿಕೊಳ್ಳುವದೆಂತು? ಈ ದು ಸ್ಥಿತಿಯು ನಿಶ್ಚಯವಾಗಿ ಕ್ರಮಶ ಕಡಿಮೆಯಾ ಗುತ್ತ ಹೋಗದಿರವೆಂಬ ವಿಶ್ವಾಸವೇ ನಾನ್ನ ಜೀವಂತನಾಗಿದ್ದುದಕ್ಕೆ ಕಾರಣವು ಆದರೆ ಸು ಖ-ದುಃಖ-ಶೀತೋಷ್ಣ ಮುಂತಾದ ದ್ವಂದ್ವಗ ಳನ್ನು ಸಹಿಸುತ್ತ ರಾಷ್ಟ್ರಕ್ಕೆ ಜೀವಸಾಮೃತ ರೂಪವಾದ ರಾಷ್ಟ್ರೀಯ ಪ್ರಸಾರವನ್ನು ಮಾ ಡಲು ಅವಿಶ್ರಾಂತರಾಗಿ ಹೆಣಗಿದ್ದೂ ನನ್ನ ಉಪದೇಶವು ಜನರ ಕಿವಿಯುವರೆಗೆ ಮಾತ್ರ ಹೋಗಿ ಹೃದಯದಲ್ಲಿ ಈ ವರೆಗೂ ನಡದಿದ್ದ ರಿ, ರಾಷ್ಟ್ರೀಯ ಶಾಂತತಾಮಯವಾದ ಕ್ರಾಂತಿ ಯ ಸಾಧನದಿಂದ ಈ ವರ್ಷವು ಮುಗಿಯುವ ದರೊಳಗಾಗಿಯೇ ಸ್ವರಾಜ್ಯವು ದೊರೆಯುವ ದೆಂಬ ಮಾತಿನಲ್ಲಿ ಜನರು ವಿಶ್ವಾಸವುಳ್ಳವರಾಗಿ ದಿದ್ದರೆ, ಕಳೆದ ಹನ್ನೆರಡು ತಿಂಗಳಲ್ಲಿ ಕಂಡು ಬಂದ ಜನರ ಉತ್ಸಾಹವು ಹೆಸರಿಗೆ ಮಾತ್ರ ಉತ್ಸಾಹವಿದ್ದು ದೇಶದ ಮುಂದೆ ಇಟ್ಟ ಕಾರ್ಯಕ್ರಮವನ್ನು ಜನರು ಈಗಲೂ ಕೂಡ ಶ್ರದ್ಧೆಯಿಂದ ಸಾಂಗಗೊಳಿಸಲು ಮುಂದು ವರಿಯದಿದ್ದಿಗೆ ಮತ್ತು ಶಾಂತತೆಯ ಸಂದೇಶ ವು ಇಂಗ್ಲಿಶ ಜನರ ಅಂತಃಕರಣಕ್ಕೆ ಮುಟ್ಟಿ ದಿದ್ದರೆ ನನ್ನ ಕವಸ್ಯದ ಬಗ್ಗೆ ನನ್ನಲ್ಲಿ ಸಂಶ ಯವು ಹುಟ್ಟಿ ಈ ಸ್ವರಾಜ್ಯ ಯುದ್ಧದ ನೇ ತೃತ್ವವನ್ನು ವಹಿಸಲು ನನ್ನಲ್ಲಿ ತಕ್ಕ ಸಾಮರ್ಥ್ಯ ವಿಲ್ಲೆಂದು ನನಗೆ ಅನಿಸಕೂಡದೋ? ಸತ್ಯನಿ ಷ್ಠನಾದ ಮನುಷ್ಯನು ಈ ಪ್ರಸಂಗದಲ್ಲಿ ಮಾ ಡತಕ್ಕದ್ದೇನು? ಇಂಥ ಸ್ಥಿತಿಯಲ್ಲಿ ನಾನು ನ ನ್ನನ್ನು ಹುಟ್ಟಿಸಿದಂಥ ಪರಮಾತ್ಮನ ಮುಂದೆ ಅತ್ಯಂತ ವಿನೀತಭಾವದಿಂದ ಅಡ್ಡಬಿದ್ದು ಈ ಅನುಪಯುಕ್ತವಾದ ದೇಹದಿಂದ ನನ್ನನ್ನು ಮು ಕ್ತ ಮಾಡಿ ಲೋಕ ಸೇವೆಗಾಗಿ ನನ್ನನ್ನು ಹೆ ಚ್ಚು ಸಾವರ್ಥ್ಯವುಳ್ಳವನನ್ನಾಗಿ ಮಾಡೆಂದು ಬೇಡಿಕೊಳ್ಳಬಾರದೋ?

ಈಗಿನ ನೌಕರಶಾಹಿಯ ವ್ಯವಸ್ಥೆಯು ಬ ದಲಾಗಿ ರಾಜ ಸತ್ತೆಯು ಪ್ರಜೆಗಳ ಕೈಯಲ್ಲಿ ಬರುವನು ಸ್ವರಾಜ್ಯವೆಂಬುದೇನೋ ನಿಜ. ಇ ದು ಮಾತ್ರ ಸ್ವರಾಜ್ಯದ ಹೊರಗಿನ ರೂಪವು. ಆದರೆ ನನಗೆ ಬೇಕಾಗಿರುವ ಸಾರಭೂತವಾ ದ ವಸ್ತುವೆ ಬೇರೆ ಇರುವರು. ಯಾವ ಸಾ ಧನದಿಂದ ನಾವು ಸ್ವರಾಜ್ಯವನ್ನು ಪಡೆಯುವೇ ಕೆಂದು ಕೇವಲಿಸುತ್ತೇವೋ ಆ ಸಾಧನವನ್ನು ಯಾವತ್ತು ಜನರು ಅನೈಯಿಂದ ಸ್ವೀಕರಿಸ ಬೇಕೆಂದೂ, ಅರ್ಥಾತ್ ಜನರ ಅಂತರಂಗ ದಲ್ಲಿ ಸಂಪೂರ್ಣವಾದ ಬದಲಾವಣೆಯಾಗ ಬೇಕೆಂದೂ ನಾನು ದೇಡುತ್ತೇನೆ. ಹಿಂಯಗಳು ಅಸ್ಪೃಶ್ಯತೆಯ ದೋಷವನ್ನು ತೆಗೆದೊಗೆಯ ಲಿಕ್ಕೆ, ಹಿಂದು ಮುಸಲ್ಮಾನರು ಪರಸ್ಪರ ವೈರ ಭಾವವನ್ನು ತಳ್ಳಿ ರಾಷ್ಟ್ರಜೀವನಕ್ಕೆ ಪರ ಸ್ಪರ ಸ್ನೇಹವೇ ಮುಖ್ಯಾಧಾರವೆಂದು ಪರಸ್ಪ ರ ಸ್ನೇಹ ಭಾವದಿಂದ ಕೂಡಿರುವದಕ್ಕೆ, ಯಾ ವ್ಯಸ್ತು ಹಿಂದುಸ್ಥಾನವನ್ನು ಆರ್ಥಿಕ ಪಾರ ತಂತ್ರ್ಯದಿಂದ ಮುಕ್ತ ಮಾಡುವ ಉತ್ಸಾಹವೆ

ಸಾಧನವು ರಾಟಿಯೇ ಆಗಿರುವದೆಂದು ತಿಳಿದು ಅವನ್ನು ಸಂಗ್ರಹಿಸುವದಕ್ಕೆ ಮತ್ತು ಎಲ್ಲಿ ಜನರು ಶಾಂತತಾಮಯ ಅಸಹಕಾರಯೋಗವೇ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ತಂದು ಕೊಡುವದೆಂದು ನಂಬುವದಕ್ಕೆ ಬಹಳ ಕಾಲವು ಬೇಕಾಗಬೆಂದು ನನಗೆ ಖಾತ್ರಿಯಿದೆ. ಇದೇ ದೇಶದ ಇದೇ ತನ್ನ ನಿಶ್ಚಿತವಾದ ಕಾರ್ಯಕ್ರಮವೆಂದು ಅವನ್ನು ಜ್ಞಾನ ಪೂರ್ವಕವಾಗಿ ಸ್ವೀಕ್ರಿಯಿಂದ ಸ್ವೀಕರಿಸಿದರೆ ಮಾತ್ರ ಹಿಂದೀ ಜನತೆಗೆ ಸಾರಭೂತವಾದ ವಸ್ತುವು ದೊರೆತಂತಾಗುತ್ತದೆ ಹೀಗಾಯಿತೆಂದರೆ ಒಳ್ಳೇ ಭೂಮಿಯುಳ್ಳ ಬೀಜವನ್ನು ಊರಿ ಮೇಲೆ ನೀರೆರೆದರೆ ಮೊಳಕೆ ಯೊಡೆಯುವದು ಹೇಗೆ ನಿಶ್ಚಯವೋ ಹಾಗೆಯೇ ಹೊರಗಿನ ರೂಪವು, ಸ್ತ್ರೀಜಗಳೇ ಸತ್ತಾಧಾರಿಗಳಾಗುವದು, ತಾನಾಗಿಯೇ ಬರುವದು ನಿಶ್ಚಯವು.

ಮೊಟ್ಟ ಮೊದಲು ಪುಣೆಯಲ್ಲಿ ನನ್ನ ಮಿತ್ರರ ಮುಂದೆ, ಆ ಮೇಲೆ ಇತರರ ಮುಂದೆ, ನನ್ನ ಬಾಯಿಂದ ಹೊರಟ ಉದ್ಗಾರಗಳಿಂದ ಕೇವಲ ನನ್ನಲ್ಲಿಯ ನ್ಯೂನತೆಗಳ ಜ್ಞಾನವು ನನಗಿದೆಂಬುವನ್ನು ವಾಚಕರು ತಿಳಿದಿರಬಹುದು ಮತ್ತು ನಾನು ವಹಿಸಿದಂತೆ ತೋರುತ್ತಿದ್ದ ಸ್ವರಾಜ್ಯ ಘುಂಡ್ಯದ ಮುಖಂಡತ್ವವನ್ನೂ ನನ್ನಲ್ಲಿ ವಹಿಸಲೂ ಯೋಗ್ಯತೆಯಿಲ್ಲವೆಂಬುವದನ್ನು ವಾಚಕರು ಅದರ ಮೇಲಿಂದ ಕಂಡು ಹಿಡಿದಿರಬಹುದು ನಿಂತಾಶಾವಾದವನ್ನು ನಾನು ಉಪದೇಶಿಸಿಲ್ಲವಷ್ಟೇ? ಸ್ವರಾಜ್ಯವು ಇದೇ ವರುಷ ದೊರೆಯುತ್ತಿದೆಂಬ ಮಾತಿನಲ್ಲಿ ಸದ್ಯಕ್ಕೆ ಎಷ್ಟು ವಿಶ್ವಾಸವುಳ್ಳವನಿರೆ ನೆನೋ ಅಷ್ಟು ಇದಕ್ಕೂ ಮೊದಲು ಎಂದೂ ಇರಲಿಲ್ಲ. ಅದರೆ ಯಾವದೊಂದು ಕಾರ್ಯವನ್ನು ನೆರವೇರಿಸಲು ನನ್ನಲ್ಲಿ ಸಾಮರ್ಥ್ಯವಿಲ್ಲೆಂದು ನನಗೆ ತಿಳಿದರೆ ಅದರ ಭಾರವನ್ನು ನಾನು ಹೊಲಾರನೆಂದು ಹೇಳಿರುವೆನು. ಸತ್ಯದ ಶೋಧಕ್ಕಾಗಿ ವಿಶ್ರಾಂತಿಯಿಲ್ಲದೆ ಯತ್ನಿಸುವವರಿಗೆ ಹೇಗೆ ಅದು ನಿಷ್ಕಾಮಕರ್ಮವೆನಿಸುವದೋ ಹಾಗೆಯೇ ನಮ್ಮ ಮಾರ್ಗವು ಸದೋಷವಾದದ್ದಿಂದು ಕಂಡುಬಂದರೆ ತತ್‌ಕ್ಷಣವೇ ಹಿಂದಕ್ಕೆ ಸರಿಯುವದು ನಿಷ್ಕಾಮಕರ್ಮವೆನಿಸುವದು. ಅದರಂತೆಯೇ ಯಾವಾದರೊಂದು ಕಾರ್ಯದ ನೇತೃತ್ವವನ್ನು ವಹಿಸಲು ತನ್ನಲ್ಲಿ ಯೋಗ್ಯತೆಯಿಲ್ಲವಂದು ತಿಳಿದ ಕೂಡಲೇ ಸ್ವಲ್ಪವಾದರೂ ದುಂಬಿಯಾಗದೆ ಮುಂದಾಳುತನವನ್ನು ಬಿಟ್ಟು ಕೊಡುವದಾದರೂ ನಿಷ್ಕಾಮಕರ್ಮವೆನಿಸುತ್ತದೆ. ನನ್ನಲ್ಲಿ ಇನ್ನೂ ಎಲ್ಲಿಯೋ ಅಡಕವಾಗಿದ್ದ ಅಧಮ ಮನೋವಿಕಾರಗಳು ನನಗೆ ನನ್ನ ಕಾರ್ಯದಲ್ಲಿ ಏನೂ ಅಡ್ಡಿ ಮಾಡದಂತೆಹೊರಟು ಹೋಗಿ ನನ್ನ ಸೇವೆಯು ಹೆಚ್ಚಿಗೆ ಫಲಕಾರಿಯಾಗಬೇಕಾಗಿದೆ; ಈ ಉದ್ದೇಶದಿಂದಲೇ ಅನಾದಿ ಅನಂತನೆಂದು ಹೆಸರು ಪಡೆದ ಆ ಈಶ್ವರರೂಪೀ ಕುಂಬಾರನ ಕೈಯಲ್ಲಿಯ ಮಣ್ಣು ನುದ್ದೆ ಮಾತ್ರಯಾಗಿರಬೇಕೆಂದೂ ಆ ಶಾಶ್ವತವೂ ನಿರ್ವಿಕಾರಿಯೂ ಆದ ವಸ್ತುವಿನಲ್ಲಿ ಐಕ್ಯ ಹೊಂದಬೇಕೆಂದೂ ನನ್ನಲ್ಲಿ ನೆಲೆಗೊಂಡಿರುವ ಉತ್ಕಟವಾದ ಆಸೆಯನ್ನು ಇಲ್ಲಿ ಸಂಕ್ಷೇಪ ರೀತಿಯಿಂದ ತೋರ್ಪಡಿಸಿದ್ದೇನೆ.

(ಯಂಗ ಇಂಡಿಯಾ) ಮೋಹನದಾಸ ಕರಮ
ಚಂದ ಗಾಂಧಿ.

(ಗಿಗನೇ ಪುಟದಿಂದ ಮುಂದೆ ಸಾಗಿದ್ದು)

ಹಿಂದುಸ್ಥಾನದಲ್ಲಿ ವಿನಯವಸ್ತ ನಿರ್ವಿಸಕ್ತಕ್ಕದ್ದು ಸುದ್ಯವದಿಂದಾಗಲಿ ಪರೋಕ್ಷವಿಂದಾಗಲಿ ಇದೀ ಹಿಂದುಸ್ಥಾನದ ಪರ್ವತ ಹಾಗೆ ಇದೆ. ಅಂದರೆ ಅಸಹಕಾರಿಗಳೆ ರಾಷ್ಟ್ರೀಯ ಸಭೆಯ ಲಕ್ಷಗಟ್ಟಿ ಮೆಂಬರರು ನಮ್ಮ ಹಜೆಗಿರುವರು ಇಷ್ಟೇಅಲ್ಲ, ಮೆಂಬರರಲ್ಲದಂಥ ಕೋಟ್ಯಾವಧಿ ಜನರು ನಮ್ಮ ಬಗ್ಗೆ ಸಹಾನುಭೂತಿಯುಳ್ಳವರಿರುವರೆಂದು ನಮ್ಮ ವಿಶ್ವಾಸವಿರುವದು ಇದೇ ಸ್ಥಿತಿ ಇರುವದು ವಿಹಿತವು ಯಾಕಂದರೆ ಜನರು ನಮ್ಮ ಕಡೆಗೆ ಇರದಿದ್ದರೆ ನಾವು ಸ್ವರಾಜ್ಯವನ್ನು ಗಳಿಸುವದಾದರೂ ಯಾರ ಸಲುವಾಗಿ? ಜನರು ಸಂಕಾರದ ವಕ್ಷವನ್ನು ವಹಿಸಿದರೆ ನಾವು ಅವರನ್ನು ಬಲಾತ್ಕಾರಿಂದಿಂದ ಸ್ವತಂತ್ರ ಮಾಡಬಲ್ಲೆವೋ?

ಮೇಲಿನ ನನ್ನ ತಿಳುವಳಿಕೆಯು ಹಿಂದುಮೆಳೆ ಸರಿಯಾದದ್ದಿರದಿದ್ದರೆ ನಸ್ತಿಂದ-ನಮ್ಮಿಂದ-ಭಯಂಕರವಾದ ತಪ್ಪಾಗಿರುತ್ತದೆ. ಶಾಂತತೆಯ ಸಾಮರ್ಥ್ಯದಲ್ಲಿ ವಿಶ್ವಾಸವುಳ್ಳವರು ನಾಲ್ಕೇಜನರು ಇರುವರೆಂದು ತಿಳಿದುಬಂದರೆ ನಾವು ನಿರಾಯಾಸವಾದಿವೆಂಬಂತಿಲ್ಲ. ಅದರೆ ಕಾರ್ಯಪದ್ಧತಿಯು ನಮಾತ್ರ ಭಿನ್ನವಾಗಲಿಕ್ಕೆದೇಕು. ಯಾವನಾದರೊಬ್ಬ ಅಸಹಯೋಗಿಯು ಜೀಲಿಗೆ ಹೋಗಲು ಇಲ್ಲವೆ ಸಾಯುಲು ಅವನ ಹಿಂದೆ ಗೊಂದಲವು ಏಳಕೂಡದು. ಸಹಕಾರಿಗಳಾದಂಥ ಜನರಲ್ಲಿ ನಾವು ಪ್ರತಿಷ್ಠಾರಹಿಕರಾದರೆ ನಾವು ಆನಂದದಿಂದ ಸವಿನಯು ಆಜ್ಞಾಭಂಗವನ್ನು ಮಾಡಬಲ್ಲೆವು. ಯಾಕಂದರೆ ಆ ಮೇಲೆ ನಮ್ಮ ಹೆಸರಿನಿಂದ ಯಾರೂ ಶಾಂತತಾಭಂಗವನ್ನು ಮಾಡಲಿಕ್ಕಿಲ್ಲ

ಗುಜರಾಥದಲ್ಲಿ ಈಗಲೇ ಸವಿನಯ ಭಂಗವನ್ನು ಆರಂಭಿಸದೇಕೆಂದು ಮನಸ್ಸು ಮಾಡಿದ್ದು ಅದು ಸಮಸ್ತ ಹಿಂದುಸ್ಥಾನದ ಸಲುವಾಗಿಯಿತ್ತು ಆ ಭಂಗದ ಬಲದಿಂದ ಖಿಲಾಫತದ ನಿಷ್ಪಯದಲ್ಲಿನ್ಯಾಯವನ್ನು ದೊರಕಿಸಬೇಕೆಂದೂ ಹಾಗು ಸ್ವರಾಜ್ಯವನ್ನು ಗಳಿಸಬೇಕೆಂದೂ ಆಶೆಯುಳ್ಳವರಾಗಿದ್ದಿವಿ. ಆದ್ದರಿಂದ ಸಮಸ್ತ ಹಿಂದುಸ್ಥಾನವು ಶಾಂತವಾಗಿದ್ದು ಈ ಕಾರ್ಯದಲ್ಲಿ ತನ್ನ ಸಮ್ಮತಿಯನ್ನು ಕೊಡುವದು ಅತ್ಯವಶ್ಯವಾದ ವ್ಯಾತು.

ಆದರೆ ಮುಳತೀ ಪೇರೆಯಲ್ಲಿತುಂಬ ಆಕಸ್ಮಿಕವಾದ ಸ್ಥಾನಿಕ ದುಃಖಗಳನ್ನು ನೀಗಿಸಲು ಬೇಕಾದವನು ಸವಿನಯು ಭಂಗವನ್ನು ಮಾಡಬಲ್ಲನು ಅವನ ಬಗ್ಗೆ ನಮಗೆ ಸಹಾನುಭೂತಿಯು ಇರಬೇಕು. ಶಕ್ಯವಿದ್ದರೆ ಅವನಿಗೆ ನಾವು ಸಹಾಯವನ್ನು ಮಾಡಬೇಕು. ಆದರೂ ನಾವು ಶಾಂತ ಸ್ಥಿರಾಗಿರಬೇಕು. ಅಶಾಂತಿಯು ಪರಿಣಾಮವು ಕೆಟ್ಟದ್ದಾಗಿರುವದು ಮುಳತೀ ಪೇಠೆಯ ಹೆಸರಿನಿಂದ ನಾವು ಅತ್ಯಾಚಾರಕ್ಕೆ ಪ್ರವೃತ್ತರಾದರೆ ಮುಳತೀ ಪೇರೆಗೆ ಮತ್ತಿತ್ತು ಶ್ರಮವು ಹೆಚ್ಚಾಗುವದು.

ಸಾರಾಂಶ ಪ್ರಕಿಯೊಂದು ಸ್ಥಳದಲ್ಲಿ ಶಾಂತಿಯನ್ನು ನಲೆಗೊಳಿಸುವದು ಅತ್ಯವಶ್ಯವು ಮನಸ್ಸಿನಲ್ಲೇನಾದರೂ ಸಂಶಯ ವಿದ್ದರೆ ನಾವು ಅದನ್ನು ದೂರ ಮಾಡತಕ್ಕದ್ದು. ಮವಾಳಿ ಜನರನ್ನು ನಾವು ನಮ್ಮ ಕಡೆಗೆ ಒಲಿಸಿಕೊಳ್ಳಬೇಕ್ಕೆ ಬೇಕು ಅವರಾದರೂ ನಮ್ಮ ಬಾಂಧವರೇ. ನಸಗೆ ಅವರನ್ನು ಬಿಟ್ಟುಕೊಡಲಿಕ್ಕೆ ಬರುವಂತಿಲ್ಲ ಅವರ ವಶರಾಗಿ ನಾವು ಕೆಲಸಸನ್ನು ನತಿಸಿದರೆ ಸ್ವರಾಜ್ಯವು ಆಗದೆ ಮವಾಳೀ-ದಂಗೇಖೋರರ ರಾಜ್ಯವಾಗುವದು ಮವಾಳೀ ಜನರಿಗೆ ರಾಜ್ಯ ಪಾಡಲಿಕ್ಕೆ ಕೊಟ್ಟರೆ ಅವರೂ ನಾವೂ ಕೂಡಿ ಸಾಯುವದೇ ಸೈ. ಅದ್ದರಿಂದ ನಾವೆ ಮವಾಳೀ ಜನರನ್ನು ಅರಿತು ಅವರೊಡನೇ ವಿಚಾರವಿನಿಮಯ ಮಾಡಿ ಅವರಿಗೆ ಧರ್ಮದ ವತ್ತ ದೇಶದ ಹಿತವನ್ನು ತಿಳಿಸಿಕೊಟ್ಟು ಅವರ ಅಶಾಂತಿಯಿಂದ ದೇಶ ಕಾರ್ಯಕ್ಕೆ ಭಂಗ ಉಂಟಾಗದಂತೆ ನಾವು ನಡತ್ತಿಸಬೇಕು. ಇದು ಬಹು ದೀರ್ಘವಾದ ಕಾರ್ಯ ಕ್ರಮವೆಂದು ಹೇಳಲೂ ಕೂಡದು ಕುಂಬಿಯ ಬಲ್ಲಿ ಈ ಕಾರ್ಯವು ಹದಿನೈದು ದಿವಸಗಳಲ್ಲಿ ಆಗಬಲ್ಲದು. ಮವಾಳಿ ಜನರು ಸರಳ ಸ್ವಭಾವದವರು ಅವರ ಕರ್ಮವಶರಾಗಿ ಅಡ್ಡ ಹಾದಿಯನ್ನು ಹಿಡಿದಂಥ ಬಾಂಧವರಿರುವರು. ಅವರನ್ನು ನಾವು ನಮ್ಮ ಅಂಧ ಸ್ವಾರ್ಥದ ದೆಶೆಯಿಂದ ಕೆಟ್ಟವರನ್ನಾಗಿ ಮಾಡಿರುವೆವೆ. ಅವರನ್ನು ಒಲಿಸಿಕೊಳ್ಳಲು ನವ ಶಕ್ತಿ ಸಾಮರ್ಥ್ಯ ವಿರದ್ದಿರೆ ನಿಜವಾಗಿ ನಾವು ಸ್ವರಾಜ್ಯಕ್ಕೆ ಅನಾರ್ಹರಿದ್ದೇವೆಂದು ತಿಳಿಯಿರಿ, ಇಂಗ್ಲಿಶರ ಸತ್ತಿಯಿಂದ ಹಿಂದುಸ್ಥಾನದಲ್ಲಿ ನಿಂತು ಹೋಯಿತು. ಆಮೇಲೆ ಮವಾಳಿಗಳ ದುರ್ವರ್ತನದಿಂದ ನಮ್ಮನ್ನು ರಕ್ಷಿಸಬಲ್ಲರಾರು? ಸ್ವರಾಜ್ಯವು ದೊರೆತ ಮೇಲೆ ಅವರನ್ನು ಸಂಧಾರಿಸೋಣವೆಂದರೆ ಸಾಗದು ಸ್ವರಾಜ್ಯವು ದೊರೆಯುವ ಮೊದಲೇ ಸುಧಾರಣೆಯಾಗತಕ್ಕದ್ದು ಯಾಕಂದರೆ ಸ್ವರಾಜ್ಯದ ಕರ್ತುಗಳಲ್ಲಿಯು ಇದೊಂದು ಮುಖ್ಯವಾದ ಕರ್ತು ಆಗಿರುವದು. ಅವರನ್ನು ಕಸ್ತ ಒಳಗಿಂದ ನಮ್ಮ ವಶದಲ್ಲಿ ತರಲಿಕ್ಕೆ ಶಕ್ಯವಿಲ್ಲ.

ಆದರೆ ನನ್ನಂಥವೆರು ಆ ಮವಾಳೀ ಜನರ ಶಸ್ತ್ರದಿಂದ ಮರಣವಾದರೆ ಅದನ್ನು ಸ್ವೀಕರಿಸುವರು. ಅವರೆ ತಮ್ಮ ಶಸ್ತ್ರದಿಂದ ಆ ಜನರನ್ನು ಕೊಂದು ಜೀವಿಸಲು ಹವಣಿಸಿದರು.

(ನವಜೀವನ) ಮೋ. ಕ- ಗಾಂಧಿ.

ಶಾಮರಾವ ವಿಠ್ಠಲರಾವ ಮಂಗಳವೇಢೇಕರ ಮತ್ತು ಕಂಪನಿ

ಸರಾಫೀ ವ್ಯಾಪಾರಸ್ಥರು

ಬಾಗಲಕೋಟ

ಬೆಳ್ಳಿ, ಬಂಗಾರ, ವಜ್ರ, ಹರಳು, ಮೊದಲಾದ ವಸ್ತುಗಳು ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ. ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವೆನಿಸಿದ ಶಹಾಪೂರ ಸಾಂಗಲಿಗಳಲ್ಲಿಯು ಬಹು ವಿಧವಾದ ಬೆಳ್ಳಿಯ ಸಾಮಾನುಗಳೂ ಇವೆ. ಬೆಳ್ಳಿಯ ತಿರುಗಣಿತಂಬಿಗೆ, ಬೆಳ್ಳಿ ಬಂಗಾರದ ಜರಡಿ ಗಡಿಗೆ ಬಂಗಾರದ ಗುಲಾಬಿ ಹೂವು, ಮಗ್ಗಿವಾಲಿಗಳು ಒಹು ಮಾಟ. ಬೆಂಗಳೂರ ಕಡೆಯ ಹರಳಿನ ಸಾಮಾನುಗಳೂ ಉಂಟು.

ಇಲ್ಲದೇ ವೇಲ್ವರದ ಕಸ್ತೂರಿ ಕೇಸರಿಯೂ ನಮ್ಮಲ್ಲಿ ದೊರೆಯುತ್ತಿದೆ ವ್ಯವಹಾರಿಕತನದ ಬಗ್ಗೆ ನಮ್ಮ ಅಂಗಡಿಯು ಹೆಸರಾಗಿದೆ.

ಕೃಷ್ಣರಾವ ಶ್ಯಾಮರಾವ
ಮಂಗಳವೇಢೇಕರ
ವ್ಯವಸ್ಥಾಪಕ

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಪ್ರತಿಗಳು ಸ್ವಲ್ಪೇ ಹೊರಡುವವು

ಬೇರೆ ಬೇರೆ ರಾಷ್ಟ್ರಗಳಲ್ಲಿಯೆ

ಅಸಹಕಾರ

ಎಂಬ ಗ್ರಂಥವು ಅಚ್ಚಾಗುತ್ತಲಿದೆ ಬೇಗನೆ ಹೊರಬೀಳುವದು "Non-co-operation inother lands" ಇದರ ಭಾಷಾಂತರ ಮುದ್ದಾದ ಕನ್ನಡಿಗರ ದಶೆಯಿಂದ ಬರೆಯಲ್ಪಟ್ಟಿದೆ. ಬೇಗನೇ ಹೆಸರು ನೋಂದಾಯಿಸಿರಿ. ಕಡ್ಡಿವಾದ ಅಚ್ಚಗನ್ನಡ ಭಾಷೆ! ಅಂದವಾದ ಮುದ್ರಣ.

ವಿಳಾಸ :— ನರಸಿಂಹ ಶ್ರೀನಿವಾಸ ಕನ್ನಲಾವೂರ
ಮಂಗಳವಾರ ಪೇಟೆ ಧಾರವಾಡ

ಶ್ಯಾಮರಾವ ಮತ್ತು ರಾಜೇರಾವ ಮಂಗಳವೇಢೇಕರ ಕಂಪನಿ.

ಜವಳೀ ವ್ಯಾಪಾರಸ್ಥರು

ಬಾಗಲಕೋಟ

ಕೈನೂಲಿನಿಂದ ಸಿದ್ಧವಾದ ಖಾದೀ ಅರಿವೆಸೂ, ಹಿಂದುಸ್ಥಾನದ ಗಿರಣಿಗಳಲ್ಲಿ ತಯಾರಾದ ಬೇರೆ ಬೇರೆ ತರದ ಎಲ್ಲಾ ಜವಳೀ ವಸ್ತುಗಳೂ ನಮ್ಮಲ್ಲಿ ದೊರೆಯುತ್ತವೆ. ಒಹು ವಿಧವಾದ ಅಂದ ದೇಶೀ ಧೋತರಂಗಳೂ ಶ್ಯಾಲಗಳೂ ನಮ್ಮಲ್ಲಿ ವಿಶೇಷ.

ಒಂದಾವರ್ತಿ ನಮ್ಮಲ್ಲಿ ಬಂದು ಹೋದರೆ ನಮ್ಮ ವ್ಯವಹಾರಿಕತನದ ಬಗ್ಗೆ ಯಾರಿಗೂ ಏನೂ ಸಂದೇಹ ಉಳಿಯುವದು.

ಪದ್ಮೋಕಾ ಸಿಂಗರಿ
ವ್ಯವಸ್ಥಾಪಕ.

ನೀತಿ ಧರ್ಮ

ಮಹಾತ್ಮಾ ಗಾಂಧಿಯವರ ನೀತಿಧರ್ಮವೆಂಬ ಅತ್ಯುತ್ಕೃಷ್ಟವಾದ ಪುಸ್ತಕದ ಅನುವಾದವು.

ಪ್ರತಿಯೊಬ್ಬ ಕನ್ನಡಿಗನೂ ಓದಿ ಮನನ ಮಾಡಲಿಕ್ಕೆ ಯೋಗ್ಯವಾದದ್ದು ಸವಲತ್ತು ಬೇಕಾದ್ದರಿಂದ ಈಗೆಯೇ ಹೆಸರುಗಳನ್ನು ರಜಿಸ್ಟರ ಮಾಡಬೇಕು.

ವಿಳಾಸ — ರಾಮಚಂದ್ರ ಸದ್ಗುರುರಾವ ಸಾಲಿ ಬಿ. ಏ.
ವಿಜಾಪೂರ

ಕಾಶೀಯಾತ್ರೆಗೆ ಹೋಗುವವರಿಗೆ ಸುಖವಾಗಿ ಕಾಶೀಯಾತ್ರೆ ಮಾಡಿಸಿಕೊಂಡು ಬರುವ ಸಂಸ್ಥೆ

(Indian Administration)

ರಾಜ್ಯಪದ್ಧತಿಯು ಫೋರ್ಟ ಇಂಡಿಯಾದವರಿಗೆ ಅದರ ಮಾರ್ಗಕ್ಕೆ ವಿಶೇಷವಾಗಿ ಹೊಸ ಸಂಸ್ಥಾನಗಳನ್ನು ನಿರ್ಮಿಸುವ ಕೆಲಸವನ್ನು ಕೈಯಲ್ಲಿ ತೆಗೆದುಕೊಂಡಾಗಿನಿಂದ ಬರೆಯಲ್ಪಟ್ಟಿದೆ.

ಹೊಸದಲೇ ಹೆಸರುಗಳನ್ನು ರಜಿಸ್ಟರ ಮಾಡಿಸಲಿಕ್ಕೆ ಸವಲತ್ತು ಮಾಡಲಾಗಿದೆ.

ವಿಳಾಸ — ಸಂಪಾದಕ ಕರ್ನಾಟಕ ಪತ್ರಿಕೆ
ವಿಜಾಪೂರ.

ಮಹತ್ವದ ಸೂಚನೆಯು.

ಕನ್ನಡ ನವಜೀವನದ ಕಛೇರಿಯು ಬಾಗಲಕೋಟೆಯಲ್ಲಿರುವದು. ಅದಕ್ಕೆ ಸಂಬಂಧಿಸಿದ ಪತ್ರ ವ್ಯವಹಾರ ಮನಿಯಾರ್ಡರ ಮೊದಲಾದವುಗಳೆಲ್ಲಿ ಕೆಳಗಿನ ವಿಳಾಸಕ್ಕೆ ಕಳಿಸಲ್ಪಡಬೇಕು

"ವ್ಯವಸ್ಥಾಪಕ ಕನ್ನಡ ನವಜೀವನ"
ಬಾಗಲಕೋಟ ಜಿಲ್ಲಾ ವಿಜಾಪೂರ.

ಚಂದಾದಾರರಲ್ಲಿ

ವಿಜ್ಞಾಪನೆ.

ಕನ್ನಡ ನವಜೀವನವನ್ನು ವ್ಹಿ. ಪಿ ಯಿಂದ ಕಳಿಸುವ ವ್ಯವಸ್ಥೆಯಿಲ್ಲವು ನಾವು ಇಡುವದಿಲ್ಲ. ಆದ್ದರಿಂದ ಹೊಸದಾಗಿ ಚಂದಾದಾರರಾಗಲಿಚ್ಛಿಸುವವರು ವರ್ಗಣೀ ಹಣವನ್ನು ಮನಿಯಾರ್ಡರದಿಂದ ಮುಂಗಡ ಕಳಿಸಿಕೊಡಬೇಕು.

ಈಗಾಗಲೇ ಹೆಸರುಗಳನ್ನು ನೋಂದಾಯಿಸಿದ ಮೊದಲಿನ ಆಶ್ರಯದಾತರಿಗೆ ಮಾತ್ರ ಸಂಚಿಕೆಗಳು ವ್ಹಿ ಪಿ. ಯಿಂದ ಕಳಿಸಲ್ಪಡುವವು.

ವ್ಯವಸ್ಥಾಪಕ ಕನ್ನಡ 'ನವಜೀವನ'
ಬಾಗಲಕೋಟ

ಈ ಪತ್ರವನ್ನ ಮಿ॥ ಗುಂಡೆರಾವ ರಾಮಚಂದ್ರ ಮಣೂರಕರ ಇವರು ತಮ್ಮ ವಿಜಾಪೂರ ಗ್ರಾಮ ಪಂಚಾಯತ ಮುದ್ರಾಲಯದಲ್ಲಿ ಮುದ್ರಿಸಿ, ಮಾಲಕ ಶ್ರೀನಿವಾಸ ರಾಜೇರಾವ ಮಂಗಳವೇಢೇಕರ ಬಾಗಲಕೋಟ ಇವರ ಗೋಸ್ಕರ ವಿಜಾಪೂರದಲ್ಲಿ ಪ್ರಸಿದ್ಧಪಡಿಸಿದರು.

ಹಿರೇ ಕ್ಲೈ.

REGISTERED No B 158

ಜಾಹೀರಾತಿನ ದರಃ-

'ಕನ್ನಡ ನವಜೀವನ'ದ ಒಂದು ಕಾಲಮಿ
ಗೆ ಒಂದು ಇಂಚಿಗೆ ಪ್ರತಿಯೊಂದು ಸಾರಿ
ರೂಪಾಯಿ ಕಾಯುತು ಜಾಹೀರಾತುಗಳ
ಗ್ಗೆ ಸಮುಕ್ಷವು ಅಥವಾ ಪತ್ರದ್ವಾರದಿಂದ
ಕೊಳ್ಳಬೇಕು.

ವಾರ್ಷಿಕ ವರ್ಗಣಿ ರೂ. ೪-೦-೦
ಅರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೩
ಮಾದರಿ ಸಂಚಿಕೆ ಬೇಕಾದವರು
೦-೧-೬ ಕಿಕೀಟ ಕಳಿಸಬೇಕು.

ಶ್ರೀ.

ಕನ್ನಡ ನವಜೀವನ.

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದ
ಈ ವಾರ ಪತ್ರಿಕೆಯು ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ಮಾರ್ಗಶೀರ್ಷ ಶುದ್ಧ ೯ ಶಕೆ ೧೮೪೩. ಗುರುವಾರ ತಾ ೧೮ ನೇ ದಿಸಂಬರ ೧೯೨೧ ಇಸ್ವಿ. | ಸಂಚಿಕೆ

ಟಿಪ್ಪಣಿಗಳು.

ಸತ್ಯದ ವಿಪರ್ಯಾಸ.

ಮುಂಬಯಿಯಲ್ಲಾದ ಮೊನ್ನಿನ ದಂಗೆಯಲ್ಲಿ ಪೋಲೀಸರಾ ಲಸ್ಕರೀ ಜನರೂ ಪಕ್ಷಪಾತ ಬುದ್ಧಿಯುಳ್ಳವರಾಗಿದ್ದರ; ಶಾಂತತೆಯನ್ನು ಸ್ಥಾಪಿಸಲಿಕ್ಕೆ ಅವರು ಎನೂ ಪ್ರಯತ್ನ ಬಡಲಿಲ್ಲ. ಆದರೆ ಜನರೇ ತಮ್ಮ ತಮ್ಮೊಳಗೆ ಶಾಂತತೆಯನ್ನುಂಟು ಮಾಡಿಕೊಂಡರು ಎಂಬದಾಗಿ ನಾನು ಮೊದಲೇ ತಪ್ಪಟ್ಟಿದ್ದೆ; ಆದರೆ ನಾನನ್ನುವದೆಲ್ಲ ಸುಳ್ಳು ಎಂದು ಮುಂಬೈ ಸರಕಾರದವರು ಜಾಹೀರ ಪಡಿಸಿದ್ದಾರೆ. ಈ ಜಾಹೀರನಾಮೆಯ ಬಗ್ಗೆ ಖಂಡಿತವಾಗಿಯೂ ನನಗೆ ವಿಷಾದವೆಸಿಸರುತ್ತದೆ; ನನ್ನ ಕನಸಿನಲ್ಲಿ ಸಹ ಈ ತರದ ಜಾಹೀರನಾಮೆ ಯು ಹೊರಟೇಕೆಂದು ತಿಳಿದಿರಲಿಲ್ಲ. ಮೇಲೆ ಹೇಳದ ಅಪರಾಧಗಳನ್ನೆಲ್ಲದೇ ಇನ್ನೂ ಒಂದು ಅಪರಾಧವನ್ನು ಸರಕಾರವು ನನ್ನೆ ಮೇಲೆ ಹೊರಿಸಲಿ; ಈ ಸಂಗತಿಯನ್ನು ನಾನು ಹಿಂದೆ ಹೇಳಿರಲಿಲ್ಲ, ಈಗ್ಗೆ ಮಾತ್ರ ಹೇಳುವೆನು. ನಾಗರಿಕರ ಜೀವವನ್ನಾಗಲೀ, ಆಸ್ತಿಯನ್ನಾಗಲೀ, ರಕ್ಷಿಸುವ ಸಾಮರ್ಥ್ಯವೇ ಪೋಲೀಸವರ್ಗದಲ್ಲಿಯೂ ಲಸ್ಕರೀ ಜನರಲ್ಲಿಯೂ ಇರಲಿಲ್ಲ. ೧೭ ನೇ ತಾರೀಖಿನ ದಿವಸ ಮುಂಬೈಯಲ್ಲಿ ಟ್ರಾಮುಗಳೂ ಮೋಟಾರಗಳೂ ಸುಡಲ್ಪಟ್ಟವು; ಈ ಸಡುವಿಕೆಯನ್ನು ನಿಲ್ಲಿಸುವದು ಸಹ ಈ ಅಧಿಕಾರಿಗಳಿಂದಾಗಲಿಲ್ಲ. ಇದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಭೆಂಡಿ ಬಝಾರದಲ್ಲಿ ಕೆಲೆಯ ಅಂಗಡಿಯು ಸುಟ್ಟು ಬೂದಿಯಾಯಿತು; ಅದನ್ನು ಸಹ ಬಂದು ಮಾಡುವದು ಈ ಅಧಿಕಾರಿಗಳಿಂದಾಗಲಿಲ್ಲ. ೧೮ ನೇ ೧೯ ನೇ ತಾರೀಖಿನ ದಿನ ಸಹ ಅವರು ಹೆಚ್ಚಿಗೇ ಜಾಣರಾಗಲಿಲ್ಲ. ಹೊಡೆಯುವದು, ಮನೆಮಾರಿಗೆ ಬೆಂಕಿ ಹಚ್ಚುವದು ಒಂದೇ ಸವನೆ ನಡೆದೇ ಇದ್ದವು. ಈ ದುಸ್ಕೃತಿಗಳು ಬಂದಾಗುವಂತ ಅ ಅಧಿಕಾರಿಗಳಿಂದ ಎನೂ ಪ್ರಯತ್ನವಾಗಲಿಲ್ಲ; ನಮಗೆ ಸಹಾಯ ಯೆಂಡಿರಿ; ನಮ್ಮನ್ನು ಸಂರಕ್ಷಿಸಿರಿ, ಎಂದು ಕೇಳಿಕೊಂಡ ಜನರಿಗೆಲ್ಲ "ಯುವರಾಜನ ಸ್ವಾಗತ ಕಾರ್ಯದಲ್ಲಿ ಎಲ್ಲ ಜನರೂ ತೊಡಗಿಕೊಂಡಿದ್ದಾರೆ; ಈಗ್ಗೇ ಹೆಚ್ಚಿಗೇ ಜನರನ್ನು ನಿಮ್ಮ ಸಹಾಯಕ್ಕೆಂದು ತರುವದು ನಮ್ಮಿಂದಾಗದೆ"ಂದು ಸ್ಪಷ್ಟವಾಗಿ ಹೇಳಿದರು.

ದಂಗೆಯಾದ ಸ್ಥಳದಲ್ಲಿಯೇ ಅಲ್ಲಿಯ ಜನರನ್ನೂ ಮನೆಮಾರನ್ನೂ ರಕ್ಷಿಸಲಿಕ್ಕೆ ಪೋಲೀಸ ಮತ್ತು ಲಸ್ಕರೀ ಜನರಲ್ಲಿ ಸಾಮರ್ಥ್ಯವಿದ್ದಿಲ್ಲವೆಂದ ಮೇಲೆ, ಅವರು ಶಾಂತತೆಯನ್ನು ಸ್ಥಾಪಿಸುವ ಪ್ರಶ್ನೆತಂತೂ ದೂರೇ ಉಳಿಯಿತು. ಅಸಹಕಾರಿಗಳಿಷ್ಟೇ ಶಾಂತತೆಯನ್ನು ನೆಲೆಗೊಳಿಸಬಹುದು ನಾನೇನು ಅನ್ನುವದಿಲ್ಲ, ಸಹಕಾರಿಗಳು, ಹಿಂದೂ ಜನರು, ಮುಸಲ್ಮಾನರು, ಪಾರ್ಶೀ ಜನರು, ಕ್ರಿಶ್ಚನ್ನರು ಇವರೆಲ್ಲಿ ಇಂಗ್ಲೀಷರು ಕೂಡ ಬೆರೆತಿದ್ದರು. ಎಲ್ಲರೂ ಗೂಡಿಯೇ ಈ ಕಾರ್ಯದಲ್ಲಿ ತತ್ಪರರಾಗಿದ್ದರು. ಶಾಂತತೆಯುಳ್ಳಿ ಪ್ರೀತಿಯುಳ್ಳ ನಾಗರಿಕರೆಲ್ಲರೂ ಒಟ್ಟುಗೂಡದಿದ್ದರೆ, ಮನಃ ಶಾಂತತೆಯನ್ನು ನೆಲೆಗೊಳಿಸುವದು ಕಷ್ಟವೇ ಇದ್ದಿಲ್ಲ. ವಿಮಾನಸಾಹೇಬ ಛೋಟಾನಿ, ಸರ ಫೆರೋಝುಕೆಟ್ಟು ವಾದ್ರೀ, ಬ್ಯಾಂಕರ, ಸರೋಜನೀ ನಾಯಡೂ, ಮೊಡೀ ಮೊದಲಾದವರು ಅತಿಕಯ ಕಳಕಳಿಯಿಂದ ಶ್ರಮ ಬಟ್ಟರು. ಅಸಹಕಾರಿಗಳು ಮೊದಲಿಗೆ ಬೀಗಿ ಕೊಂಡದ್ದರಿಂದ ಅವರಿಗೆ ಪೌರುಷೋತ್ಸವು ದಾಸರು ಛೀ ಹಾಕಿದ್ದರು; ಆದರೂ ಶಾಂತತೆ ನೆಲೆಗೊಳ್ಳುವಂತೆ ಪ್ರತ್ನ ಬಟ್ಟದ್ದರಿಂದ ಅವರು ಜನರ ಮನ್ನಗೆ ಪಾತ್ರರಾಗದೇ ಇರಲಿಲ್ಲ. ನಟರಾನ್, ವಾಲ, ಡಗ್ಲಾಸ, ವಿಮದಲಾಲ ಜರಾದರೂ ಈ ಕಾರ್ಯದಲ್ಲ ಶ್ರಮವರ ಅಭಾರವನ್ನು ಮನ್ನಿಸಿದ್ದಾರ

ಇನ್ನು ಪಕ್ಷಪಾತದ ಬಗ್ಗೆ ದುಷ್ಟಬುದ್ಧಿಯಿಂದ ಪ್ರೇರಿತರಾದ ಹಲ ಕೆಲವು ಪಾರ್ಶೀ ದಂಗೆ ಬೋರರನ್ನು ಕಣ್ಣಾರೆ ಕಂಡರೂ ಕೂಡ ಪೋಲೀಸರು ಸುಮ್ಮನೆ ನೋಡುತ್ತ ನಿಂತಿದ್ದರೆಂದೂ, ಪೀಡಿಸುವ ಬೇರೆ ಪಾರ್ಶೀ ಜನರನ್ನು ಪೋಲೀಸರು ರಕ್ಷಿಸಲಿಲ್ಲವೆಂದೂ ಪಾರ್ಶೀ ಜನರೇ ನ್ನ ಮುಂದೆ ಒಪ್ಪಿದ್ದಾರೆ ಆದರೆ ಈ ಸಗತಿಯನ್ನು ನಾನಿಲ್ಲಿ ವಿವೇಚಿಸವದಿಲ್ಲ. ಪೋಲೀಸ ಅಥವಾ ಲಸ್ಕರೀ ನರಲ್ಲಿ ಒಬ್ಬೊಬ್ಬನನ್ನೇ ಆರಿಸಿ ತೆಗೆದು ವನನ್ನು ನಿಂದಿಸಲೂ ಇಚ್ಛಿಸುವದಿಲ್ಲ. ಹೊತ್ತು ಇಲ್ಲದಿದ್ದರೆ ನಾನೆನ ದಿವಸದರೂ ಸತ್ಯ ಮತ್ತು ಪ್ರಾಮಾಣಿಕತೆದ ಕಡೆಗೆ ಆ ಜನರನ್ನು ತರುವದು ಕ್ಯವಿದೆ; ಬಹುತರವಾಗಿ ಅವರೆಲ್ಲ ಹಿಂದೀ ಜನರೇ ಇದ್ದಾರೆ; ಇಂಗ್ಲಿಷ ಜನರು ಕೂಡ ಒಂದಿಲ್ಲೊಂದು ದಿನ ನವಪಕ್ಷಕ್ಕೆ ಬರುವರು; ಆದರೆ ಅಸಹಕಾರಿಗಳು ಮಾತ್ರ ಅಹಿಂಸಾ ತತ್ವವನ್ನು ಜೀವನಾಗಿ ಮನ್ನಿಸಬೇಕು. ಉದ್ದಾಮನದಿಂದ ಜನರನ್ನು ಬೆದರಿಸುವದರಲ್ಲಿಯೆ, ಅವರ ಜೀವವನ್ನು ಅಪಹರಿಸುವದರಲ್ಲಿಯೂ, ಪೋಲೀಸ ಮತ್ತು ಲಸ್ಕರೀ ಜನರು ತೊಡಗಿಕೊಳ್ಳಲಿಲ್ಲೆನ್ನುವದು ಮಾತ್ರ ಆ ಜನರಿಗೆ ಭೂಷಣವಾಗಬಹುದು. ಇನ್ನ ಲಬಾರ ಮತ್ತು ಮದ್ರಾಸಗಳ ವಿಷಯವಾಗಿ ಸ್ವಲ್ಪ ಬರೆದು, ಈ ವಿಷಯವನ್ನ

ಮುಗಿಸುವೆನು. ಮಲಬಾರಕ್ಕೆ ಹೋಗಿ ಅಲ್ಲಿ ಕೆಲಸ ಮಾಡಲಿಕ್ಕೆ ಅಸಹಯೋಗಿಗಳಿಗೆ ಸರಕಾರದವರು ನಿರ್ಬಂಧ ಮಾಡಿದ್ದರಿಂದ ಅಲ್ಲಿ ಈ ವರೆಗೂ ಇಲ್ಲದ ಅನಾಹುತವು ನಡೆಯುತ್ತಲಿದೆ. ಮದ್ರಾಸದಲ್ಲಿಯೂ ಹಾಗೇ. ಕೂಲಿಕಾರರು ಕಟ್ಟು ಮಾಡಿದ ಸ್ಥಳದಲ್ಲಿ ಕೆಲಸ ಮಾಡಲಿಕ್ಕೆ ನಿರ್ಬಂಧವಿದ್ದರಿಂದ ಸುಮಾರು ಎರಡು ತಿಂಗಳ ವರೆಗೆ ಅಲ್ಲಿ ಕೊಲೆಗಡತನವು ನಡೆದೇ ಇತ್ತು. ಮುಂಬಯಿಯಲ್ಲಿ ಶಾಂತತೆಯನ್ನು ಮರಳಿ ನೆಲೆಗೊಳಿಸುವದಕ್ಕಾಗಿ ಯತ್ನಿಸುತ್ತಿರುವ ಜನರಿಗೆ ಸರಕಾರದವರು ಅಡ್ಡಿಯನ್ನುಂಟು ಮಾಡಲಿಲ್ಲ, ಇದು ಮಾತ್ರ ತಮಗೆ ಭೂಷಣವೆಂದು ಇಲ್ಲಿಯ ಸರಕಾರದವರು ಬೇಕಾದರೆ ತಿಳಿಕೊಳ್ಳಬಹುದು

ಅಪರಾಧಿಗಳು ಯಾರು.?

ಗುಪ್ತ ಪೋಲೀಸರೇ ಈ ದಂಗೆಯನ್ನು ಎಬ್ಬಿಸಿ ಅವರೇ ಇದಕ್ಕೆ ಉತ್ತೇಜನವನ್ನು ಕೊಟ್ಟರೆಂದು ತಪ್ಪದೇ ಜನರು ನುಡಿಯುತ್ತಲಿದ್ದರು ನಾನು ಹಿಂದುಸ್ಥಾನಕ್ಕೆ ಬಂದು ಆರು ವರ್ಷಗಳಾದವು. ಈ ಅವಧಿಯಲ್ಲಿಲ್ಲ ಗುಪ್ತ ಪೋಲೀಸರ ಮೇಲೆ ಬಂದೇ ನವನೆ ಈ ತರದ ದೋಷವನ್ನು ಜನರು ಹೊರಿಸುತ್ತಿರುವದನ್ನು ನಾನು ಕಂಡಿದ್ದೇನೆ. ಈ ಜನರ ಸಂಘವು ನನ್ನನ್ನು ಪರಿಚಯ ಮಾಡಿಕೊಂಡಿದೆ ಅದರ ವಿಷಯಕ್ಕೆ ಜನರಲ್ಲಿ ಹರಡಿದ ನಾನಾ ತರದ ಅಕೃತ್ಯಕರವಾದ ಸುದ್ದಿಗಳನ್ನು ನಾನು ನಂಬಲಾರೆ. ನೀಚತನವು ಆ ಸಂಘದಲ್ಲಿ ತುಂಬಿಕೊಂಡಿರುತ್ತೆಂಬದನ್ನು ಒಪ್ಪುತ್ತೇನೆ. ಅದರಲ್ಲಿಯ ದೋಷಗಳನ್ನು ತೆಗೆದು ಸಿದ್ಧ ಮಾಡಿ ಕೊಡಲಿಕ್ಕೆ ಬರುವಂತೆದೆಂಬದೂ ಸತ್ಯ. ಅದರೂ ಅವುಗಳಲ್ಲಿ ಅತಿಶಯೋಕ್ತಿ ಹೆಚ್ಚಿದೆ. ಅವೆಲ್ಲ ಸತ್ಯವಿದ್ದರೆ ಖಂಡಿತವಾಗಿ ಅವು ಭಯಂಕರವಾದವುಗಳನ್ನೆಲಿಕ್ಕೆ ಆಡ್ಡಿ ಇಲ್ಲ. ಮತ್ತು ನಾವು ತೀರ ಕೈಕಾಗದ ಹೇಡಿಗಳೆನ್ನಲಿಕ್ಕೆ ಅವೇ ಸಿದ್ಧಾಂತಗಳು. ಶೌರ್ಯ ಮತ್ತು ಸ್ವಾಭಿಮಾನಗಳಿಲ್ಲದ ಮಕ್ಕ ಜನರ ಮೇಲೆಯೇ ಇಂಥ ಸಂಘದವರ ಆಟ ನಡೆಯುವದು. ಮಹೀದೆಗಳಾ ನಾದ್ರೀ ಗುಡಿಗಳೂ ನಷ್ಟ ಹೊಂದಿವೆ; ಶ್ರೀಮತಿ ಸರೋಜಿನಿ ನಾಯ್ಡುಡು ನಾನು ಮತ್ತು ಇತರರು ಗಾಯ್ಡು ಪಟ್ಟಿದ್ದೆವೆ; ಈ ಮೊದಲಾದ ಸುದ್ದಿಗಳನ್ನು ಮೊನ್ನಿನ ಮುಂಬೈ ದಂಗೆ ಕಾಲದಲ್ಲಿ ಆ ಗುಪ್ತ ಪೋಲೀಸರೇ ಹಬ್ಬಿಸಿದರೆಂಬದಾಗಿ ಪ್ರಮುಖ ಜನರು ಸಹ ನಡಿಯುತ್ತಾರೆ. ಟ್ರಾಮು ಗಾಡಿಗಳನ್ನು ಕೆಡಿಸಲಿಕ್ಕೂ ಸುಡಿಸಲಿಕ್ಕೂ ಆ ಗುಪ್ತ ಪೋಲಿಸರೇ ಕಾರಣರೆಂದೂ ಹೇಳುತ್ತಾರೆ. ಈ ಎಲ್ಲ ಸಂಗತಿಗಳನ್ನು ನಾನು ನಂಬಲಾರೆ; ಇನ್ನು ಆ ಸಂಗತಿಗಳು ಸತ್ಯವಾಗಿದ್ದರೇ ಅದರೆ ಮುಂಬೈ ಜನರು ಸಾಳುಖೋರಿ ಪೆದ್ದರೂ ಮೂಢರೂ ಆಗಿದ್ದು ನಾಗರಿಕತನದ ಹಕ್ಕುಗಳನ್ನು ಪಾಲಿಸಿಗೊಳ್ಳಲಿಕ್ಕೆ ಯೋಗ್ಯರಿಲ್ಲವೆನ್ನಲಿಕ್ಕೆ ಬೇಕು. ಸ್ವರಾಜ್ಯ ಸಂಪಾದನೆಗೂ ಅನೇಕ ಗುಣಗಳು ನಮ್ಮಲ್ಲಿ ಬೇಕಾಗುತ್ತವೆ. ಈ ಗುಪ್ತ ಪೋಲೀಸರ ಆಟನೇನೂ ನಾಗದಂತೆ ನಡೆಯುವದು ಆ ಗುಣಗಳಲ್ಲಿ ಒಂದಾಗಿದೆ. ನಾವು ನಪ್ಪಕ್ಕೆ ಈಡಾಗಬೇಕೆಂಬ ಉದ್ದೇಶದಿಂದ ಯಾರಾದರೂ ನಮ್ಮನ್ನು ಹುರಿದುಂಬಿಸಲಿಕ್ಕೆ ಬಂದರೆ ನಾವು ಅವರಿಗೆ ಎಳ್ಳಷ್ಟಾದರೂ ಅವಕಾಶವನ್ನು ಕೊಡತಕ್ಕದ್ದಲ್ಲ; ಮತ್ತೂ ನಾವು ಯಾವ ಮಾತಿನಲ್ಲಿ ನಂಬಿಗೆಯನ್ನು ಇಡಬಾರದೋ, ಅಂಥದರಲ್ಲಿಯೇ ನಮ್ಮ ವಿಶ್ವಾಸವು ಕೂಡಬೇಕೆಂದು ಯಾರಾದರೂ ನಮ್ಮ ಮನ ಒಲಿಸ ಬಂದರೆ ನಾವು ಸರ್ವಥಾ ಅವರ ವಕದಲ್ಲಿ ಬೀಳಬಾರದು. ಹೀಗೆ ಮಾಡದೇ ಹೋದರೆ ನಾವು ಎಂದಿಗೂ ಸ್ವರಾಜ್ಯವನ್ನು ಲಭಿಸೆವು. ನಾವು ಕುದ್ಧವಾಗಿಯೂ ಸತ್ಯವಾಗಿಯೂ ಅಹಿಂಸಾ ಧರ್ಮವನ್ನು ಪಾಲಿಸಿದರೆ ತಪ್ಪು ತಡೆಗಳನ್ನೆಂದೂ ಮಾಡಲಾರೆವು. ಗುಪ್ತ ಪೋಲೀಸರೇ ಆಗಲಿ, ನಾವೇ ಆಗಲಿ, ನಮ್ಮ ಮಧ್ಯದಲ್ಲಿರುವಂಥ ಉರಿಯನ್ನು ಹೆಚ್ಚಿಸುತ್ತಲಿದ್ದೇವೆಂಬದು ನಿಜ. ಇಂಥ ಉರಿಯನ್ನು ನೊಂದಿಸುವ ಶಕ್ತಿಯೇ ನಮ್ಮಲ್ಲಿರದಿದ್ದರೆ, ಬೇಗನೇ ನಾವು ಸ್ವತಂತ್ರರಾಗಬೇಕೆಂಬ ಇಚ್ಛೆಯನ್ನು ಸರ್ವಥಾ ಬಿಟ್ಟು ಬಿಡುವದೇ ಲೇಸು.

ಹಾಳು ಸುದ್ದಿಯ ಬಗ್ಗೆ ಎಚ್ಚರಿಕೆ.

ಮುಂಬೈ ದಂಗೆಯಿಂದ ನಾವು ಅನೇಕ ಸಂಗತಿಗಳನ್ನು ಕಲಿಯಬೇಕಾಗಿದೆ. ನಾವು ಇಲ್ಲದ ಹಾಳು ಸುದ್ದಿಯಲ್ಲಿ ಸಂಬಿಗೆಯನ್ನು ಇಡಬಾರದೆಂಬದೂ, ಊರಿನ ಪ್ರತಿಯೊಂದು ಭಾಗದಲ್ಲಿ, ಇಲ್ಲವೇ ಪ್ರತಿಯೊಂದು ದೊಡ್ಡ ಬೀದಿಯಲ್ಲಿ, ಈ ಹಾಳು ಸುದ್ದಿಗಳು ಸುಳ್ಳೆಂದು ಜನರಿಗೆ ತೋರಿಸುವದಕ್ಕೆ ಒಂದು ಕಾಂಗ್ರೆಸ ಅಥವಾ ಖಿಲಾಫತ ಕಛೇರಿಯನ್ನು ಸ್ಥಾಪಿಸಬೇಕೆಂಬದೂ, ಆ ಕಲೆಯತಕ್ಕ ಸಂಗತಿಗಳಲ್ಲಿ ಒಂದಾಗಿದೆ ಒಂದೇ ಮನಸ್ಸುಳ್ಳ ಒಬ್ಬ ಮನುಷ್ಯನಂತೆಯೇ ನಮ್ಮ ಚಿತ್ತವೃತ್ತಿಯು ಇದ್ದಲ್ಲೇ ಅದರೆ—ನಮಗೆ ಜಯ ಪ್ರಾಪ್ತಿಯಾಗಬೇಕಾದರೆ ಇಂಥ ಆಚರಣೆಯು ಇರಲಿಕ್ಕೆ ಬೇಕು—ಇಲ್ಲದ ಹಾಳು ಸುದ್ದಿಯ ಮೇಲೆಯೇ ನಂಬಿಕೆಯಿಟ್ಟು, ವಿಚಾರವಿಲ್ಲದೆ, ಏನೂ ಕೆಲಸ ಮಾಡಕೂಡದೆಂಬದನ್ನು ನಾವು ತಿಳಿದಿರತಕ್ಕದ್ದು. ಮಂಗಳೂರಿನ ಚಪ್ಪಿಯ ಸುದ್ದಿಯೇ ನಿಷ್ಕಾರಣವಾದ ಭಯ ಉಂಟಾಗಲಿಕ್ಕೆ ಮೂಲಕಾರಣವಾಯಿತು. ಗತಿಯು ನಾಶ ಹೊಂದಿದರೆ ಎನಾಯಿತು? ಜನರ ಪ್ರಮುಖ ಮುಖಂಡನು ಗಾಯಹೊಂದಿದರೆ ಇಲ್ಲವೆ ಕೊಲ್ಲಲ್ಪಟ್ಟರೇನಾಯಿತು? ಈ ಸುದ್ದಿಯನ್ನು ಕೇಳಿ ಜನರು ಕೋಪಗೊಳ್ಳುವದೇಕೆ? ಎರಡನೇದನರ ಉದ್ದೇಶವನ್ನು ಲೆಕ್ಕಿಸದೇ ತನ್ನ ಮನಸ್ಸಿಗೆ ಬಂದಂತೆ ವರ್ತಿಸತಕ್ಕದ್ದಲ್ಲ. ಗುರಿಯ ಅಥವಾ ಮಸೀದೆಯು ನಾಶಿಸಲ್ಪಟ್ಟರೆ, ಇಲ್ಲವೆ ಸೇನಾಧಿಪತಿಯು ಮಡಿದರೆ, ಯಾವ ಲಸ್ಕರೀ ಸಿಪಾಯಿಯು ತನ್ನ ಮನಬಂದಂತೆ ವರ್ತಿಸುವನು? ತನ್ನ ಇಚ್ಛೆಯಂತೆ ಅವನು ವರ್ತಿಸಿದ್ದೇ ಆದರೆ, ಅವನು ಹಿಡಿದ ಕಾರ್ಯವು ಕೆಡುವದಲ್ಲದೆ, ತಲೆಹೊಡೆಸಿಕೊಳ್ಳಲಿಕ್ಕೆ ಸಹ ಅವನು ಪಾತ್ರನಾಗುವನು ಆದ್ದರಿಂದ ನಮ್ಮ ಮನಸನ್ನು ಬಿಗಿಹಿಡಿಯುವ ವಿಷಯದಲ್ಲಿ ನಾವು ಕಸ್ತದಾರೀ ಸಿಪಾಯರಿಗಿಂತ ಹೆಚ್ಚಿನ ಯೋಗ್ಯತೆಯುಳ್ಳವರಾಗಿದ್ದರೆ, ಮತ್ತು ಶಾಂತತೆಯನ್ನು ಸ್ಥಾಪಿಸುವದಕ್ಕೆಂದು ಸ್ವಸಂತೋಷದಿಂದ ವೀರಾಳುಗಳಾಗಿದ್ದರೆ, ಎಲ್ಲರೂ ಕೂಡಿ ಒಕ್ಕಟ್ಟಿನಿಂದ ಆಚರಿಸುವದು ಅತ್ಯವಶ್ಯವಾದದ್ದು; ಅದರಲ್ಲಿಯಂತೂ, ನಾವು ಒಂದೇ ಯುದ್ಧವನ್ನೆಲ್ಲದೇ, ನಮ್ಮ ರಾಷ್ಟ್ರದ ಮತ್ತು ಧರ್ಮದ ಸ್ವಾತಂತ್ರ್ಯವನ್ನೇ ಗೆದಿಯ ಬೇಕಾಗಿದ್ದರಿಂದ ಹೀಗೆ ಆಚರಿಸುವದು ಬಹಳೇ ಮಹತ್ವದ್ದಾಗಿದೆ.

ಸೆರೆಮನೆಯ ಅಂಜಿಕೆ

ಸೆರೆಮನೆಯ ಅಂಜಿಕೆಯು ಈಗ್ಗೆ ಎಷ್ಟೋ ಮಟ್ಟಿಗೆ ದೂರಾಗಿದೆ; ಅದರೂ

ತುರಂಗಕ್ಕೆ ಹೋಗಿ ಬೀಳಬೇಕೆಂದು ಬಯಸುವವರು ಇನ್ನೂ ವೀರಳ. ಅಲ್ಲದೆ, ಅದಷ್ಟು ಸೆರೆಮನೆಯಿಂದ ದೂರವಿರಬೇಕೆಂದು ಹಲುಬುವವರೂ ಇದ್ದಾರೆ ನಾವು ಸೂಕ್ಷ್ಮರೀತಿಯಿಂದ ಪ್ರಾಮಾಣಿಕತನ ಮತ್ತು ಅಹಿಂಸೆಗಳನ್ನು ಪಾಲಿಸಬೇಕು; ಮತ್ತು ಅದೇ ಕಾಲಕ್ಕೆ ನನ್ನನ್ನು ಸರಕಾರದವರು ಕಾರಾಗೃಹದಲ್ಲಿ ಸೇರಿಸಬೇಕೆಂದು ಹಂಬಲಿಸುತ್ತಿರಬೇಕು. ಈಗಿನ ಸರಕಾರವನ್ನು ತಿದ್ದಲಿಕ್ಕೆ, ಇಲ್ಲವೆ ಒದ್ದು ಮರಿದು ಹಾಕಲಿಕ್ಕೆ ನಾವು ಪ್ರಯತ್ನಿಸುವದುಂಟು. ಈ ರಾಜ್ಯದಲ್ಲಿ ನಮಗೆ ದೊರೆಯುವ ಭ್ರಾಮಿಕ ಸ್ವಾತಂತ್ರ್ಯದ ಬಗ್ಗೆ ಅನಂದ ಪಡುವದು ಕಷ್ಟವಾಯ ವೆನಿಸಬಹುದಿದ್ದರೂ, ಅದು ಖಂಡಿತವಾಗಿಯೂ ನಮಗ ಬೇಡಾದದ್ದೆಂದು ತಿಳಿದು, ಅದರ ಬಗ್ಗೆ ಬೇಸರವನ್ನು ತೋರಿಸತಕ್ಕದ್ದು. ಅನ್ಯಾಯದ ಇಲ್ಲವೆ ನಮಗೆ ಸೀಗಲಿಕ್ಕೆ ಬಾರದಂಥ ಬೆಲೆ ಕೊಟ್ಟು ಈ ಸ್ವಾತಂತ್ರ್ಯವನ್ನು ನಾವು ಸರಕಾರದವರಿಂದ ಕೊಳ್ಳುತ್ತಲಿರುವೆವೆಂಬ ತಿಳುವಳಿಕೆಯು ಯಾವಾಗಲೂ ನಮ್ಮ ಮನದಲ್ಲಿ ಜಾಗ್ರತವಾಗಿರತಕ್ಕದ್ದು. ನಿರಪರಾಧಿಯಿದ್ದರು ಕೂಡ ನಾವು ಬಂಧಿಸಲ್ಪಟ್ಟರೆ, ನಾವು ಆನಂದಸಾಗರದಲ್ಲಿ ಮುಳುಗತಕ್ಕದ್ದು. ಯಾಕಂದರೆ ಇದರಿಂದಲೇ ನಮಗೆ ಸ್ವಾತಂತ್ರ್ಯವು ದೊರೆಯುವದೆಂದು ನಮ್ಮ ತಿಳುವಳಿಕೆಯಿಸೆ ದೇಕೋದ್ಧಾರಕ್ಕಾಗಿ ಉದ್ಗ್ರಾಸನ್ಯಸ್ತಿಗಳಿಂದ ನೂರಾರು ಜನರು ಈಗ್ಗೆ ಸೆರೆಮನಿಗೆ ಹೋಗಿದ್ದರಿಂದ ಸ್ವಾತಂತ್ರ್ಯವು ನಮ್ಮ ಕಡೆಗೆ ಓಡಿಬರಹತ್ತಿದೆಂದು ನಮಗೆ ಅನಿಸುವ ಬಿಲ್ಲವೋ! ಅಂದಮೇಲೆ ಅಪರಾಧಿಗಳ ದೋಷದ ಸಲುವಾಗಿ, ಮುಂಬೈಯಲ್ಲಿಯ ನಿರ್ದೋಷಿಗಳಾದ ಅಸಹಯೋಗಿಗಳು ಸೆರೆಮನೆಯಲ್ಲಿ ಸೇರಿ ಕೊಳ್ಳುವದರಕಿಂತ ಹೆಚ್ಚಿನ ಆನಂದವು ಎಲ್ಲಿ ದೊರೆಯುವದು?

ಶುದ್ಧವಾದ ಅಂತಃಕರಣ.

ತಮ್ಮ ಅಂತಃಕರಣವನ್ನು ಶುದ್ಧ ಮಾಡಿಕೊಂಡವರು ಮಾತ್ರ, ನಾನು ಮೇಲೆ ಬರೆದ ಸಂಗತಿಯು ಬಿಳಿತಾಗಿದೆನ್ನುವರು; ಪಾರ್ಸಿ ಕ್ರಿಶ್ಚನ್ನರೇ ಹಿಂದು ಮುಸಲ್ಮಾನರಿಗಿಂತ ಹೆಚ್ಚಿಗೆ ತಪ್ಪುಗಾರರೆಂದು, ಈಗ ಸಹ ತಿಳಿಯುವಂಥ ಹಿಂದೂ ಮುಸಲ್ಮಾನರು ಹಾಗೆನಲಾರರು. ಪಾರ್ಸಿ ಮತ್ತು ಕ್ರಿಶ್ಚನ್ನರೇ ಮೊದಲು ತುಂಡತನವನ್ನೆಬ್ಬಿಸಿದರೆಂದು ಹಿಂದೂ ಮುಸಲ್ಮಾನರ ತಿಳುವಳಿಕೆಯಿದೆಂಬದು ಪ್ರತಿವಾದಕ್ಕಾಗಿ ನನ್ನೆಕಡೆಗೆ ಬಂದ ಅನೇಕ ಪತ್ರಗಳಿಂದ ಗೊತ್ತಾಗುತ್ತದೆ. ಇದಕ್ಕೆ ವಿಪರೀತವಾದ ಸಂಗತಿಗಳು ನನಗೆ ಗೊತ್ತಿದ್ದರೂ, ಇದೇ ನಿಜವೆಂದು ಊಹಿಸುವೆನು ಆದರೂ, ಹಿಂದೂ ಮುಸಲ್ಮಾನರ ಅಹಿಂಸೆಯ ಪ್ರತಿಜ್ಞೆ, ಅವರ ಸಂಖ್ಯೆ ಮತ್ತು ಅವರ ಧರ್ಮ ಇವನ್ನೆಲ್ಲ ಲಕ್ಷದಲ್ಲಿ ತಂದು ವಿಚಾರಿಸಿ ನೋಡಿದರೆ, ದುಷ್ಟ ಬುದ್ಧಿಯಿಂದ ಸೇಡು ತೆಗಹುಕೊಳ್ಳದೇ ತಮಗೆ ಕೊಂಚ ತ್ರಾಸವಾದರೂ ಅದನ್ನು ಲೆಕ್ಕಿಸದೇ, ತ ರ ಧರ್ಮದವರ ಸಂಗಡ ಸಖ್ಯ ಬೆಳಿಸಿ, ಅವರನ್ನು ರಕ್ಷಿಸುವದು ಹಿಂದು ಮುಸಲ್ಮಾನರ ಕರ್ತವ್ಯವಲ್ಲವೇ?

ಸ್ವಯಂ ಸೇವಕರ ಮೇಲೆ ಗದೆಯು.

— ೮ —

ಮುಂಬಯಿಯಲ್ಲಾದ ಶಾಂತಿಕ ಸರಕಾರಗಳಿಗೆ ತಮ್ಮ ತಮ್ಮ ಪ್ರಾಂತಗಳಲ್ಲಿ ಅಸಹಕಾರದ ವ್ಯವಸ್ಥೆಯನ್ನು ನಾಶ ಗೊಳಿಸುವದಕ್ಕಾಗಿ ವ್ಯವಸ್ಥಿತ ಧರ್ಮ ನೀತಿಯನ್ನು ಕೈಕೊಳ್ಳಲಿಕ್ಕೆ ಬಿಲ್ಲದೇ ಸಂಧಿಯು ದೊರೆತಿದೆ. ಬಿಂಗಾಲ, ಸಂಯುಕ್ತ ಪ್ರಾಂತ, ಪಂಜಾಬ ಮತ್ತು ದಿಲ್ಲಿ ಈ ಪ್ರಾಂತಗಳ ಸರಕಾರಗಳು ಸ್ವಯಂ ಸೇವಕರ ದಲಗಳನ್ನ ಮುರಿದೊಗೆಯುವ ಉದ್ದೇಶದಿಂದ ತೆಗೆದ ಪ್ರಕಟನೆಗಳು ಮುಂಬಯಿಯಲ್ಲಾದ ಸಂಗತಿಗಳಿಗೆ ಉತ್ತರವಾಗಿರುತ್ತವೆ ನಾನಂತೂ ಈ ಪ್ರಕಟನಗಳಿಗೆ ಅನಂದದಿಂದ ಸ್ವಾಗತವನ್ನೀಯುತ್ತೇನೆ. ಈ ಪ್ರಕಟನೆಗಳು ನಾವಾಗಿಯೇ ಸವಿನಯ ಆಜ್ಞಾಭಂಗವನ್ನು ಪ್ರಾರಂಭಿಸುವ ಅವಶ್ಯಕತೆಯನ್ನೇ ತೆಗೆದು ಹಾಕುತ್ತವೆ. ಸರಕಾರದ ಆಹ್ವಾನವನ್ನು ಸ್ವೀಕರಿಸಲು ನಾವು ಸಿದ್ಧರಾಗಿದ್ದರೆ ನಮ್ಮ ಸಾಮರ್ಥ್ಯವನ್ನು ಪರೀಕ್ಷಿಸುವ ಸಂಧಿಯು ತಾನಾಗಿಯೇ ದೊರೆಯುತ್ತದೆ. ಸವಿನಯ ಭಂಗವನ್ನು ಮಾಡಲು ಸಿದ್ಧನಾದವನು ತನಗೆ ಬೇಕಾದ ಸಮಯದಲ್ಲಿ ಮುಂದಿಟರಬಲ್ಲನು. ಈ ಮಾತು ಸವಿನಯ ಯುದ್ಧದ ಭಂಗದಲ್ಲಿ ಅತ್ಯಂತ ಮಹತ್ವವುಳ್ಳದ್ದಿರುವದು. ಯಾಕಂದರೆ ಎಲ್ಲಿಯವರೆಗೆ ಸವಿನಯ ಭಂಗದ ಸಿದ್ಧತೆಯು ಅವನಲ್ಲಿ ಪೂರ್ಣ ರೀತಿಯಿಂದ ಆಗಿಲ್ಲವೊ ಅಲ್ಲಿಯವರೆಗೆ ಅವನೀಕಾರ್ಯವನ್ನು ಕೈಕೊಳ್ಳಲು ಮುಂದಿಟರಿಯಲಾರನು. ಸರಕಾರವು ಎಷ್ಟೇ ಹಿಂಡಿಸಿದರೂ ತನ್ನಲ್ಲಿ ತ ಯಾರಾಗುವ ಹೊರ್ತು ಅವನು ಕಾರ್ಯ ಪ್ರವೃತ್ತನಾಗನು.

ಆದ್ದರಿಂದ ಯಾವ ಪ್ರಾಂತಗಳಲ್ಲಿ ವೇ ಲ್ಯಾಸೆಂದ ಪ್ರಕಟನೆಗಳು ಹೊರಟಿವಯೊ ಅ ಪ್ರಾಂತಗಳು ತಯಾರಾಗಿದ್ದರೆ ಅಲ್ಲಿಸರ ಕಾರವು ನಿರ್ಬಂಧಗಳನ್ನು ಅನಾವರಿಸಿ, ಸ್ವ ಯಂ ಸೇವಕರ ದಲಗಳನ್ನು ಮುರಿಯಲು ಒ ವ್ವದೆ, ಪ್ರತಿಯೊಬ್ಬ ಸ್ವಯಂ ಸೇವಕನು ಸೆರೆ ಗೆ ಕಾರಾಗೃಹದ ಹಾದಿಯನ್ನು ಹಿಡಿಯುತ್ತ ದೊಂದೇ ಕೆಲಸವು ಉಳಿಯುತ್ತದೆ ಅದರೆ ಹಿ ಗೆ ಹೀಗೆ ಮಾಡುವ ಮೊದಲು ನನುಲ್ಲಿ ಸಾ ಮರ್ಥ್ಯವು ಎಷ್ಟರ ಮಟ್ಟಿಗಿದೆಂಬದನ್ನ ಚನಾ ಗಿ ಅರಿತ ಕೊಳ್ಳುವದವಶ್ಯವು. ಈ ಸ್ವಯಂ ಸೇ ವಕರ ದಲಗಳು ಶಾಂತತೆಯನ್ನುಳಿಟು ಮಾತ್ರ ಮಹನ್ನು ಬಿಟ್ಟು ಶಾಂತತಾ ಭಂಗವನ್ನು ಮಾಡ ಲು ಏರ್ಪಡಿಸಲ್ಪಟ್ಟವೆಂಬ ಆರೋಪವು, ಅವ ಗಳ ಒಗ್ಗೆ ಸರಕಾರದಿಂದ ತರಲ್ಪಟ್ಟಿದೆ ಈ ಆ ರೋಪವು ಎಷ್ಟರ ಮಟ್ಟಿಗೆ ಸತ್ಯವಿರುವದೆಂಬ ದನ್ನ ಚನಾಗಿ ಪರೀಕ್ಷಿಸಿ ನೋಡುವದೂ ನ ಮ್ಮಲ್ಲೀನಾದರೂ ದೋಷಗಳಿದ್ದದ್ದು ನಮಗ ಕಂಡುಬಂದರೆ ಅವುಗಳನ್ನು ಕೂಡಲೇ ತಿಗೆದು ಹಾಕುವದೂ ನಮ್ಮ ಮೊದಲನೇ ಕರ್ತವ್ಯವು ಯಾವುದಾದರೂ ಸ್ವಯಂ ಸೇವಕನ ನಡತೆಯಲ್ಲಿ ಒಳಾರ್ತಾಗವಿದ್ದದ್ದು ಕಂಡುಬಂದರೆ, ಮಾ ತಿನಲ್ಲಿಯಾದರೂ ಉದ್ಧತನವು ಕಂಡುಬಂದರೆ ಕೂಡಲೆ ಅವನನ್ನು ಸ್ವಯಂ ಸೇವಕರ ದಳ ದಿಂದ ತೆಗೆದು ಹಾಕಬೇಕು.

ನಿಜವಾಗಿ ಸ್ವಯಂ ಸೇವಕರ ವಿಷಯದಲ್ಲಿ ವರ್ಕಿಂಗ ಕಮಿಟಿಯು ಮಾಡಿದ ಪ್ರಬಂಧವ ಅಕಸ್ಮಾತ್ತಾಗಿ ಅಸ್ತಿತ್ವದಲ್ಲಿ ಒಂದಿದ್ದರೂ, ಕಾಲಕ್ಕೆ ಬಂದದೆಯೆಂದು ಹೇಳಲಬ್ಯಂತರವಿಲ್ಲ ಈ ಪ್ರಬಂಧವನ್ನು ಪ್ರತಿಯೊಂದು ಪ್ರಾಂತದ ಮಹಾಸಭಾಸಮಿತಿಯೂ ಪಿಲಾಪತ ಮಾಡಿ ಲಪೂ ಆದರಿಸಿ ಯಾವತ್ತು ಸ್ವಯಂ ಸೇವಕ ದ ಲಗಳನ್ನು ಎಕ್ತಿತ ಮಾಡುವರೆಂದು ನನ್ನ ಲ ಶಿಯಿದೆ. ಅಹಿಂಸೆಯ ತತ್ವವನ್ನು ಮನ್ನಿಸದ ಯಾವ ಮನುಷ್ಯನಿಗೂ ಸ್ವಯಂ ಸೇವಕ ದಳದಲ್ಲಿ ಪ್ರವೇಶವು ದೊರೆಯ ಕೂಡದು. ಇಷ್ಟಾದ ಬಳಿಕ ಈ ಸ್ವಯಂ ಸೇವಕ ದಲಗಳಿಗೆ ಸ ಕಾರದಿಂದ ತೊಂದರೆಯುಂಟಾದಲ್ಲಿ ಕೂಡಲೆ ಸರಕಾರದೊಡನೆ ಯುದ್ಧಕ್ಕೆ ನಿಲ್ಲಲು ಸನ್ನದ್ಧ ರಾಗಬಲ್ಲೆವೆ ಆದರೆ ಈ ಯುದ್ಧದಲ್ಲಿ ಮುಂದೆ ವರಿದು ಬಂದವರಲ್ಲಿ ಯಾರಾದರೂ ಸರಕಾರ ದಿಂದ ಹಿಡಿಯಲ್ಪಟ್ಟರೆ, ಯುದ್ಧರಂಗದಿಂದ ಹೊರಗಿದ್ದವರು ಯಾವ ಬಗೆಯ ಗೊಂದಲವನ್ನು ಮಾಡದೆ ಶಾಂತರಾಗಿರುವದವಶ್ಯವು ಈ ಸಮಯವು ಬಲು ಗಂಭೀರವಾದದ್ದಿರುತ್ತದೆ ಯಾರಾದರೂ ಕಾರಾಗೃಹಕ್ಕೆ ಎಳೆದೊಯ್

(ಶೀನೇ ಪುಟ ನೋಡಿರಿ.)

ಕನ್ನಡ ನವಜೀವನ.

ಮಾರ್ಗಶೀರ್ಷ ಶ. ೯ ಗುರುವಾರ ಶಕೆ ೧೮೪೪.

ಹಿರೇ ಕೈ.

ಗಾದ ಸ್ನೇಹಿತ ಸಿಕ್ಕಾಗ ಕೈ ಕುಲುಕಿರಿ।
ತುಲಸೀದಾಸ.

ದೊಡ್ಡ ಸಂಸ್ಥೆಗಳಲ್ಲಿ ಕೊಂಚವಿಗರ ಸಲುವಾ
ಒಂದು ಕೈ ಇರುವದು, ಅದು ಯಾವತ್ತು
ಗಿಲುಗಳ ಬೀಗಗಳಿಗೆ ಹತ್ತುವದು. ಆ ಆ
ಗಿಲುಗಳ ಕೈಯು ಆ ಆ ಬಾಗಿಲುಗಳಿಗಷ್ಟೇ
ತ್ತುವದು; ಆದರೆ ಮುಖ್ಯಾಧಿಕಾರಿಯ ಬಳಿ
ಲ್ಲ ಎಲ್ಲ ಬಾಗಿಲುಗಳನ್ನು ತೆರೆಯಲು ಉಪ
ೋಗ ಬೀಳುವಂಥ ಒಂದು ಕೈ ಇರುವದು.
ದಕ್ಕೆ ಇಂಗ್ಲೀಷ ಭಾಷೆಯಲ್ಲಿ " ಮಾಸ್ಟರ
ಿ " ಎಂಬ ಹೆಸರು. ಅದರ ಭಾಷಾಂತರ
ನ್ನು ನಾನು " ಹಿರೇ ಕೈ " ಯೆಂದು ಮಾ
ುವೆನು.

ಕೌನ್ಸಿಲುಗಳ ಓಹಿಸ್ಕಾರದಿಂದ
ೌನ್ಸಿಲುಗಳಿಗೆ ಹೋಗಬೇಕೆಂಬವನಿಗೆ
ಡ್ಡಿಯಾಗುವದು; ವಿದ್ಯಾಲಯಗಳ ಮೇಲಿನ
ಹಿಸ್ಕಾರದಿಂದ ವಿದ್ಯಾರ್ಥಿಗಳು ಶಾಲೆಗಳನ್ನು
ಡಬೇಕಾಗುವದು; ಕೋರ್ಟುಗಳನ್ನು ಬಹಿ
ರಿಸಬೇಕೆಂಬ ವ್ರಬಂಧವು ವ್ಯಾಜ್ಯಗಾರರ
ನ್ನ ಕೋರ್ಟಿನಿಂದ ಹಿಮ್ಮೆಟ್ಟಿಸುವದು. ಇವೆಲ್ಲ
ಶಬುಗಳಲ್ಲಿ ಪೂರ್ಣವಾಗಿ ಯಶಸ್ಸು ದೊರೆ
ುವಿದ್ದರೆ ಈ ಉಪಾಯಗಳ ಪರಿಣಾಮದ
ಷಯದಲ್ಲಿ ಸಂಶಯವ್ಯುತ್ಪುಟ್ಟುರದು ಸ್ವಾಭಾ
ಕವೆ.

ಅದಕ್ಕೆ ಇವೆಲ್ಲವುಗಳಿಗೆ ಹಿರೇ ಕೈ—ಇವೆ
ವುಗಳ ಮೇಲೆ ಒಂದೇ ಮಾತ್ರೆಯು—ಪ್ರೇ
ವೇ ಇರುವದು.

ಪ್ರೇಮವಿಲ್ಲದ ಅಸಹಕಾರವು ರಾಕ್ಷಸೀ ಅ
ಹಕಾರವು; ಪ್ರೇಮವುಳ್ಳದ್ದು ಈಶ್ವರೀ ಅಸಹ
ಾರವು. ಶೈಗಂಬರರು ಪ್ರೇಮವಶರಾಗಿಯೇ
ರಬರೊಡನೆ ೧೩ ವರ್ಷ ಅಸಹಕಾರವನ್ನು
ಾಡಿದರು. ಮುಕ್ಕೆಯ ಅರಬರ ಕಣ್ಣುಗಳ
ು ಅವರು ಪ್ರೇಮಬಲದಿಂದಲೇ ತೆರೆದರು.
ಾಫ್ರಿ ಪೀರಾಬಾಯಿಯು ತನ್ನ ಗಂಡನಾದ
ುಂಭರಾಣಾನೊಂದಿಗೆ ಅಸಹಕಾರ ಮಾತಿ
ದ್ದು ದ್ವೇಷದಿಂದಲ್ಲ. ಕುಂಭರಾಣಾನು ವಿಧಿಸಿ

* ಪ್ರೇಮಜೀವು ಈ ಸಂಪಾದಕೊಳಗಿನ
ವಿದ್ಯಾರ್ಥಿವರ್ಗವನ್ನು ದೂರ ಪಡಿಸುವದು.

ದ ಮರಣಾಂತ ಶಿಕ್ಷೆಯನ್ನು ಆ ನಾಧ್ವಿಯು
ಪ್ರೇಮಪೂರ್ವಕವಾಗಿ ಸ್ವೀಕರಿಸಿದಳು. ನಮ್ಮ
ಅಸಹಕಾರದ ಮೂಲವೂ ಪ್ರೇಮವಲ್ಲಿಯೇ ಇ
ರುವದು. ಅದಿಲ್ಲದಿದ್ದರೆ ಎಲ್ಲವೂ ವ್ಯರ್ಥ. ನ
ಮ್ಮ ಯಶೋದ್ಧಾರದ ಕೈ ವ್ಯರ್ಥವೇ, ಅವ
ನ್ನುಳಿದು ಬೇರೊಂದಾವ್ರದೂ ಇಲ್ಲಿ. ಶಾಲೆಯು
ನ್ನು ಬಿಟ್ಟವನು ಬಿಡದವನನ್ನು ದ್ವೇಷಿಸದೆ
ಅವನ ಬಿಡುವಿಕೆಯು ಕೆಲಸಕ್ಕೆ ಬಾರದ್ದು
ಕೌನ್ಸಿಲುಗಳಲ್ಲಿ ಹೋದವರನ್ನು ನಾವು ದ್ವೇಷಿ
ಸಿದರೆ ಅವರಗಳ ಮೇಲೆ ನಾವು ಹಾಕಿದ ಬಹಿ
ಷ್ಕಾರವು ವ್ಯರ್ಥವೆ. ನಮ್ಮವರಾ ದೆ ನಮ್ಮಿಂ
ಪ ದೂರಿರುವವರನ್ನು ಪ್ರೇಮವಿಂಪ ನ ್ಮ ನ
ರನ್ನಾಗಿ ಮಾಡಿಕೊಳ್ಳವದು ಧಾರ್ಮಿಕನೃ
ತ್ಯಿಯ, ಅವರನ್ನು ದ್ವೇಷಿಸುವದು ರಾಕ್ಷಸಿ-
ನಾಸ್ತಿಕ-ವೃತ್ತಿಯು

ನಮ್ಮ ತ್ಯಾಗದಲ್ಲಿ ಕೆಲವಂಕವಿಂದ ರೋಷ
ವೂ ದ್ವೇಷವೂ ಉಂಟಾಬಿದನ್ನು ನಮಗೆ ನಾ
ಬೆಕೆಯಿಂದ ಒಪ್ಪಿಕೊಳ್ಳಬೇಕಾಗುವದು. ಇದ
ರಿಂದಲೇ ನಮ್ಮ ತ್ಯಾಗವು ಸಂಪೂರ್ಣವಾಗಿ
ಶೋಭಿಸದು; ಮತ್ತು ಫಲಿಸದ್ಯ. ತ್ಯಾಗಮಾ
ಡಿದ ಯಾವತ್ತು ಜನರು ತ್ಯಾಗಮಾಡದಿದ್ದ
ಜನರನ್ನು ದ್ವೇಷಿಸದೆ ಇರುತ್ತಿದ್ದರೆ ನಮ್ಮ ಸ್ಥಿ
ತಿಯು ಈಗಿನಕಿಂತಲೂ ಎಷ್ಟೋ ಸರಸವಾ
ಗಿರುತ್ತಿದ್ದಿತ್ತು, ಮತ್ತು ನಾವು ಸ್ವರಾಜ್ಯವನ್ನು
ಸ್ಥಾಪಿಸುವ ಸ್ಥಿತಿಯಲ್ಲಿರುತ್ತಿದ್ದೆವು.

**ಸಾರಾಂಶ-ನನ್ನು ಎಲ್ಲಕ್ಕೂ ದೊಡ್ಡ ಕೆಲಸವು ಪ್ರೇಮದ ಮಳೆಯನ್ನು ಸು
ರಿಸುವದು ಇರುವದು.** ಯಾವನು ನಮ್ಮ
ನ್ನು ವಿರೋಧಿಸುವನೇ ಅವನ ಮೇಲೆ ನಾವು
ಪ್ರೇಮ ಮಾಡಲಿಕ್ಕೆ ಬೇಕು; ಅವನನ್ನು ಮೂ
ರ್ಖನೆಂದು ನಾವು ತಿಳಿಯಕೂಡದು; ಅವನ
ಸೇವೆಯನ್ನು ನಾವು ಮಾಡಬೇಕು; ಇದು ಪ್ರೇ
ಮವು ಹಿಂದುವು ಹಿಂದುವಿನನ್ನು ಪ್ರೀತಿಸುವದ
ರಲ್ಲಿ ಹೊಸದೇನೂ ಇರುವದಿಲ್ಲ. ಆದರೆ ಘುಸ
ಲ್ಮಾನನನ್ನೂ ಅಷ್ಟೇ ಪ್ರೀತಿಸುತ್ತ ಅವನ ನೀ
ತಿನುಡಿಗಳ ಬಗ್ಗೆ ಆದರವುಳ್ಳವನಾಗುವದರಲ್ಲಿ
ಅವನ ದೊಡ್ಡಿಸ್ತಿಕೆಯಿರುವದು. ಸಹಕಾರಿಯು
ಮಿತ್ರನು ಸಹಕಾರಿಯಾದದ್ದರಲ್ಲಿ ಹೊಸದೇನು?
ಆದರೆ ಅಸಹಕಾರಿಯು ಸಹಕಾರಿಯ ಮೇಲೆ-
ತೀವ್ರವಾದ ಮತಭೇದವಿದ್ದರೂ ಕೂಡ,—
ಮಮತೆ ಮಾಡುವದರಲ್ಲಿ ವೀರತ್ವವುಂಟು, ನ
ಮ್ರತೆಯುಂಟು. ಅವನನ್ನು ಹೀಯಾಳಿಸುವದ
ರಲ್ಲಿ, ಅವನನ್ನು ತುಚ್ಛಿಸುವದರಲ್ಲಿ, ಅವನ
ಮಾನಭಂಗ ಮಾಡುವದರಲ್ಲಿ ಪುರುಷಾರ್ಥ
ವಿಲ್ಲ. ಅಂತಃಕರಣ ಪೂರ್ವಕವಾಗಿ ಅವನ
ಸೇವೆಯನ್ನು ಮಾಡುವದರಲ್ಲಿಯೇ ದೊಡ್ಡತ್ತನ
ವುಂಟು. ಈ ಕೆಲಸವನ್ನು ನಾವು ಯೋಗ್ಯರೀತಿ
ಯಿಂದ ಮಾಡಲಿಲ್ಲ. ಅದರ ಬಗ್ಗೆ ನ ನು ಬರೆ
ದಿರುವೆನು ಮತ್ತು ಹೇಳಿರುವೆನು. ಆಪರೆ ಅದರ
ಮೇಲೆ ಎಷ್ಟು ಭಾರವನ್ನು ಹಾಕುವದು ಅವ
ಶ್ಯವಿದ್ದಿತೊ ಅಷ್ಟು ಭಾರವನ್ನು ನಾನು ಅಗ್ಗೆ
ಹಾಕಲಿಲ್ಲಾದ್ದರಿಂದ ನನಗೆ ವ್ಯಸನವಾಗುತ್ತ
ಬೆ. ಮುಂಬಯಿಯ ಅನುಭವದಿಂದ ನನ್ನ
ಕಣ್ಣುಗಳು ತೆರೆದಿವೆ ಯಾವ ಯಾವಾಗ್ಗೆ ಸಹ
ಕಾರಿಗಳ ಮೇಲೆ ಶಾಬ್ದಿಕ ಅತ್ಯಾಚಾರವಾಗು
ತಿತ್ತು ಆಗ್ಗೆ ನಾನು ಕರ್ತೋರನಾಗಿದ್ದರೆ ಈ
ನಮ್ಮ ಉನ್ನತಿಯು ಹೆಚ್ಚಿಗೆ ಆ ತಿತ್ತು. ಬ
ಹಿಷ್ಕಾರದಿಂದ ತಲೆಯ ಮೇಲಿನ ಪರದೇಶಿ
ಟೊಪ್ಪಿಗೆಗಳನ್ನು ಹಾರಿಸಿದ ಪ್ರತಿಯೊಂದು
ಸನ್ನಿವೇಶದಲ್ಲಿ ನಾನು ವಿರೋಧಿಸಿದ್ದರೆ ಆದರ
ಪರಿಣಾಮವು ಈಗ್ಗೆ ಸಲಿ ಯಾಗುತ್ತಿತ್ತು. ಈ
ಮಹಾಯುದ್ಧದ ಸಮಾಪ್ತನನ್ನು ಪಹಿಸಿ
ಪೂರ್ಣರೀತಿಯಿಂದ ಜಾಗೃತವಾಗಿರದಿರುವ
ದು ಪ್ರಮಾದವೆಂದು ನಾನು ತಿಳಿಯುತ್ತೇನೆ.
ಈ ಯುದ್ಧದ ನಾಯಕ ಜನರಲ್ಲಿ ಯಾವನಲ್ಲಿ
ಯಾವರೂ ಧೈರ್ಯವೂ ಅಸಹಾಯತ್ವವೂ ಇದ್ದ
ದ್ದಾದರೆ ಅವನು ತನ್ನ ನಾಯಕತ್ವವನ್ನು ತ್ಯ
ಜಿಸುವದು ಅವನ ಧರ್ಮ ವು.

ಎಲ್ಲಿ ತಪ್ಪು ಮಾಡಿರುತ್ತೇವೆಯೊ ಅಲ್ಲಿಂದ
ಮತ್ತೆ ಪ್ರಾರಂಭಿಸೋಣ.

ಈಗ ನಾವು ಸಹಕಾರಿಗಳ ಬಗ್ಗೆ ವಿಶ್ವ ಇಂ
ತಿಗ್ಲೀ ಜನರು ಒಗ್ಗೆ ವಸನ್ನಿಸೊಳಗಿನ ದ್ವೇಷವ
ನ್ನು ತೆಗೆದುಹಾಕತಕ್ಕದ್ದು. ಅವರನ್ನು ನಮ್ಮಂಥ
ಗಳಂತೆ ತಿಳಿಯತಕ್ಕದ್ದು. ಅವರನ್ನು ಬಹಿಷ್ಕರಿಸತಕ್ಕದ್ದಲ್ಲ. ಅವರಿಗೆ ನೀರು, ಕೆಲಸಿಗರ
ಇಂ. ದೊರೆಯದಂತೆ ಮಾಡತಕ್ಕದ್ದಲ್ಲ. ಅವರಿ
ಗೆ ಉಣಿಸಿ ನಾವು ಉಣ್ಣತಕ್ಕದ್ದು. ಅನೇಕ ಬ
ಗೆಯಿಂದ ನಾವು ಅವರ ಸೇವೆಯನ್ನು ಮಾಡ
ತಕ್ಕದ್ದು ಯಾವತ್ತೂರೂ ಧರ್ಮದಂತೆ ವರ್ತಿಸಿ
ದರೆ ಈ ನಿಯಮವು ಸಹಜವಾಗಿ ತಿಳಿಯುಬಲ್ಲ
ದು. ಇದರಿಂದ ಸ್ವರಾಜ್ಯವು ಸುಲಭವಾಗಿ
ಬೇಗನೇ ನಮ್ಮ ಕೈಸೇರುವದು. ಯಾವ
ಯಾವ ಸ್ಥಳದಲ್ಲಿ ಸವಿನಯ ಆಜ್ಞಾಭಂಗದ
ಸಲುವಾಗಿ ಸಿದ್ಧತೆಯೆ ನಡಿಪದೆಯೋ ಆ ಆ
ಸ್ಥಳದಲ್ಲಿ ಎಲ್ಲಿಕ್ಕೂ ಮೊದಲು ಪ್ರತಿಯೊಬ್ಬ
ಸಹಕಾರಿಯು ಬಗ್ಗೆ ಜನರು ಪ್ರೇಮವುಳ್ಳವರಾ
ಗಲಿಕ್ಕೆ ಬೇಕು. ಮತ್ತು ಮತಭೇದವಿದ್ದರೂ
ಮಿತ್ರತ್ವವನ್ನು ಜಾಹೀರ ಪಡಿಸಬೇಕು.

(ನವಜೀವನ) (ಮೋಹನದಾಸ, ಕರ್ಮ
ಚಂದ, ಗಾಂಧಿ.)

ಬರುವ ರಾಷ್ಟ್ರೀಯ ಸಭೆಯು.

ಬರುವ ರಾಷ್ಟ್ರೀಯ ಸಭೆಯು ನೆರೆಯುವ
ದಕ್ಕೆ ಈ ಸಂಚಿಕೆಯು ಹೊರಬಿದ್ದಮೇಲೆ ಇ
ಪ್ಪತ್ತು ದಿವಸಗಳುಳಿಯುವವು. ಈ ಮಹಾಸ
ಭೆಯು ಉಳಿದೆಲ್ಲವುಗಳಿಂದ ತೀರ ಭಿನ್ನ ಬಗೆ
ಯಾಪದ್ಧಾಗುವದು. ಸ್ವರಾಜ್ಯವು ಪ್ರಾರಂಭ
ವಾಗದಿದ್ದರೆ ಪ್ರಾರಂಭವಾಗುವಂತೆ ನಾವು
ಮಾಡತಕ್ಕದ್ದು. ಪ್ರತಿಯೊಂದು ಕಾರ್ಯದಲ್ಲಿ

ಸ್ಪರ್ಧೆಯೊಂದು ತರದಿಂದ ನಾವು ನನ್ನ ಸ್ವಾಭಾವಿಕ ಯೋಗ್ಯತೆಯನ್ನು ವ್ಯಕ್ತಪಡಿಸಕ್ಕಾಗಿ ವ್ಯವಹಾರದಲ್ಲಿ ಕುಶಲತೆಯನ್ನೂ, ವಿನೋದದಲ್ಲಿ ಪೂರ್ಣತ್ವವನ್ನೂ, ನಿರ್ಭಯತೆಯಲ್ಲಿ ಹಾಗು ಸ್ವತಂತ್ರತೆಯಲ್ಲಿ ನಿರ್ದೋಷತೆಯನ್ನೂ ತೋರಿಸಲಿಕ್ಕೆಬೇಕು.

ಒಂದು ವಿಷಯದಲ್ಲಿಯೂ ಕೂಡ ನಿರ್ಮಿಂಬ ತವ್ವಾಗದಂತೆ ವ್ಯವಸ್ಥೆಯನ್ನು ಮಾತ್ರತಕಕ್ಕದ್ದು. ಇಸುಕೊಳ್ಳುವ, ಸ್ನಾನ, ಸ್ವಚ್ಛತೆಯ ಮೊದಲಾದ ಸೌಕರ್ಯಗಳು ಸಂಪೂರ್ಣವಾಗಿರತಕ್ಕದ್ದು ಕಸವಿರತಕ್ಕಲ್ಲಿ ಕಸವು, ನೀರಿರತಲ್ಲಿಕ್ಕ ನೀರು, ಈ ಬಗೆ ಯಾಗಿರಬೇಕು ಕಸ, ನೀರು ಮಲ ಮು ಬಹು ಪ್ರಮಾಣದಲ್ಲಿ ಕೂಡುವ ದು ಸಹಜವಾಗಿದ್ದರೂ ಎತ್ತ ನೋಡಿದರ್ತಲ್ಲಿ ಸ್ವಚ್ಛತೆಯೇ ಕಣ್ಣಿಗೆ ಬೀಳತಕಕ್ಕದ್ದು. ನೀರಿನಿಂದ ತೊಳೆದ ತಗ್ಗಗಳು ನಜರಿಗೆ ಬೀಳಲ್ಲಾಗದು ಅಪಾರವಾದ ಜನಸಮುದಾಯವು ಕೂಡುವ ದರಿಂದ ಹೊಲಸು ಬಹಳಾಗುವ ಸಂಭವ ನಿರುವದು ಸುಳ್ಳಲ್ಲ ಅದರೂ ಎಲ್ಲೆಲ್ಲಿಯೂ ಸ್ವಚ್ಛತೆಯಿರುವಂತೆ ನಾವು ಯತ್ನಿಸತಕ್ಕದ್ದು. ಇದು ಶರೀರದ ಪ್ರಥಮ ಧರ್ಮವಿರುತ್ತದಷ್ಟೇ ಮತ್ತು ಅಲ್ಲಿ ನೆರೆಯವ ನಾವೆಲ್ಲರೂ ಶರೀರಿಗಳೇ ಅಲ್ಲವೆ ಅಂದಮೇಲೆ ನಮ್ಮ ಮೊದಲನೇ ಕಾಳಜಿಯು ಸ್ವಚ್ಛತೆಯ ಬಗ್ಗೆ ಇರುವದು ಅವಶ್ಯ ಪ್ರ ಖಾದೀನ ರವು ಸ್ವಚ್ಛತೆಯು ಅದರ್ಶವಾ ಗಿಯೂ ಪದಾರ್ಥ- ವಾರಾಗಿಯೂ ಇರಲಿಕ್ಕೆಬೇಕು.

ಜನರಿಗೆ ಮೊದಲಿನಿಂದಲೇ ಪತ್ರಿಕೆಗಳಿಂದಲೂ ಭಾಷಣಗಳಿಂದಲೂ ತಿಳಿ ಹೇಳತಕ್ಕದು ಎಲ್ಲಿಯೂ ಗಲಿಬಿಲಿ ಮಾಡಬಾರದು, ಖಾದೀ ನಗರದ ಬೀದಿಗಳಲ್ಲಿ ಗುಂಪು ಗುಂಪಾಗಿ ನೆರೆದು ನಿಲ್ಲಬಾರದು, ಸ್ವಯಂ ಸೇವಕರ ಸೂಚನೆಗಳನ್ನು ಮನ್ನಿಸಬೇಕು ಮನಾಯಿ ಇದ್ದಲ್ಲಿ ಹೋಗಬಾರದು. ಎಲ್ಲಿಯೇ ಹೋಗಲಿ ಎರಡನೇಯವರಿಗೆ ಸಂಕೋಚ ಮಾಡಬಾರದು ಇದೆಲ್ಲವೂ ಸಂಘಪಲ್ಲಿ ಕೂಡಿರುವಿಕೆಯ ಕುಶಲತೆಯನ್ನು ಸೂಚಿಸುತ್ತದೆ. ಇದೀಗ ಎಲ್ಲರ ದೃಷ್ಟಿಗೆ ಬೀಳಬೇಕು.

ಸ್ವಯಂಸೇವಕರು ಎಂಥ ಬಡಮನುಷ್ಯನಿಗಾದರೂ ಸೊಕ್ಕಿನಿಂದ ಮಾತಾಡ ಕೂಡದು. ಸಿಟ್ಟಾಯಿ ಜನರು ಹುಕುಂ ಮಾಡುವಂತೆ ಸ್ವಯಂ ಸೇವಕರು ತಮ್ಮ ಕೂಡನೆಗಳನ್ನು ಮಾಡಬಾರದು, ತಾವು ಹೇಳತಕ್ಕದ್ದನ್ನು ವಿನಯದಿಂದ ಹೇಳಬೇಕು. ಸ್ವಯಂ ಸೇವಕರೀತಿಯು ಸಾಮಾನ್ಯ ಸಿವಾಯಿಗಳ ರೀತಿಯಿಂದ ಭಿನ್ನವಾಗಿರವದು

ಅಂಗಡಿಕಾರರು ಪ್ರಾಮಾಣಿಕರಾಗಿ ಯೋಗ್ಯವಾದ ಬೆಲೆಯನ್ನೇ ಬೇಡತಕ್ಕದು. ಒಂದು ಗಿರಾಕಿಗಳು ಬೇರೂರಿನವರೆಂದು ಅವರನ್ನು ಸಂಚಿಸತಕ್ಕದ್ದಲ್ಲ ಈ ವಿಷಯದಲ್ಲಿ ನಾವು ಸಂಪೂರ್ಣವಾಗಿ ಸಭ್ಯತೆಯುಳ್ಳವರಾಗಿರಬೇಕು.

ಅಸಹಕಾರಿಗಳ–ಹೇಳಿಸಿಕೊಳ್ಳುವವರ ಮತ್ತು ನಿಜಾದನರ— ಸಮುದಾಯವು ನೆರೆಯುವದು. ಅವರು ತಮಗೆ ಪೃಥ್ವಿಯ ರಾಜ್ಯ ಪಟವು ದೊರೆತಿದೆಂದು ತಿಳಿಯ ಕೂಡದು, ತಾವು ಕೇವಲ ಸೇವೆಗಾಗಿಯೇ ನೆರೆದಿರುವರೆಂದ. ತಿಳಿಯತಕ್ಕದ್ದು ಎಲ್ಲರೂ ಖಾದಿಯಿಸ್ಸೇ ತೊಟ್ಟಕೊಂತು ಬರುವರೆಂದು ನಾವು ಅಪೇಕ್ಷಿಸುವಾ ಸಭ್ಯರೂ ಪ್ರತಿನಿಧಿಗಳೂ ಎಲ್ಲರೂ ಖಾದಿಯ ಉಡುಪಿನಲ್ಲಿಯೇ ಒರತಕ್ಕದ್ದು ಅದರೆ ಉಳಿದವರು ಅಂದರೆ ನೋಡಲಿಕ್ಕ ಬಂದವ ಮುಸಾಫರಿ ಜನರು ಮತ್ತು ತಮಾಶಗಾರರು ತಮಗೆ ಬೇಕಾದಂತೆ ಅರಿಸೆಯನ್ನು ಹಾಕಿಕೊಂಡು ಒಂದರೆ ಅವರಿಗೆ ಅಪಮಾನ ಮಾಡಕೂಡದು ಸಹಕಾರಿಗಳ ದನು ಗುಂ ಳಿದ್ದನ್ನು ನಾವು ವಿನಯ ಪೂರ್ವಕವಾಗಿ ತೆಗೆಯತಕ್ಕದು ಹುಡುಗನಿಗೂ ಕೂಡ ತೊರೆಯಾಗಕೂಡದು. ಯಾರ ಅರಿವೆಗೂ ಕೈ ಹಚ್ಚಲಿಕ್ಕಾಗದು. " ದಾರಿಯಲ್ಲಿಹ ಕುರಿಯ ಮೆಯ್ಯನ್ನಾರು ಮುಟ್ಟರು" ಎಂಬೀ ಕವಿತೆಯು ಈ ರಾಜ್ಯದಲ್ಲಿಯಾತೂ ಸಲ್ಲುತ್ತಿಕ್ಕು. ಆದರೆ ಸ್ವರಾಜ್ಯದಲ್ಲಿ ಸುಳ್ಳು ಬೀಳದಂದು ನಮ್ಮ ಪರ್ತನದಿಂದ ನಾವು ತೋರಿಸತಕ್ಕದು.

ನಾವು ಎಲ್ಲ ಭಾರವನ್ನು ಸ್ವಾಗತ ಮಂಡಲದ ಪ್ರಮುಖರ ಮೇಲೆ ಹಾಕುವ ವಿಚಾರ ಮಾಡಿದರೆ ಮಹಾ ಸಭೆಯು ಈಗಿನಿಂದಲೇ ಗುಡಚಾಪಿಯನ್ನು ಕಟ್ಟಲಾರಂಭಿಸುವದು. ಪ್ರಮುಖರು ನಿಮಿತ್ಯ ಮಾತ್ರರಿರುವಷ್ಟೇ. ಸಂವಿರಾರು ಜನರು ಅವರಿಗೆ ನರವಾದರೆ ಮಾತ್ರ ಯಕಸ್ಸು ದೊರೆಯುವದು. ಹಾಗು ಅವರಿಗೆ ಪ್ರಜೆಗಳ ಆಶೀರ್ವಾದವು ದೊರೆಯುವದು ಸ್ವಯಂಸೇವಕರು ಅವರ ಕೈ ಕಾಲುಗಳಂತಿರುವರು. ಅಹಮ್ಮದಾಬಾದಿನಲ್ಲಿ ಸ್ವಯಂಸೇವಕರು ಪ್ರತಿನಿಧಿಯೊಂದು ಸ್ಥಳದಲ್ಲಿ ಒಳಿತಾ ವ್ಯವಸ್ಥೆಯೆನ್ನಿಟ್ಟರೇನೇ ಕಾರ್ಯವು ನಿರ್ವಿಘ್ನವಾಗಿ ನೆರವೇರುವದು. ಪರಸ್ಥಳದ ಒಬ್ಬ ಮನುಷ್ಯನಿಗೂ ಕೂಡ ಹಾದೀ ತಪ್ಪಿಸಿಕೊಂಡು ತಿರುಗಾಡುವ ಪ್ರಸಂಗವು ಬರಬಾರದು. ಊರು ಗೊತ್ತಿದ್ದ ಮತ್ತು ಗೊತ್ತಿಲ್ಲದಂಥ ಯಾವತ್ತು ಜನರಿಗೆ ಸರಿಯಾಗಿ ಅನುಕೂಲತೆಗಳು ಒದಗಿಸಲ್ಪಡತಕ್ಕದ್ದು.

ಇದು ನಮ್ಮ ಯೋಗ್ಯತೆಯ ಚಿಹ್ನ ನಿರುವ ದು ಇದರಲ್ಲಿ ಅಹಮದಾಬಾದದ, ಗುಜರಾಥದ, ಯಾವತ್ತು ಜನರುಯಶಸ್ವಿಗಳಾಗಲೆಂದು ಪ್ರಭುನಿಸ ಬಳಿಗೆ ನನ್ನ ಪ್ರಾರ್ಥನೆಯದೆ.

(ನವಜೀವನ) (ಮೋ. ಕ. ಗಾಂಧಿ.)

ಶಾಂತತೆಗೆ ಸುಲಭ ಮಾರ್ಗವು

ಮುಂಬಯಿ ಪಟ್ಟಣಿಗರಿಗೆ,

ಪಿನಲ್ಲಿರದಿದ್ದರೆ ತಾನು ಅವಳನ್ನು ಮದುವೆ ಯಾಗುವುದಿಲ್ಲವೆಂದು ತಿಳಿಸಿದ್ದನು. ಈಗೊಂದು ಮಹತ್ವದ ಪ್ರಶ್ನೆಯು ಉತ್ಪನ್ನವಾಗಿರುವುದು; ಅದೇನೆಂದರೆ, ಖಾದಿಗೆ ಉತ್ತೇಜನವು ದೊರೆಯಬೇಕೆಂದು ಆಕ್ಷೇಪಯೋಗ್ಯವಾದ ವಿವಾಹೋತ್ಸವದಲ್ಲಿ ಕೂಡಬಹುದೋ ಹೋಗದಿದ್ದರೆ ವಧೂವರರಿಗೆ ಮುಖವಾಗಿ ಅವರು ಖಾದಿಯನ್ನು ಧರಿಸದಿದ್ದಲ್ಲಿ? ಈ ಪ್ರಶ್ನೆದಲ್ಲಿ ಭೀರುತೆಯುಂಟು. ಖಾದಿಯ ಸ್ವೀಕಾರವನ್ನು ಲಂಚರೂಪವಾಗಿ ಮಾಡಕೂಡದು. ಪ್ರತಿಯೊಂದು ವಸ್ತುವಿನ ಬೆಲೆಯನ್ನು ಅದರ ಗುಣ ದೋಷಗಳನ್ನು ಲಕ್ಷದಲ್ಲಿಟ್ಟೇ ಕಟ್ಟತಕ್ಕದ್ದು. ಅರವತ್ತು ವರುಷದ ಮದುಕನು ಹನ್ನೆರಡು ವರುಷದ ಬಾಲಿಕೆಗೆ ಖಾದಿಯನ್ನು ತೊಡಿಸಿ, ತಾನು ಸ್ವತಃ ರುದ್ರಾಕ್ಷಿಯ ಮಾಲೆಯನ್ನು ಹಾಕಿಕೊಂಡು, ಹಣೆಗೆ ಭಸ್ಮವನ್ನು ಹಚ್ಚಿಕೊಂಡು, ವಿವಾಹಕ್ಕೆ ಸಿದ್ಧನಾಗಿಬರುತ್ತಿದ್ದರೆ, ಖಾದಿಗೆ ಉತ್ತೇಜನ ಕೊಡುವದಕ್ಕೋಸ್ಕರ ಆ ಲಗ್ನಕಾರ್ಯದಲ್ಲಿ ಕೂಡಕೂಡದು. ಅದರಂತೆಯೇ ೫೫ ವರುಷದ ಯುವಕನು ತನ್ನ ಸ್ವರ್ಗವಾಸಿಯಾದ ಪತ್ನಿಯ ದಹನಾರ್ಧವಾಗಿ ಸ್ವಶರೀರಕ್ಕೆ ಹೋಗಿರಲು ಅಲ್ಲಿಯೇ ಮತ್ತೊಬ್ಬಳೊಂದಿಗೆ ವಿವಾಹ ನಿಶ್ಚಿಯ ಮಾಡಿಕೊಂಡು ಸಂದರ್ಭವಶಲಗ್ನದ ಸಿದ್ಧತೆಯಲ್ಲಿ ತೊಡಗಿದ್ದರೆ ಅವಳಲ್ಲಿಗೂ ಹೋಗಕೂಡದು ಖಾದಿಯ ಮತ್ತು ವಿವಾಹದ ನೈತಿಕ ಸ್ವರೂಪಗಳು ಭಿನ್ನ ಭಿನ್ನವಾಗಿರುವವು. ಉಚಿತವಾದ ವಿವಾಹದಲ್ಲಿ ಖಾದಿಯು ಉಪಯೋಗವು ಮಾಡಲ್ಪಡದಿದ್ದರೆ ಅಲ್ಲಿ ಹೋಗುವದನ್ನು ನಾವು ಹೇಗೆ ತಪ್ಪಿಸಬೇಕೋ ಹಾಗೆಯೇ ಅನುಚಿತ ವಿವಾಹದಲ್ಲಿ ಖಾದಿಯು ಉಪಯೋಗಿಸಲ್ಪಟ್ಟರೂ ಅಲ್ಲಿ ನಾವು ಹೋಗಕೂಡದು

ಇದೇ ಸಂದರ್ಭದಲ್ಲಿ ಬೇರೊಬ್ಬ ಮಿತ್ರನಿಂದ ಪತ್ರವು ಬಂದಿರುವದು ಅವನೊಂದು ನಿಟ್ಟುಸುರು ಬಿಟ್ಟು ಹೀಗೆ ಬರೆದಿರುವನು, "ಖಾದಿಯ ಮಹಿಮೆಯು ತಿಳಿಯಿತು. ಒಂದು ವಿವಾಹದಲ್ಲಿ ನೆರೆದ ಜನರೆಲ್ಲರೂ ಖಾದಿಯನ್ನು ಧರಿಸಿ ವಧೂವರರನ್ನು ಖಾದಿಯಿಂದಲೇ ಸಿಂಗರಿಸುವರು ಆದರೆ ಎಲ್ಲ ಉಭಯ ಪಕ್ಷಗಳ ಸ್ತ್ರೀಯರು ಪರಸ್ಪರರನ್ನು ಅಧರ್ಮ ಬೈಗಳಿಂದ ಬಯ್ಯುವರು, ಮತ್ತ ಅಶ್ಲೀಲ ಪದಗಳನ್ನು ಕಟ್ಟಿ ಹಾಡುವದು; ಇಂಥ ಪ್ರಸಂಗದಲ್ಲಿ ಖಾದಿಯಸಲುವಾಗಿ ಈ ಅಶ್ಲೀಲವಾದ ಪ್ರಕಾರವನ್ನು ಸಹಿಸಬೇಕೊ, ಇಲ್ಲವೆ ಖಾದಿಯನ್ನು ದುರಕ್ಷಿಸಿ ನಮ್ಮ ಕಣ್ಣು ಕಿವಿಗಳಿಗೆ ಮೈಲಿಗೆ ಯಾಗಬಾರದೆಂದು ಇಂಥ ಮದುವೆಯಿಂದ ದೂರವಿರಬೇಕೊ?"

ಇದಕ್ಕೆ ನಾನು ಉತ್ತರ ಕೊಡಬೇಕೆಂದು ಈ ಪ್ರಶ್ನೆವು ಮಾಡಲ್ಪಟ್ಟಿಲ್ಲ. ಪತ್ರಲೇಖಕನಾದರೂ ತನ್ನ ಪ್ರಶ್ನೆಕ್ಕೆ ಉತ್ತರ ಕೊಡಿರಿರಿದು ಕೇಳಿಕೊಂಡಿಲ್ಲ. ಆದರೆ ಅವನು ಈ ದುಷ್ಟ ರೂಢಿಯ ಕಡೆಗೆ ನನ್ನ ಮನಸನ್ನೆಳೆಯಬೇಕೆಂಬ ಹೇತುವಿನಿಂದ ಪತ್ರ ಬರೆದಿರುವನು. ಅವ ನನ್ನುವದೇನಂದರೆ, ಎಲ್ಲಿ ಚಿಕ್ಕಜೆಕ್ಕ ಹುಡಿಗೆಯರಿಗೆ ಈ ಬಗೆಯು ನಿಂದ್ಯವಾದ ಶಿಕ್ಷಣವು ದೊರೆಯುತ್ತದೆಯೊ, ಅಲ್ಲಿ ಧರ್ಮರಾಜ್ಯವನ್ನು ಆತಿಸುವದೆಂತು? ಪ್ರಶ್ನೆವು ದುಃಖಕಾರಕವಿರುವದು. ಸ್ತ್ರೀಯರು ಅಶ್ಲೀಲ ಪದಗಳನ್ನು ಹಾಡುವಾಗ್ಗೆ ಅಶ್ಲೀಲತೆಯು ವಿಚಾರವು ಅವರ ಮನಸಿನಲ್ಲಿ ಸ್ಪುಟಿತವಾಗಿರುತ್ತದೆಂಬುದೇನೋ ನಿಜ. ಈದುಷ್ಟರೂಢಿಯು ಇಲ್ಲದಾಗುವದಕ್ಕೆ ನಮ್ಮ ಮರುಷ ವರ್ಗವು ಕಾರಣವೆಂದು ನನ್ನ ಅಭಿಪ್ರಾಯವಿದೆ. ಪುರುಷರು ತಮಗಿರುವ ಜ್ಞಾನವೂ ತಿಳುವಳಿಕೆಯೂ ಸ್ತ್ರೀಯರಿಗಾದರೂ ಇರುವದು ಅತ್ಯವಶ್ಯವಾದುದೆಂಬ ಮಾತಿನ ಬಗ್ಗೆ ವಿಚಾರವನ್ನೇ ಮಾಡಿಲ್ಲ. ಇಂಥ ಪ್ರಸಂಗಗಳಲ್ಲಿ. ಪುರುಷರು ಸತ್ಯಾಗ್ರಹವನ್ನು ಅವಲಂಬಿಸಬಹುದು. ಈ ಕಾಲವು ತರ.ಣರದಿರುವದು. ಅವರು ನೀತಿವಂತರು ಆಗಿದ್ದರೆ ಈ ಕೆಟ್ಟರೂಢಿಯನ್ನು ಸಹಜವಾಗಿ ತ್ರಿವ್ರದಲ್ಲಿಯೇ ನಿರ್ಮೂಲಸಬಹುದು. ಸುಶಿಕ್ಷಿತ ಸ್ತ್ರೀಯರೂ ತಮ್ಮ ವಿ[illegible] ಅವಲಂಬಿಸಿ [illegible] ಕಾರ್ಯಕರ್ತರು ಈ [illegible] ಮಾಡಬೇಕು. [illegible] ಸ್ತ್ರೀಯರು ಇಂಥ ಕಾರ್ಯಗಳಲ್ಲಿ [illegible] ಈ ಲಜ್ಜಾಸ್ಪದ ರೂಢಿಯು ಕೂಡಲೆ ಇಲ್ಲವಾಗುವದು.

(ಶೇವಜಿ ಪಸ) (ನೋಹನದಾಸ * ನುಜಂಡ ಗಾಂಧಿ)

(ಶಿಜನೇ ಪಾನಿನಿಂದ ಮುಂದೆ ಸಾಗಿದ್ದು)

ದಲ್ಲಿ ಬಿದ್ದ ತಂದೆ ತಾಯಿಗಳು ಅವರ ವಿನಂತಿಗೆ ಮಾನ್ಯಕೊಡದೇಕಾಗುತ್ತು ಉಪವಾಸದಿಂದ ಎರಡನೇದವರನ್ನು ನಮ್ಮ ಮತಕ್ಕೆಳೆತಯವದ. ಬಳಿತಲ್ಲವನ್ನೂ, ಈ ತರದ ಒತ್ತಾಳಿಕೆಯು ಕೂಡ ಒಂದ ತಗದ ಹಿಂಸೆಯೇ ಎಂದು ಆ ಸ್ವಯಂ ಸೇವಕರಿಗೆ ತಿಳಿಸಿದೆನು. ತಮ್ಮ ಹಕ್ಕನ್ನು ಕಾದಿಟ್ಟುಕೊಳ್ಳವದಕ್ಕಾಗಿ ಬೇಕಾದವರು ಉಪವಾಸ ಮಾಡಬಹುದ; ಆದರೆ ಎರಡನೇದವ ತಮ್ಮ ಮತವನ್ನೇ ಅನುಸರಿಸಬೇಕೆಂದು ಹಾಗೆ ಮಾಡತಕ್ಕದ್ದಲ್ಲ

ತನ್ನ ವಚನವನ್ನು ವಾಲಿಸಲಿಲ್ಲವೆಂದು ಓರ್ವ ಸಿಂದಿ ಅಂಗತಿಯವನನ್ನು ಸಮಾಜದಿಂದ ಬಹಿಷ್ಕಾರ ಹಾಕಿದ್ದರು. ಹಿಂದೀ ಜನರಂಥ ನಿರ್ಬಲರಾದ ಪ್ರಾಣಿಗಳಿಗೆ ಬಹಿಷ್ಕಾರ ಹಾಕುವದೂ ಉಚಿತವಲ್ಲೆಂದು ನಾನು ಉಪದೇಶಿಸಿದೆನು. ನನ್ನಲ್ಲಿ ಮನೆಮಾಡಿಕೊಂಡಿದ್ದ ದೋಷಗಳನ್ನು ಕೆತ್ತಿ ಹಾಕಲಿಕ್ಕೆ ಎಲ್ಲ ಜನ ರಕ್ಷಿಸಿ ಸರ್ವ ಸಾಧಾರಣ ಜಾಗೃತಿಯಂಟಾಗುವಂತೆ ಮಾಡುವದೇ ಸದ್ಯದ ಪರಿಸ್ಥಿತಿಯಲ್ಲಿ ಮೇಲಾದ ಉಪಾಯವು. ಅಗಸ, ಹಜಾಮ, ಮೊದಲಾದವರು ದೊರೆಯದಂತೆ ಸಮಾಜದಿಂದ ಬಹಿಷ್ಕಾರ ಹಾಕುವದು ಬಲವುಳ್ಳ ಸಮಾಜದಲ್ಲಿ ಯೋಗ್ಯವಾದ ದಂಡನೆಯೆಂಬದು ನಿಜವು; ಆದರೆ ಇಂಥಾವ ದೇಶದಲ್ಲಿ ಅನೇಕ ವರ್ಷಗಳನರೆಗೆ ಬಲಾತ್ಕಾರನೇ ರಾಜ್ಯದಾಡಳಿತೆಯು ಮುಖ್ಯಾಂಗವಾಗಿದೆಯೋ ಅಂಥ ದೇಶದಲ್ಲಿ ಒಹಿಷ್ಕಾರವು ವಶ್ತಿಷ್ಟು ಬಲಾತ್ಕಾರವಾದ ಉಪಾಯವೆನಿಸುವದು.

ಸಂಪೂರ್ಣವಾದ ಶಾಂತತೆಯು ಮಾರ್ಗದಿಂದಲೇ, ಬಿರ್ಸೋಲೀ ತಾಲೂಕಿನವರು ನಮ್ಮ ಪ್ರಪಂಚದ ಅನೇಕ ಸಂಗತಿಗಳಲ್ಲಿ ಒಳ್ಳೇ ಕ್ರಾಂತಿಯನ್ನು ಮಾಡಿಕೊಂಡದ್ದನ್ನು ಕಂಡು ನಾನು ಮಾತ್ರ ಬಹು ಚಕಿತನಾದೆ. ರಾಜಕಾರಣದಲ್ಲಿ ಎಂದಿಗೂ ಭಾಗ ತೆಗೆದುಕೊಳ್ಳದೇ ಇದ್ದಂಥ ಹಿರಿಯರೇ ಅಲ್ಲಿ ರಾಷ್ಟ್ರೀಯ ಕಾರ್ಯವನ್ನ ಮಾಡತಕ್ಕಿದ್ದನ್ನು ಕಂಡಪೇಲಂತೂ ನನಗೆ ಅತಿಶಯ. ಆನಂದವೂ ಆಶ್ಚರ್ಯವೂ ಉಂಟಾಗಿದೆ. ಬಿರ್ಸೋಲಿಯಲ್ಲಿ ಎಲ್ಲ ಸ್ವಯಂಸೇವಕರೂ ಪ್ರಾಣದಾತೆಯನ್ನು, ಯತ್ಕಿಂಚಿತ್ತಾದರೂ ಇತರೇ ಕಲಸ ಮಾಡತ್ತಿರುವರೆಂಬುದನ್ನು ಕೇಳಿ ವಾಚಕರ ಆನಂದವು ಉಕ್ಕೇರಿ ಬರುವದೆಂಬದರಲ್ಲಿ ಆಶ್ಚರ್ಯವೇನೂ ಇಲ್ಲ. ಸುದೈವದಿಂದ ಬಿರ್ಸೋಲಿ ತಾಲೂಕಿನಲ್ಲಿ ಬಡತನವು ಕೀರ ಕಡಿಮೆಯಾಗಿದ್ದು, ಬಹುತರವಾಗಿ ಎಲ್ಲ ಜನರೂ ವಿಶೇಷ ಆಯಾಸವಿಲ್ಲದೇ ಹೊಟ್ಟೆ ತುಂಬಿಕೊಳ್ಳುವರು. ಈ ಕಾರಣದಿಂದಲೂ, ಸ್ವಾರ್ಥವನ್ನ ಸಂಪೂರ್ಣವಾಗಿ ಬಿದಿಗೊತ್ತಿ, ಹಿಡಿದ ಕಾರ್ಯವನ್ನು ಮನಃಪೂರ್ವಕವಾಗಿ ಮಾಡಬೇಕು, ಇದರೆ ಜೀವ ಕೊಡಬೇಕೆಂಬ ದೃಢನಿಶ್ಚಯದಿಂದ, ಒಳ್ಳೇ ಯೋಗ್ಯತೆಯುಳ್ಳ ಜನರ ಬಂದು ವಧಕವು, ಆನಂದದಿಂದ ಸಿದ್ಧವಾಗಿ ಮುಂದೊರೆದು ಒಂದದರಿಂದಲೂ, ಬಿರ್ಸೋಲಿಯಲ್ಲಿಯ ರಾಷ್ಟ್ರೀಯ ಕಾರ್ಯವು ಇಷ್ಟು ಉತ್ಸಾಹದಿಂದ ನಡೆದಿದೆ. ಇಂಥ ಮಹಾ ತಾರ್ಯವನು ಮಾಡಿದ್ದರೂ ಕೂಡ, ಒಟ್ಟಿನ ಮೇಲೆ ನಾನು ಅವರ ವಿಷಯದಲ್ಲಿ ಬೇರೆ ತರದ ನಿರ್ಣಯವನ್ನು ಕೊಡಬೇಕಾಯಿತೆಂದು ವಿಷಾದಿಸುತ್ತೇನೆ, ಈ ನನ್ನ ನಿರ್ಣಯಕ್ಕೆ ಮೌಲಾನಾ ಅಝಾದ ಸೋಬಾನಿಯವರು ಸಂಪೂರ್ಣವಾಗಿ ಸಮ್ಮತಿಸಿದ್ದಾರೆ; ಕೆಲಸ ಮಾಡತಕ್ಕಂಥ ಅವೀರರಾದರೂ ನನ್ನ ನಿರ್ಣಯವನ್ನು ಸ್ವೀಕರಿಸಿದ್ದಾರೆ ಸ್ವದೇಶೀ ವ್ರತವನ್ನು ಚೆನ್ನಾಗಿ ಪಾಲಿಸಿ, ಕೈನೂಲಿನ ಅರಿವಿಯನ್ನೇ ಇತೀ ತಾಲೂಕಿನ ಜನರು ಪ್ರಸಾರದಲ್ಲಿ ತಂದು, ರಾಷ್ಟ್ರೀಯ ಶಾಲೆಗಳಲ್ಲಿ ಅಸ್ಪೃಶ್ಯರನ್ನು ಎನೂ ಅತಂಕವಿಲ್ಲದಂತೆ ಒರಮಾಡಿಕೊಂಡು ಆ ಮೇಲೆ ಸಹಕಾರಿವಾದಿಯಾಗಲಿ, ಇಂಗ್ಲೀಷ ಇಲ್ಲವೇ ಬೇರೆ ಜಾತಿಯ ಅಧಿಕಾರಿಯಾಗಲಿ, ಒಂಟಿಗನಾ

ಗೆ ತನ್ನು ಮಧ್ಯದಲ್ಲಿದ್ದರೂ, ಅವನ ಕೂದಲು ಕೂಡ ಧೈರ್ಯವಾಗದಂತೆ ಅವನನ್ನು ರಕ್ಷಿಸಲು ಬೇಕಾಗುವಂಥ ಅಹಿಂಸಾ ಧರ್ಮದ ಸಾಮರ್ಥ್ಯವನ್ನು. ಇಂಗ್ಲೀಷರಂಥ ಬಲಾಢ್ಯ ಸಾಮ್ರಾಜ್ಯದ ವಿರುದ್ಧ ಶಸ್ತ್ರ ಹೊಡೆದು ನಿಲ್ಲುವದಕ್ಕಿಂತ ಮೊದಲು ಬಡೋಲೀ ತಾಲೂಕಿನಲ್ಲಿ ನೆಲೆಗೊಳ್ಳುವತೆ ಎಷ್ಟಾಡು ಮಾಡಿರಬೇಕೆನ್ನುವದೇ ಆ ಸ್ಥಳ ನಿರ್ಣಯವು ಪರಮೇಶ್ವರನ ದಯೆ ಬಂದಿಗ್ರೆ ಸಾಕಿದೆ, ಇನ್ನು ಕೆಲವು ತಿಂಗಳ ಅವಧಿಯ ನಂತರ ಹೋಗಲಿ ಅ ಸ್ಥಳದಲ್ಲಿ ಸೇರಿನ ಎಲ್ಲ ಸಂಗತಿಗಳನ್ನು ಪಾಲಿಸುವನೆಂದು ಆ ಬಡೋಲೀಯ ವೀರರು ವಚನಕೊಟ್ಟಿದ್ದಾರೆ. ಇದಕ್ಕೆ ಇನ್ನು ಆರುತಿಂಗಳ ಅವಧಿಯನ್ನಿಶ್ಚರೆ ಸಾಕಿದೆ ಎಂದು ಓರ್ವ ಅನುಭವಿಕ ಸಹಕಾರವಾದಿಯೇ ಹೇಳಿದನು ತನ್ನು ನುಡಿಯುವಷ್ಟೆಲ್ಲ ಸತ್ಯವೆಂಬದನ್ನು ಕಳಿದ್ದ ಕೊಂಡ ಓರ್ವ ಉತ್ಸಾಹೀ ತರುಣನು ಒಂದು ತಿಂಗಳು ಸಾಕಿದೆಂದು ಹೇಳಿದನು. ಅನಂದದಾಯಕವಾದ ಈ ಬಡೋಲಿಯ ಪ್ರವಾಸದ ಬಗ್ಗೆ ಕಟ್ಟಕಡೆಗೆ ಇನ್ನೊಂದು ಸಂಗತಿಯನ್ನರುಹಿ ಈ ವಿಷಯವನ್ನು ಮುಗಿಸುವೆನು ಈ ತಾಲೂಕಿನಲ್ಲಿ ಸ್ವಯಂ ಸೇವಕರು ಅತಿಶಯ ಕಾಂತ ವೃತ್ತಿಯಿಂದಲೂ ಬಹು ಶ್ರಮಕಳಿಯಿಂದಲೂ ಕೆಲಸ ಮಾಡಿರುವದು ಸತ್ಯವೆಂದು ಅನೇಕ ಸಹಕಾರಿ ವಾದಿಗಳೇ ಒಪ್ಪಿಕೊಂಡರು ಅದುದರಿಂದ ಸರಕಾರದ ವಿರುದ್ಧ ಶಸ್ತ್ರ ಹೊಡೆದು ನಿಲ್ಲುವ ಪ್ರಸಂಗ ಬಂದರೆ ಆ ಬಹುಮಾನವು ಮೊದಲು ಈ ಬಡೋಲಿಗೇನೆ ದೊರೆಯಲ್ಕಿಂದು ನಾವು ಅಪೇಕ್ಷಿಸುವಾ.

ಪ್ರತಿನಿಧಿಗಳು—ರಾಷ್ಟ್ರೀಯ ಸಭೆಯ ನಿಯಮಗಳಿಗೆ ಅನುಸರಿಸಿಯೇ ಈ ಸಾರಿ ಎಲ್ಲ ಪ್ರತಿನಿಧಿಗಳು ಆರಿಸಲ್ಪಡುವರೆಂದು ನನ್ನ ಅಪೇಕ್ಷೆಯುದೆ. ಹೀಗೆ ಮಾಡುವದರಿಂದ ಕಾಂಗ್ರೇಸ್ಸಿನ ಮಹಿಗಳಲ್ಲಿ ನೊಂದಾಯಿಸಲ್ಪಟ್ಟಿಂಥ ಮತದಾರರ ನಿಜವಾದ ಪ್ರತಿನಿಧಿಗಳು ಚುನಾಯಿಸಲ್ಪಡುವರು ಯಾವನಾದರೊಬ್ಬ ಪ್ರತಿನಿಧಿಯು ಸರಕಾರದವರಿಂದ ಹಿಡಿಯಲ್ಪಟ್ಟಿದ್ದರೆ, ಪುನಃ ಮತ್ತೊಬ್ಬ ನನ್ನಾರಿಸಿ ಆಸ್ಥಳವನ್ನು ತುಂಬಿ ಬಿಡಬೇಕು. ಈಗಿನ ಪರಿಸ್ಥಿತಿಗೆ ಆವಶ್ಯವಿದ್ದ ರಚನಾವುಗಳನ್ನು ಪಾಸು ಮಾಡಬೇಕಾಗಿದ್ದರೆ, ಪ್ರತಿನಿಧಿಗಳ ಸಂಖ್ಯೆಯು ಸಂಪೂರ್ಣವಾಗಿರಬೇಕು ನನ್ನ ಮತದ ಪ್ರತಿಯೊಬ್ಬ ಪ್ರತಿನಿಧಿಯ ಅತ್ಯವೂ ಸಾರ್ವಜನಿಕ ದೃಷ್ಟಿಯಿಂದ ಅವನ ಎಲ್ಲಕೃತಿಗಳೂ ಅತಿಶಯ ಶುದ್ಧವಾಗಿರತಕ್ಕದ್ದು; ಕಾಂಗ್ರೆಸ್ಸಿನ ಕಾರ್ಯಕ್ರಮದ ಬಗ್ಗೆ ತನ್ನ ಚಿಲ್ಲೆಯ ಸ್ಥಿತಿಯೇಸಿದೆಂಬದು ಅವನಿಗೆ ಗೊತ್ತಿರಬೇಕು. ಕೈನೂಲನ್ನು ಹೇಗೆ ತೆಗೆಯತಕ್ಕದ್ದೆಂಬದನ್ನು ಎರಡನೇದವರಿಗೆ ಕಲಿಸಲಿಕ್ಕೆ ಸಹ ಬೇಕಾಗುವಷ್ಟು ಜ್ಞಾನವು ಅವನಿಗಿರತಕ್ಕದ್ದು; ಕೈನೂಲಿನಿಂದ ತಯಾರಿಸಿದ ಖಾದಿಯನ್ನೇ ಅವನು ಹೊರುವ ರೂಢಿಯನ್ನಿಟ್ಟುರಬೇಕು; ಹಿಂದೂ, ಮುಸಲ್ಮಾನ, ಶೀಖ್, ಪಾರ್ಸಿ, ಕ್ರಿಶ್ಚನ್ ಮೊದಲಾದ ಜಾತಿಗಳಲ್ಲಿ ಐಕ್ಯವು ಶಾಶ್ವತವಾಗಿ ನೆಲೆಗೊಳ್ಳಲಿಕ್ಕೂ, ರಾಷ್ಟ್ರೀಯ ಧ್ಯೇಯವನ್ನು ಸಂಪಾದಿಸಲಿಕ್ಕೂ ಅಹಿಂಸೆಯೇ ಮುಖ್ಯ ಸಾಧನವೆಂಬದರಲ್ಲಿ ಶ್ರದ್ಧೆಯುಳ್ಳವನಾಗಿರಬೇಕು; ತನಗೆ ಸಂಬಂಧಿಸಿದ ಅಸಹಯೋಗವ್ಯತಿರಿಕ್ತದಲ್ಲಿ ಅಡಚಣವಾದಂಥ ಪ್ರತಿಯೊಂದು ಭಾಗವನ್ನು ತನ್ನ ಆಚರಣೆಯುಲ್ಲಿ ತಂದಿರಬೇಕು; ಸೆರೆಮನೆಗೆ ಹೋಗಲಿಕ್ಕೆ ಸಿದ್ಧನಾಗಿರಬೇಕು; ಮತ್ತೂ ದೇಶ ಸೇವೆಗಾಗಿ ತನ್ನ ಎಲ್ಲ ವೇಳ್ಯೆಯನ್ನು ಅರ್ಪಿಸಿದ್ದರೂ ತನ್ನ ವೇಳ್ಯೆಯು ಬಹು ದೊಡ್ಡ ಭಾಗವನ್ನು ಅರ್ಪಿಸಿರಬೇಕು. ಮೇಲಾಗಿ ಅವನು ಹಿಂದೂ ಧರ್ಮದವನಾಗಿದ್ದರೆ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ಬಿಟ್ಟಿರಬೇಕು, ತನ್ನ ಚಿಲ್ಲೆಯಲ್ಲಿ ಅಂತ್ಯಜೋದ್ಧಾರದ ಕಾರ್ಯವನ್ನು ಮಾಡಿದವನಾಗಿರಬೇಕು ಮೂವತ್ತು ಕೋಟಿ ಜನರ ಸೇವೆಗಾಗಿ ಧೃತಿಶ್ಚಿತ್ತವುಳ್ಳವನೂ, ಸತ್ಯವಂತನೂ, ಅಂಜಿಕೆಯಿ ಅದ ಅರು ಸಾವಿರ ಜನರು ಸಿದರಿಸಿ ದೇನು ದೊಡ್ಡ ಸಂಖ್ಯೆಯ ಮುಸಲ್ಮಾನರು ಕೂಡ ತಮ್ಮ ಶೀಖ ಜನಂಥ ಕಾಂಗ್ರೆಸ್ ದಿಟ್ಟ ಪ್ರತಿನಿಧಿಗಳ ಸಭೆಯಲ್ಲಿ ಗೊಳಿಸ ವರೆಂದು ಅ ಪ್ರತಿಯೊಂದು ಪ್ರಾಂತದವರು ತಮ್ಮ ಯೋಗ್ಯತೆಯ ಪ್ರಕಾರ ಸ್ತ್ರೀಯರನ್ನೂ ಅಸ್ಪೃಶ್ಯರನ್ನೂ ಪ್ರತಿನಿಧಿಗಳನ್ನಾಗಿ ಆರಿಸುವರೆಂದು ನನ್ನ ಅಪೇಕ್ಷೆಯಿದೆ

ಶೀಖ ಜನರ ಸ್ವಾರ್ಥತ್ಯಾಗವು. — ನಮ್ಮ ಬಂಧುಗಳಾದ ಶೀಖ ಜನರು ತಮ್ಮ ಕೃತಿಗಳಿಂದ ಸ್ವದೇಶಿಯಉನ್ನತಿಯನ್ನಲ್ಲದೇ ಹಿಂದುಸ್ಥಾನದ ಉನ್ನತಿಯನ್ನೂ ಮಾಡಹತ್ತಿದ್ದಾರೆ. ತಮ್ಮ ಧರ್ಮ ಶುದ್ಧಿಗಾಗಿ ಸ್ವಂತ ದೇಹವನ್ನೇ ಯಜ್ಞ ಕುಂಡದಲ್ಲಿ ಹಾಕಲು ಅವರು ಸಿದ್ಧರಾಗಿದ್ದಾರೆ. ಇಲ್ಲಿದ ಅಡಂಬರ ಸಂಭ್ರಮಗಳನ್ನು ಎಬ್ಬಿಸದೇ, ಏಳ್ಗತ್ತಾದರೂ ಹಿಂಸೆಗೆ ಅಸ್ಪದ ಕೊಡದೇ ಲಷ್ಕರೀ ಶಿಪಾಯರ ಪದ್ಧತಿಯಂತೆ ಒಬ್ಬರ ಹಿಂದೊಬ್ಬರು ಕಾಂಗ್ರಾಗೃಹಕ್ಕೆ ಹೋಗಲು ಪ್ರಯತ್ನಿಸಹತ್ತಿರುವರು. ಇದೇ ಪ್ರಕಾರವ ಶಾಂತತಾಯುಕ್ತ ಧೈರ್ಯವನ್ನು ಇವರು ಮುಂದೆ ಸಹ ತೋರಿಸಹತ್ತಾರೆ, ಅವರು ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳುವರಲ್ಲದೇ, ಹಿಂದುಸ್ಥಾನದ ಉದ್ಧಾರ ಕಾರ್ಯಕ್ಕೆ ಒಳ್ಳೇ ಸಹಾ ಯವರು. ಶೀಖ ಜನರಲ್ಲಿ ನೆಲೆ ಉತ್ಸಾಹದ ವ್ಯಕ್ತಿಫಲವನ್ನು ಸ್ವಾನವೇ ಅತ್ಯುರತೆಯಿಂದ ಯಂಗಇಂಡಿಯಾ ವೆಂ ಸಂದಿ

ಪಾರಶೀ ಬಂಧು ಭಗಿನಿಯರಿಗೆ

ಪಾರ್ಸೀ ಬಂಧು ಭಗಿನಿಯರು ಹಿಂದು ಮುಸಲ್ಮಾನರಿಂದ ಪೀಡಿಸಲ್ಪಟ್ಟು ಅವರಿಗೆ ಹೆದರಿ ಕಾಳಿತಿರುವರೆಂಬ ಸಂಗತಿಯು ನಮಗೆ ಗೊತ್ತುಂಟು. ಈ ಸಂಗತಿಯನ್ನು ಹೇಳಲು ನನಗೆ ವಿಷಾದವೆನಿಸುತ್ತದೆ. ನಾವು ಸ್ವರಾಜ್ಯ ಮಂತ್ರವನ್ನು ಜಪಿಸುತ್ತಿರುವ ಕಾಲಕ್ಕೆ ಯಾವದಾದರೊಂದು ಜಾತಿಗಾಗಲಿ, ಒಂದು ನಿರ್ದೋಷಿಯಾದ ವ್ಯಕ್ತಿಗಾಗಲಿ ಭಯ ಪಡಲು ಕಾರಣ ಇಂಟಾದರೆ ಅದು ಲಜ್ಜಾಸ್ಪದವಾದ ಸಂಗತಿಯೆಂದು ಸ್ವರಾಜ್ಯವಾದಿಗಳೆಲ್ಲ ತಿಳಿಯತಕ್ಕದ್ದು. ಪಾರ್ಸೀ ಬಂಧು ಭಗಿನಿಯರಿಗೆ ನಾನು ನಿಶ್ಚಯ ಪೂರ್ವಕವಾಗಿ ಹೇಳುವೆನೆಂದರೆ—"ನಿಮ್ಮ ಸಂರಕ್ಷಣೆಗಾಗಿ ಮತ್ತು ಕ್ರೈಸ್ತ ಮುಂತಾದ ಬೇರೆ ಜಾತಿಗಳ ಸಂರಕ್ಷಣೆಗಾಗಿ ಪ್ರಾಣವನ್ನರ್ಪಿಸಲು ನೂರಾರು ಹಿಂದೂ ಮುಸಲ್ಮಾನರು ಸಿದ್ಧರಿರುವರು. ನಿಮ್ಮಲ್ಲಿ ಇಂಗ್ಲಿಷ ಅಧಿಕಾರಿಗಳು ಅಂಜಿಕೆಯನ್ನು ಹುಟ್ಟಿಸುತ್ತಿರಬಹುದು. ಕೆಲವರು ತಿಳಿದು, ಕೆಲವರು ತಿಳಿಯದೆ, ಹಾಗೆ ಮಾಡುತ್ತಿರಬಹುದು. ಆದರೆ ಇಂಥ ಹೆದರಿಕೆಗೆ ಬಲಿಬೀಳಬಿರುವದೇ ನಿಮಗೆ ಕೋಭಿಸುವದು. ಯಾವ ಮುಸಲ್ಮಾನರು ನಿಮ್ಮ ಬಾಂಧವರೆಂದು ತಿಳಿದು ಅವರಲ್ಲಿ ವಿಶ್ವಾಸವನ್ನಿಡತಕ್ಕದ್ದು. ಪರಸ್ಪರರಲ್ಲಿ ಬಡಿದಾಡಿ ಸಾಯುವದೇ, ಇಲ್ಲವೇ ಪರಸ್ಪರರಲ್ಲಿ ವಿಶ್ವಾಸವಿಟ್ಟು ಸಂರಕ್ಷಣೆ ಶ್ರೇಯಸ್ಸಂಪಾದಿಸುವದೇ. ವಿಶ್ವಾಸದಿಂದ ವಿಶ್ವಾಸವು ಹುಟ್ಟುತ್ತದೆ; ಅವಿಶ್ವಾಸದಿಂದ ಅವಿಶ್ವಾಸವು ಹುಟ್ಟುತ್ತದೆ."

ನಾನು ಈ ಆಶ್ವಾಸನ ಕೊಟ್ಟರೂ ಪಾರ್ಸೀ ಬಂಧು ಭಗಿನಿಯರಲ್ಲಿ ಯಾರಿಗಾದರೂ ಎರಡನೇದವರಿಂದ ಹೆದರಿಕೆಯುಂಟಾದರೆ ಅವರು ಕಾಂಗ್ರೆಸ ಖಿಲಾಫತ ಕಚೇರಿಗಳಲ್ಲಿರುವ ಕಾರ್ಯದರ್ಶಿಗಳಿಗೆ ಆ ಬಗ್ಗೆ ತಿಳಿಸಿದರೆ ಅದರ ಯೋಗ್ಯ ವ್ಯವಸ್ಥೆ ಮಾಡಲ್ಪಡುವದು. ಅನೇಕ ಪಾರ್ಸೀ ಬಾಂಧವರು, ಪಾರ್ಸೀ ಸ್ತ್ರೀಯರನ್ನು ಮುಸಲ್ಮಾನರು ಪೂರ್ಣ ರೀತಿಯಿಂದ ಸಂರಕ್ಷಿಸಿದರೆಂದೂ, ಎಷ್ಟೋ ಮಾರವಾಡೀ ಜನರ ಮನೆಗಳಲ್ಲಿ ಪಾರ್ಸೀ ಜನರ ಕುಟುಂಬಗಳು ರಕ್ಷಿಸಲ್ಪಟ್ಟವೆಂದೂ ಮುಂಬಯಿಯಲ್ಲಿ ನನಗೆ ಹೇಳಿದರು. ಅಖಿಲ ಹಿಂದೂ ಸಮಾಜವೇ ಅಗಲಿ ಅಖಿಲ ಮುಸಲ್ಮಾನ ಸಮಾಜವೇ ಆಗಲಿ, ಪಾರ್ಸೀ ಮತ್ತು ಕ್ರೈಸ್ತರನ್ನುದ್ದೇಶಿಸಿ ಅಂಜಿಕೆಯನ್ನು ಪಾರ್ಸೀ ಬಂಧು

ಯಲ್ಲಿ

ಬಾಂಧವರು ತಮ್ಮ ಬಗ್ಗೆ ನನಗೆ ಬರೆದು ತಿಳಿಸಿರುವರು. ಈ ಹಾನಿಯ ಬಗ್ಗೆ ವಿಚಾರ ಮಾಡಲಿಕ್ಕೆ ಒಂದು ವಿಚಾರಣಾ ಮಂಡಲವು ಸ್ಥಾಪಿಸಲ್ಪಡುವದೆಂದು ನಾನು ಆಶ್ವಾಸನವನ್ನೀಯುವೆನು. ಯಾರಿಗಾದರೂ ಹಾನಿಯಾಗಿ ಅದನ್ನು ತಡಕೊಳ್ಳುವ ಸಾಮರ್ಥ್ಯವು ಇರದಿದ್ದರೆ ಸಾಧ್ಯವಿದ್ದ ಮಟ್ಟಿಗೆ ಅವರ ಕಷ್ಟ ನಿವಾರಣೆ ಮಾಡುವದರಲ್ಲಿ ಬರುವದು. ಒಬ್ಬನಾದರೂ ಪಾರ್ಸೀ ಮನುಷ್ಯನು ಸಹಾಯಕ್ಕೆಂದು ಸರಕಾರದ ಬಳಿಗೆ ಹೋಗಬಾರದೆಂದು ನಾನು ಇಚ್ಛಿಸುತ್ತೇನೆ.

(ನವಜೀವನ) ಮೊ. ಕ. ಗಾಂಧೀ.

The Karnatak Trading Association.

ಉಳಿಸರಿ! ಮುಂಬಯಿ ಖರ್ಚು ಉಳಿಸರಿ !!

ಇನ್ನು ಮುಂದೆ ಒರೆದಿಗಾಗಿ ಮುಂಬಯಿಗೆ ಹಣವನ್ನು ಕಳುಹಿಸಿ ಸ್ವತಃ ಬರುವ ಕಾರಣವಿಲ್ಲ. ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೆಶನ್‌ದವರು ಮುಂಬಯಿ ಪೇಟೆಗಳನ್ನೆಲ್ಲ ನಿಮ್ಮ ಮನೆಯ ಬಾಗಿಲಕ್ಕೆ ತಂದು ಇಡಲು ಟೊಂಕ ಕಟ್ಟಿದ್ದಾರೆ ಒಂದು ದುಡ್ಡಿನ ಕಾರ್ಡ ಹಚ್ಚಿದರೆ ಸಾಕು. ಉಲಪಿ ಟವಾಲಿನಿಂದಾಗಲಿ, ಗೇಲ್ಸ ಪಾರ್ಸಲಿನಿಂದಾಗಲಿ, ಗಾಡ್ಸ ಪಾರ್ಸಲಿನಿಂದಾಗಲಿ, ನಿಮ್ಮ ಇಚ್ಛೆಯಿ ದ್ದಂತೆ ನಿಮ್ಮ ಸಾಮಾನಗಳು ಧಡ್ಯವಾಗಿ ವ್ಯಾಕ್ಯಾಗಿ ನಿಮ್ಮ ಮನೆಯು ಹಾ ದಿ ಹಿಡಿಯುತ್ತವೆ. ಪೇಟೆಯು ಅತ್ಯುತ್ತಮವಾದ ಪರಿಚಯವೇ ನೆಮ್ಮ ಗುಟ್ಟು ಅ ದರ ಮೂಲಕವಾಗಿಯೇ ಉತ್ತಮವಾದ ಸಾಮಾನಗಳನ್ನು ಅತ್ಯಂತ ಸೋತು ಸ್ವರವಾಗಿ ಕೊಳ್ಳಲಿಕ್ಕೆ ನಮಗೆ ಸಾಧ್ಯವಾಗುತ್ತದೆ. ಕಾರಣ ಮುಂಬಯಿ ಖ ರೀದಿ ಬಂದ ಕೂಡಲೆ ನಮ್ಮ ಸ್ಮರಣ ಮಾಡಿಕೊಳ್ಳಿರಿ

ಪತ್ತೆ—ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೆಶನ ಜನರಲ್ ಮರ್ಚಂಟ್ಸ ಕಮಿಶನ್ ಏಜಂಟ್ಸ

ಹಿರಿಯ ಬಿಲ್ಡಿಂಗ ಕಾನಾರ್ಕ್ ರೋಡ ಮುಂಬಯಿ

ತಾರೀನ ಪತ್ರಕ್ಕೆ—" ಕಾರ್ಟಾಸ್ಸ "

ಶಾಸ್ತ್ರೀಯ ವಿಚಾರ

ಈ [illegible] ಕನ್ನಡ [illegible] ಲೇಖನಗಳನ್ನು ಕನ್ನಡ ಗ್ರಂಥಗಳನ್ನು ವಿ ಮರ್ಶಿಸುತ್ತ ಹೋಗಲು ಪತ್ರಿಕಾ [illegible] ಲೇಖನಗಳನ್ನು ಕೊಡುವದೇ ನನ್ನ ಮು ಖ್ಯೋದ್ದೇಶವಾಗಿದ್ದರಿಂದ ತಿಂಗಳಿಗೆ ಒಂದು ವರ್ಷ ನವಶ್ರೀ ಈ ವಿಷಯಕ್ಕೆಂದು ಸ್ಥಳ ಕಾಯ್ದಿಡುವೆನು. ಯೋಗ್ಯರಿಗೆ ಕನ್ನಡಿಕ ವಿದ್ಯಾ [illegible] ನನ್ನ ಬೇರೆ ಬೇ ರೆ ಭಾಗದ ಕನ್ನಡಿಗರಿಗೆ ಪರಿಚ [illegible] ನವಾತ [illegible] ನವದು ಅತ್ಯವಶ್ಯವಾಗಿದೆ.

—ಸಂಪಾದಕ ಕನ್ನಡ ನವಜೀವನ.)

ವಸ್ತ್ರಧಾರಣಾನುಸಂಧಾನಕ್ರಮ.

ಬೆಂಗಳೂರಿನ ಕರ್ನಾಟಕ ಪುಸ್ತಕಾಲಯದವರು ಈ ಚಿಕ್ಕ ಪುಸ್ತಕವನ್ನು ಪ್ರಸಿದ್ಧಿಸಿದ್ದಾರೆ. ಕರ್ನಾಟಕದಲ್ಲಿದ್ದ ಗ್ರಂಥಗಳ ಕೊರತೆಯನ್ನು ದೂರ ಮಾಡ ಲಿಕ್ಕೆ ಎಲ್ಲ ಕೆಂದ ಕನ್ನಡ ಗ್ರಂಥಗಳನ್ನು ಒಂದೆಡೆಗೆ ಕಲೆ ಹಾಕಿ ಜನರಿಗೆ ಪುಸ್ತಕಗಳನ್ನು ಕೊಳ್ಳಲಿಕ್ಕೆ ಅನುಕೂಲ ಮಾಡಿ ಕೊಡುವದು ಈ ಕರ್ನಾಟಕ ಪುಸ್ತಕಾಲಯದ ಕಾರ್ಯವೆ

ವಸ್ತ್ರಧಾರಣಾನುಸಂಧಾನಕ್ರಮವೆಂಬ ಈ ಪುಸ್ತಕದಲ್ಲಿ ತಾವು ಧರಿಸೋ ವಸ್ತ್ರಗಳನ್ನು ಯಾ ಕಿ ಬಿಡಬೇಕೆಂಬದರ ವಿಷಯಕ್ಕೆ ತಾತ್ವಿಕ ರೀತಿ ಯಿಂದ ಶ್ರಿಯುತ ದಂಡಿನವರು ಉಪದೇಶ ಮಾಡಿದ್ದಾರೆ ಈಗಿನ ರಾಷ್ಟ್ರೀಯ ಜಾಗೃತಿಯ ಕಾಲದಲ್ಲಿ ಇದು ಉಪಯೋಗವಾಗವದು. ಹರಿಶಂವೃತ ಸಾರದಿಂದ ಕೆಲ ವು ಶಿಷ್ಟಾಚಾರಗಳನ್ನೆತ್ತಿ ತೋರಿಸಿದ್ದಾರೆ. ಆದ್ದರಿಂದ ಪಂಡಿತೇತರ ಅರಿವಿಯು ಒಪ್ಪಿ ತಾಗುವದ ಬಗ್ಗೆ ಇಲ್ಲದ ವಾದದಲ್ಲಿ ತೊಡಗಿದ ನಮ್ಮ ವೈದಿಕರು ಇದನ್ನು ಅ ವಶ್ಯವಾಗಿ ಓದಬೇಕು.

ಈ ಪುಸ್ತಕದಲ್ಲಿ ರಾ. ರಾ. ರಡ್ಡಿಯವರ ಬಗ್ಗೆ ತೆಗೆದ ಉದ್ಗಾರವು ಅಪಾ ತ್ರ ಸಂಕರವೆಂದು ನಮಗೆ ತೋರುತ್ತದೆ.

ಕನ್ನಡ ಪುಸ್ತಕಗಳಲ್ಲಿ ಇಂಗ್ಲೀಷ ಅಂಕೆಗಳನ್ನು ಹಾಕುವ ಅವಶ್ಯಕತೆ ಇ ಲ್ಲ. ಉದಾಹ ಮೈಸೂರಿನವರು ಈ ಅಪದ್ಧ ರೂಢಿಗೆ ಯಾಕೆ ಮನಸೋತಿರುವ ರೋ ನಾವು ಅರಿಯೆವು.

ಪಿಪ್ಪಿಗೆ-

ಗಿ ಕನ್ನಡ ಪದ್ಯ ರತ್ನಾವಳಿ. ಪಥಮ ಭಾಗ ಭಾರತ ವೈಭವ. ೩ ನಾಡೋಳಿ ಈ ಪುಸ್ತಕಗಳು ನಮ್ಮ ಹಸ್ತಗತವಾಗಿವೆ. ಭವಿಷ್ಯಾಳು ಮುಂದಿನ ಸಂಕೆ.

—ಸಂಪಾದಕ ಕ. ನ.

ವೀರ ವಿಲಾಸಿನಿ.

ಹಾಲ್ಕಂಡ ಬಹುಧಾನವಾದ ಅಧ್ಯಕ್ಷ ವಿಷಯ ಸ್ವಕಾಲಕ್ಕಾದ್ಯ ಗಣ್ಯರಿಗೆ ಗ
ಧಿಕವಾದ ಕನ್ನಡ ನಾಡ ಪತ್ರಿಕ! ಇದೇ ವಿಶೇಷ ಗೊಸೆ ತಾಂಬೂಲಕ್ಕೆ ಅ
ರಂಭವಾಗಿರುವು. ಈ ಅವಧಿಯೊಳಗಾಗಿ ತೆಗೆದುಗಳನ್ನು ಕೊಡುವವರಿಗೆ ಭಿಕ್ಷೆ
ಜಾಗಿ ವರ್ಷಕಾಲ ಬ್ರಾಹ್ಮಕವನ್ನು ಕಳುಹಿಸುವೆನು. ಅಂಚೆಯ ವೆಚ್ಚಕ್ಕಾಗಿ ೧
ಅಣೆ ಹಚ್ಚಿ ಮುಂಡಿಸಿ ಕಳಿಸಬೇಕು. ಯಾರಿಗೂ ೨ ಕಾಪಿಗಿಂದ ಜಾ
ನವದು ನಾಮೋಕ್ಕೆ ಕೊಂಡಾಗಿ ಬರುವುದಿಲ್ಲ. ಪ್ರತಿಯು ಬಲು ಅಂದವಾಗಿ ಪು
ಸ್ತಕವು. ಪ್ರಸಿದ್ಧವಾದ ಸಂಕೆಯಿಲ್ಲ !!

ನಿರ್ವಾಹಕ— ವಕ್ಯಾನೇಜರ್ ವೀರ ವಿಲಾಸಿನಿ.

ನಂ. ೧೫೪ ೨ ನೇ ಬೀದಿ ಚಾಮರಾಜ ಪೇಟೆ

ಬೆಂಗಳೂರ ಸಿಟಿ.

ಮಹತ್ವದ ಸೂಚನೆಯು.

ಕನ್ನಡ ನವಜೀವನದ ಕಚೇರಿಯು ಬಾಗ ಲಕೋಟೆಯಲ್ಲಿರುವದು. ಅದಕ್ಕೆ ಸಂಬಂಧಿಸಿ ದ ಪತ್ರ ವ್ಯವಹಾರ ಮನಿಯಾರ್ಡರ ಮೊ ಲಾದವುಗಳೆಲ್ಲ ಕಳಿಗಿನ ವಿಳಾಸಕ್ಕೆ ಕಳಿಸಲ್ಪಡಬೇಕು

"ವ್ಯವಸ್ಥಾಪಕ ಕನ್ನಡ ನವ ಜೀವನ"

ಬಾಗಲಕೋಟ ಜಿಲ್ಲಾ ವಿಜಾಪೂರ.

ಚಂದಾದಾರರಲ್ಲಿ ವಿಜ್ಞಾಪನೆ.

ಕನ್ನಡ ನವಜೀವನವನ್ನು ವ್ಹಿ ಪಿ. ಯಿಂ ದ ಕಳಿಸುವ ಪದ್ಧತಿಯಿಲ್ಲ ನಾವು ಇಡುವ ದಿಲ್ಲ. ಆದ್ದರಿಂದ ಹೊಸದಾಗಿ ಚಂದಾದಾರ ರಾಗಲಿಚ್ಛಿಸುವವರು ವರ್ಗಣೀ ಹೊಸವನ್ನು ಮ ನಿಯಾರ್ಡರದಿಂದ ಮುಂಗಡ ಕಳಿಸಿಕೊಡ ಬೇಕು.

ಈಗಾಗಲೇ ಹೆಸರುಗೆಳನ್ನು ನೊಂದಾಯಿ ಸಿದ ಮೊದಲಿನ ಆಶ್ರಯದಾತರಿಗೆ ಮಾತ್ರ ಪ ತಿಕೆಗಳು ವ್ಹಿ ಪಿ. ಯಿಂದ ಕಳಿಸಲ್ಪಡುವವು.

ವ್ಯವಸ್ಥಾಪಕ ಕನ್ನಡ 'ನವಜೀವನ'

ಬಾಗಲಕೋಟೆ

ಈ ಪತ್ರವನ್ನ ಮಿ॥ ಗುಂಡೇರಾವ ಕಾಮುಶೆಂಪ್ರು ಮಣಾಂಡಕರವರು. ತಮ್ಮ ವಿಜಾಪೂರ ಗ್ರಾ ವಾಧಿಕಾರೀ ಮುದ್ರಾಲಯದಲ್ಲಿ ಮುದ್ರಿಸಿ ಮಾಲಕ ಶ್ರೀನಿವಾಸ ರಂಜೇರಾವ ಮಂಗಳ ವೇಡೇ ಬಾಗಲಕೋಟೆ ಇವರ ಕೋಸ್ಕರ ವಿಜಾಪೂರದಲ್ಲಿ ಪ್ರಸಿದ್ಧವಾಡಿದರು.

ಸ್ತ್ರೀಯರ ಭಾರವು

REGISTERED No B 1583.
ಜಾಹೀರಾತಿನ ದರಃ-

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೩
ವಾರದ ಸಂಚಿಕೆ ಬೇಕಾದವರು ೦-೧-೬ ತಿಕೀಟು ಕಳಿಸಬೇಕು

'ಕನ್ನಡ ನವಜೀವನ'ದ ಒಂದು ಕಾಲಮ್‌ಗೆ ಒಂದು ಇಂಚಿಗೆ ಸ್ಪಷ್ಟವಾಗಿ ಒಂದು ಸಾರಿ ೧ ರೂಪಾಯಿ ಕಾಯಿದು ಜಾಹೀರಾತುಗಳ ಬಗ್ಗೆ ಸಮಕ್ಷವು ಅಥವಾ ಪತ್ರವ್ಯವಹಾರದಿಂದ ತಿಳಿದುಕೊಳ್ಳಬೇಕು.

ಶ್ರೀ.

ಕನ್ನಡ

ನವಜೀವನ

ಮಹಾತ್ಮಾಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವುದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಮಾರ್ಗಶೀರ್ಷ ವದ್ಯ ೮ ಶಕೆ ೧೮೪೩. ಗುರುವಾರ ತಾ. ೨೨ ನೇ ದಿಸಂಬರ ೧೯೨೧ ಇಸ್ವಿ. | ಸಂಚಿಕೆ ೫

ಸವಿನಯ ಸೂಚನೆ-

೧ ಕನ್ನಡ ನವಜೀವನವನ್ನು ಫ್ರೀ. ಪಿ ಯಿಂದ ಕಳಿಸುವ ಪದ್ಧತಿಯು ನಮ್ಮಲ್ಲಿಲ್ಲ. ಹೊಸದಾಗಿ ವರ್ಗಣಿದಾರರಾಗಲಿಚ್ಛಿಸುವವರೆಲ್ಲ ಚಂದಾ ಹಣವನ್ನು ಮನಿಯಾರ್ಡರದಿಂದ ಮುಂಗಡ ಸಲ್ಲಿಸಬಹುದು. ಹೆಸರು ವಿಳಾಸವನ್ನು ಸ್ಪಷ್ಟವಾಗಿ ಸುವಾಚ್ಯ ಅಕ್ಷರಗಳಿಂದ ಮನಿಯಾರ್ಡರ ಕೂಪನದಲ್ಲಿಯೇ ಬರೆಯತಕ್ಕದ್ದು. ಮನಿಯಾರ್ಡರ ನಮ್ಮ ಹಸ್ತಗತವಾದ ಮೇಲೆ ಅದರ ಮುಂದಿನ ವಾರದಿಂದ ಸಂಚಿಕೆಗಳು ಕಳಿಸಲ್ಪಡುವವು. ಈ ಸಂಚಿಕೆಯಿಂದಲೇ ಅದರ ವರ್ಷ ಪ್ರಾರಂಭವಾಯಿತೆಂದು ತಿಳಿಯತಕ್ಕದ್ದು.

೨. ನಮ್ಮಲ್ಲಿ ಹಿಂದಿನ ಸಂಚಿಕೆಗಳು ತೀರ್ಮ ಇರವಿಲ್ಲ. ಅವೆಲ್ಲ ಅಗಿಂದಾಗ್ಗೆ ಮಾರಿ ತೀರಿವೆ. ಆದ್ದರಿಂದ ಹಿಂದಣ ಸಂಚಿಕೆಗಳನ್ನು ಯಾರಿಗೂ ಕಳಿಸಲಾಗದ್ದು ಕ್ಯಾವಿಲ್ಲ.

೩ ನಮಾದರೀ ಸಂಚಿಕೆ ಬೇಕಾದವರು ಎರ್ನೂರು ಆರು ಬಿಲ್ಲಿಯ ತೀಕೀಟನ್ನು ಕಳಿಸತಕ್ಕದ್ದು; ಪುಕ್ಕಟೆಯಾಗಿ ಕೊಡುವದು ಕ್ಯಾವಿಲ್ಲ.

೪. "ನಮ್ಮ ವಾಚನಾಲಯವು ಬಾಲ್ಯಾವಸ್ಥೆಯಲ್ಲಿದೆ; ನಮ್ಮ ಸಂಸ್ಥೆಯು ಬಡತನ ಸ್ಥಿತಿಯಲ್ಲಿದೆ; ಆದ್ದರಿಂದ ಪುಕ್ಕಟೆಯಾಗಲೀ ಅರ್ಧ ಬೆಲೆಗಾಗಲೀ" ನಮಗೆ ಸಂಚಿಕೆಗಳನ್ನು ಕಳುಹಿಸಿರೆಂದು ನಮಗೆ ನೂರಾರು ಜನರು ಈಗಾಗಲೇ ಕೇಳಿ ಕೊಂಡಿದ್ದಾರೆ. ಕನ್ನಡ ನವಜೀವನವನ್ನು ಗಾನ್ಧಿ ತೆರೆದಂಥ ರಾಷ್ಟ್ರೀಯ ಸಭೆಯ ಗ ಹುಟ್ಟಿದೆ ಇನ್ನೂ ಪೂರಾ ಕಣ್ಣು ಕೂಡಾ ತೆರೆದಿಲ್ಲ. ಇಷ್ಟರಲ್ಲಿಯೇ ಧರ್ಮಾರ್ದವಾಗಿ ನೂರಾರು ಸಂಚಿಕೆಗಳನ್ನು ಕಳಿಸಿದರೆ ತೀರಿತು; ಅದು ಜೀವ ಹಿಡಿದು ನಿಲ್ಲಲಾರದು. ಆದ್ದರಿಂದ ಈ ತರದ ಸಂಸ್ಥೆಯವರೆಲ್ಲ ನಮ್ಮನ್ನು ಹ್ಞೆವಿಸಬೇಕೆಂದು ವಿನಂತಿಯದೆ

ವ್ಯವಸ್ಥಾಪಕ
ಕನ್ನಡ ನವಜೀವನ ಬಾಗಲಕೋಟ.

ಟಪ್ಪಣಿಗಳು

ಪೇಶ ಬಂಧೂ ದಾಸ.

'ನಡಿಯಂತೆ ನಡೆ, ಎಂಬ ನಾಣ್ನುಡಿಯನ್ನು ಲಾರ್ಡ ರೀಡಿಂಗರು ಚನ್ನಾಗಿ ಪಾಲಿಸಿದರು. ನಮ್ಮ ರಾಷ್ಟ್ರದಲ್ಲಿಯ ಪ್ರಮುಖ ಅಧಿಕಾರಿಗಳಿಗೆ ಸಹ ಸೆರೆಮನೆಯು ನಿಶ್ಚಯವೇ ಇದ್ದಾಗ ದೇಶ ಬಂಧೂ ದಾಸರನ್ನು ಈ ವಾರೆ ಕಾಂಗ್ರೆಸ ಅಗುವ ವರೆಗೆ ಹಿಡಿಯುವದಿಲ್ಲವೆಂದೂ, ಹಿಡಿದರೆ ಸಹ ಕಾಂಗ್ರೆಸಿನಲ್ಲಿ ಅವರ ಆಚರಣೆಯು ಚನ್ನಾಗಿ ಇರದಿದ್ದರೆ ಮಾತ್ರ ಹಿಡಿಯುವೆವೆಂದೂ ಬಂಗಾಲ ಗವರ್ನರರು ಹೇಳಿದಂತೆ ಭಾಸವಾಗಿತ್ತು. ಬಂಗಾಲ ಗವರ್ನರರ ಅರ್ಥಗರ್ಭಿತವಾದ ನುಡಿಯಕಿಂತ ಲಾರ್ಡ ರೀಡಿಂಗರು ಹಾಕಿದ ಬೆದರಿಕೆಯು ಆಚೆಯದಾಗಿತ್ತು. ಆದ್ದರಿಂದಲೇ ಅನುರಹಿತ ಮಾಡಲ್ಪಟ್ಟಿತು. ಸ್ವಯಂ ಸೇವಕರನ್ನು ನಿರ್ಮಾಣ ಮಾಡಿರಂದ ಮತ್ತೂ ಅನೇಕ ಜಾಹೀರನಾಮೆ ಅಧ್ಯಕ್ಷರನ್ನು ಸುಮ್ಮನೇ ಬಿಡುವದಾದರೂ ಹೇಗೆ? ಯುವರಾಜರು ಕಲಕತ್ತೆಗೆ ಬರುವ ದಿನ ಹರ್ತಾಳವಾಗಬೇಕೆಂಬ ಬಗ್ಗೆ ಒಂದೇ ಸಮನೆ ಪ್ರಯತ್ನಗಳು ನಡೆದೇ ಇದ್ದವು. ಇವೆಲ್ಲ ಕಾರಣಗಳಿಗೋಸ್ಕರ ಅಧ್ಯಕ್ಷರನ್ನು ಹಿಡಿದು ಹಾಕುವ ಯೋಜನೆಯಾಗಿರಬೇಕು, ಅವರನ್ನು ಹಿಡಿದ ಮೇಲೆ ಬೇರೆ ಪ್ರಮುಖರನ್ನು ಹಿಡಿದೊಯ್ದರು ಮುಸಲ್ಮಾನ ಕಾಜೀ ಜನರೆಲ್ಲಿ ಖಿಲ್ಫೇ ಪ್ರಖ್ಯಾತ ಪಂಡಿತರಾದ ಮೌಲಾನಾ ಅಬ್ದುಲ ಕಲಮ ಅಝಾದ ಇವರನ್ನೂ ಖಿಲಾಫತ ಕಮಿಟಿಯ ಕಾರ್ಯದರ್ಶಿಗಳಾದ ಮೌಲ್ವೀ ಅಕ್ರಾಮುಖಾನರನ್ನೂ, ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಸಾಸ್ಮಲರನ್ನೂ ಮಾರವಾಡೀ ಜನರ ಮೇಲೆ ಚನ್ನಾಗಿ ವರ್ಚಸ್ಸುಳ್ಳ ಪದ್ಮರಾಜ ಜೈನರನ್ನೂ ಅಧ್ಯಕ್ಷರ ಸಂಗಡ ಹಿಡಿದೊಯ್ದರು. ಹರತಾಳವು ಆಗಬಾರದೆಂಬ ಉದ್ದೇಶದಿಂದಲೇ ಈ ಜನರನ್ನು ಹಿಡಿದಿರಬೇಕು ಶಾಂತರೀತಿಯಿಂದ ಜನರಿಗೆ ಉಪದೇಶ ಮಾಡುವದು ಸಹ ಅಧಿಕಾರಿಗಳಿಗೆ ರುಚಿಸದೆಂಬದು ಇದರಿಂದ ಸ್ಪಷ್ಟವಾಗುತ್ತದೆ ಬಲಾತ್ಕಾರದಿಂದ ಅಂಗಡಿಗಳನ್ನು ತೆರಿಸುವದೇ ಅವರಿಗೆ ಬೇಕಾಗಿದೆಯೆಂಬದು ಖಂಡಿತವು. ಪಂಜಾಬದಲ್ಲಿ ಕರ್ನಲ ಜಾನಸನ್ ಸಾಹೇಬರು ಅಂಗಡಿಕಾರರಿಗೆ ಗದ್ದರಿಸುತ್ತ ಬೆದರಿಕೆ ಹಾಕಿ ಅವರನ್ನು ಲಾಸ್ಯದೀ ಜನರ ವಕ್ಕೆ ಕೊಟ್ಟಂತೆ ಇವರು ನಡೆದುಕೊಳ್ಳಲಿಕ್ಕೆ ಬಲ್ಲರು; ಅನಂತರ ಮುಖಂಡರನ್ನು ಬಂಧಿಸಿ ಪುಕ್ಕಾದ ಅಂಗಡಿಕಾರರನ್ನು ಜಲಿಸಿಗೊಳ್ಳಲಿಕ್ಕೆ ಇಟ್ಟಿ

ಸುತ್ತಾರೆ ನಮ್ಮುಂಡರನ್ನು ಹಿಡಿದೊಯ್ದರೂ ಕೂಡ ನಾವು ಕಿಂಚಿತ್ತಾದರೂ ಬೆದರಿಲ್ಲ, ನಾವು ಧೃಡನಿಶ್ಚಯದವರಾಗಿದ್ದು, ಸ್ವತಂತ್ರ ವಿಚಾರದಿಂದ ನಡೆಯುವವರಾಗಿದ್ದೇವೆಂಬಷ್ಟನ್ನು ತೋರಿಸಿ ಕೊಡಲಿಕ್ಕೆ ಕಲಕತ್ತೆಯ ವ್ಯಾಪಾರಸ್ಥರಿಗೆ ಇದೊಂದು ಒಳ್ಳೇ ಸಮಯವಾಗಿದೆ; ಅವರು ಈ ಕಾಲಕ್ಕೆ ಸಂಪೂರ್ಣ ಹರ್ತಾಳವನ್ನೇ ಪಾಲಿಸಿ ಬಿಡಬೇಕು. ೩೪ ನೆಯ ತಾರೀಖಿನ ದಿನವೇ ಹರ್ತಾಳವನ್ನು ಪಾಲಿಸುವದು ಅತ್ಯವಶ್ಯವಾಗಿದೆ. ಇಂದ ಅವಶ್ಯಕತೆಯು ಇನ್ನೆಂದಿಗೂ ಬಾರದು ಜನರ ದೃಷ್ಟಿಗೆ ಬೀಳಬೇಕು; "ಜನರು ಹೌದನ್ನಬೇಕು" ಎಂಬ ವಿಚಾರದಿಂದ ಮಾಡುವ ಕೆಲಸಕ್ಕೆ ಈಗ್ಗೆ ಮಹತ್ವವಿಲ್ಲ. ತಮ್ಮ ಮುಖಂಡರೆಂಬ ಅಭಿಮಾನವಿದ್ದರೆ ಕಲಕತ್ತೆಯ ಜನರು ಸಂಪೂರ್ಣವಾಗಿ ಹರತಾಳವನ್ನು ಪಾಲಿಸಲಿಕ್ಕೇಬೇಕು. ಸ್ವತಂತ್ರ ವಿಚಾರ ಮಾಡುವ ಶಕ್ತಿಯು ತಮ್ಮಲ್ಲಿ ದೆಂಬದಕ್ಕೂ, ಮುಖಂಡರಲ್ಲಿ ತಮ್ಮ ವಿಶ್ವಾಸವೂ ಇದೆಂಬದಕ್ಕೂ ಹರ್ತಾಳ ವ್ರತವನ್ನು ಪಾಲಿಸುವದೇ ಸಿದ್ಧಾಂತವು. ೩೪ ನೆಯ ತಾರೀಖಿನ ದಿವಸ ಸ್ವಯಂ ಸಿದ್ಧವಾದ ತಮ್ಮ ಕರ್ತವ್ಯವನ್ನು ಮಾಡಲಿಕ್ಕೆ ಕಲಕತ್ತೆಯ ಜನರು ಹಿಂದು ಮುಂದೆ ನೋಡರೆಂದು ನನ್ನ ಅನಿಸಿಕೆಯದೆ. ನಮ್ಮ ಮುಖಂಡರನ್ನು ಹಿಡಿದೊಯ್ದದ್ದರಿಂದ ಪ್ರತಿಯೊಬ್ಬ ಆಸಹಯೋಗಿಯು ತಾನೇ ಮುಖಂಡತ್ವವನ್ನು ವಹಿಸಿ ಶಾಂತತೆಯನ್ನು ಕಾಯ್ದಿಡತಕ್ಕದ್ದು. ೩೪ ನೇ ತಾರೀಖಿನ ದಿನ ಅವರೆಲ್ಲರು ಮನೆಯಲ್ಲಿ ಕುಳಿತುಕೊಳ್ಳುವದೇ ಉತ್ತಮ. ಇದರಿಂದಲೇ ಅವರು ಶಾಂತತೆಯನ್ನು ಕಾಯುವರು. ಯಾರಾದರೂ ಲಂಗಡಿಗಳನ್ನು ತೆರದಿದ್ದರೆ ಅವರ ಸಂರಕ್ಷಣೆಗಾಗಿ ಸ್ವಯಂ ಸೇವಕರು ಮಾತ್ರ ಹೊರಗಿರತಕ್ಕದ್ದು. ಸೆರೆ ಮನೆಗೆ ಹಿಡಿದೊಯ್ದ ಮುಖಂಡರ ಸ್ಥಳದಲ್ಲಿ ಕಾಂಗ್ರೆಸ ಮತ್ತು ಖಿಲಾಫತ ಕಮೀಟಿಗಳು ಈಗಾಗಲೇ ಬೇರೆ ಜನರನ್ನು ಆರಿಸಿದಬಹುದು. ನಮ್ಮ ಪರೀಕ್ಷೆಯ ಕಾಲವು ಖಂಡಿತವಾಗಿಯೂ ಈಗ ಬಂದಿದೆ. ಇನ್ನು ಮೇಲೆ ಮುಖಂಡತ್ವವನ್ನು ಹೊರುವದೆಂದರೆ ಕೈ ವಾ. ಮ್ಯಾಕ್ ಸ್ವಿನೀಯವರು ಲಾರ್ಡ ಮೇಯೋ ಧಶಿವ್‌ದ ಅಧಿಕಾರವನ್ನು ಹೊತ್ತಂತೆಯೇ ಎಂಬದನ್ನು ಎಲ್ಲರೂ ತಿಳಿದಿರತಕ್ಕದ್ದು. ಕೂಡಲೆ ಸೆರೆ ಮನೆಗೆ ಹೊಗುವ ಪ್ರಸಂಗವು ಬಂದೇಬರುವದು. ರಾಷ್ಟ್ರದಲ್ಲಿ ನಿಜವಾದ ಜಾಗೃತಿಯು ಒಟಾಗಿದ್ದೇ ಆದರೆ ಒಬ್ಬರ ಹಿಂದೊಬ್ಬರು ಬಂದೇ ಸವನಾಗಿ ಮುಖಂಡತ್ವವನ್ನು ವಹಿಸಲಿಕ್ಕೆ ಸಿದ್ಧರಾಗಿರತಕ್ಕದ್ದು; ಮತ್ತು ಸ್ತ್ರೀಯರೂ ಪುರುಷರೂ ಅವರನ್ನು ಹಿಂಬಾಲಿಸಲಿಕ್ಕೆ ಮುಂದೊರೆಯತಕ್ಕದ್ದು ಸರಕಾರದವರು ಅಹುತಿಗಾಗಿ ಜನರನ್ನು ಎಷ್ಟು ಜೋರಿನಿಂದ ಬೇಡುವರೋ ಅಷ್ಟೇ ಜೋರಿನಿಂದ ನಾವಾದರೂ ಜನರನ್ನು ಪೂರೈಸಿಕೊಡತಕ್ಕದ್ದು. ಅವರ ಬೆಡಿಕೆಯನ್ನೆಲ್ಲ ಪೂರೈಸುವ ಸಾಮರ್ಥ್ಯವು ನಮ್ಮಲ್ಲಿದೆಂಬದನ್ನು ಸಿದ್ಧಮಾಡಿಕೊಟ್ಟರೆ ತೀರಿತು, ನಾವು ಜಯಶಾಲಿಗಳಾಗವದು ಕಟ್ಟಿಟ್ಟ ಮಾತು.

ಕಾರಾಗೃಹದ ಉಪಯುಕ್ತತೆ.

ನಾವೆಲ್ಲರೂ ಕಾರಾಗೃಹಕ್ಕೆ ಹೋಗುವದರಿಂದ ಪಲವೇನು? ಇದರ ಬಗ್ಗೆ ಯಾರೂ ಸಂಶಯ ಪಡಬಾರದು. ಅವಶ್ಯ ವಿದ್ದದ್ದನ್ನು ಮಾಡುವ ಸಾಮರ್ಥ್ಯವು ನಮ್ಮಲ್ಲಿರದಿದ್ದರೆ, ನಾವು ಅಲ್ಪಸಂಖ್ಯಾಕರೆಂಬದನ್ನು ಒಪ್ಪಿಕೊಳ್ಳುವಾ. ಅದರಲ್ಲಿಯೇ ಪುರುಷಾರ್ಥವಿದೆ. ನಮ್ಮ ಕಾರ್ಯಕ್ರಮದಲ್ಲಿ ಒಳ್ಳೇ ವಿಶ್ವಾಸವಿದ್ದರೆ ತೀರಿತು. ಉಪದೇಶದಂತೆ ನಮ್ಮ ಆಚರಣೆಯನ್ನು ಇಟ್ಟುಕೊಳ್ಳುವದರಿಂದಲೇ (ಬರೆ ಉಪದೇಶನಿಂದ ಮಾತ್ರವಲ್ಲ) ಅಲ್ಪ ಸಂಖ್ಯಾಕರಾದರೂ ಬಹು ಸಂಖ್ಯಾಕರನ್ನು ನಮ್ಮ ಪಕ್ಷಕ್ಕೆ ತರುವದು ನಮಗೆ ಕಷ್ಟವಿದೆ. ಸಾವಿರ ಮಾತುಗಳನ್ನಾಡುವದರಕಿಂತ ನಾವು ಒಂದೇ ಮಾತನ್ನಾಡಿ ಅದನ್ನು ನಮ್ಮ ಚರಣೆಯಲ್ಲಿ ತರುವದೇ ಲೇಸೆಂಬ ಮಾತಿನ ಸತ್ಯವನ್ನು ತಿಳಿದುಕೊಳ್ಳುವಾ. ಹೊಸ ಹೊಸ ಮಾರ್ಗಗಳನ್ನು ಹುಡುಕುವದರಲ್ಲಿ ವ್ಯರ್ಥವಾಗಿ ವೇಳೆಗಳೆಯುವದರಗಿಂತ ನಮಗೆ ಗೊತ್ತಿದ್ದ ಮಾರ್ಗದಲ್ಲಿಯೇ ಎಲ್ಲ ಸಂಗತಿಗಳನ್ನು ಪಾಲಿಸುವದು ಮೇಲಾದ ಮಿತವ್ಯಯವು ಇದ್ದ ಸಂಗತಿಗಳನ್ನು ಪಾಲಿಸುವದರಿಂದ ಹೊಸ ಹೊಸ ಮಾರ್ಗಗಳು ತಾವಾಗಿಯೇ ತಲೆದೋರುವವು. ಇನ್ನು ನಮಗೆ ಹೆಚ್ಚಿನ ಸಹಾಯವು ಸಿಗುವದಿಲ್ಲವೆಂದು ತಿಳಿಯುವಾ. ತುರಂಗಕ್ಕೆ ಹೋಗಲು ಸಿದ್ಧರಿರದವರು ತಮ್ಮದೊಂದು ಮಾರ್ಗವನ್ನು ತಾವೇ ಹುಡುಕಿ ತೆಗೆಯುವರೆಂಬದನ್ನು ಚನ್ನಾಗಿ ನಂಬಿರುವಾ. ಕಿಂಚಿತ್ತಾದ್ದರು ಕಳಕಳೆಯು ಇದರಲ್ಲಿ ಕಂಡು ಬರುವನು. ಕಷ್ಟಗಳನ್ನು ಚನ್ನಾಗಿ ಸಹಿಸಿಕೊಂಡು ಅಸಹಕಾರತತ್ವದಲ್ಲಿ ತನ್ನ ನಂಬಿಗೆಯಿದೆಯೆಂದು ತೋರಿಸಿಕೊಡುವ ಹಿಂದುಸ್ತಾನದ ಪ್ರತಿಯೊಂದು. ವ್ಯಾಂತವು ತನ್ನ ದೇಶಸೇವೆಯ ಭಾಗವನ್ನು ಅರ್ಪಿಸಿದಂತಾಯಿತು ನಾವು ಐದತ್ತು ಸಾರೆ ಕಾರಾಗ್ರಹಕ್ಕೆ ಹೋದರು ಕೂಡ, ನಮಗೆ ಜನತೆಯ ಬೆಂಬಲವು ದೊರಯದೆ ಹೋದರೆ, ನಮ್ಮ ಮಾರ್ಗದ ಸತ್ಯತೆಯನ್ನು ಅಖಂಡ ಹಿಂದುಸ್ಥಾನಕ್ಕೆ ತಿಳಿಸಿಕೊಡುವವರೆಗೆ ಪುನಃ ಪುನ ಈ ನಮ್ಮ ಕಾರ್ಯಕ್ರಮವನ್ನು ಜರಗಿಸಬೇಕೆಂದೆನ್ನಲಿಕ್ಕೆ ನಾನೇನೂ ಅಂಜೆನು. ಸತ್ಯ ಧರ್ಮದ ಮಾರ್ಗವಿದ್ದರೇ ಇದೇ ಒಂದು. ಸ್ವಾತಂತ್ರ್ಯವನ್ನು ಪ್ರೀತಿಸಿ ಅದಕ್ಕೋಸುಗ ಕಷ್ಟವನ್ನು ಸಹಿಸಲು ಸಿದ್ಧರಾಗುವ ಜನರಿಗಾಗಿಯೇ ಸ್ವರಾಜ್ಯವು ಭೇಕಾಗಿದೆ. ಇಂಥ ಜನರ ಸಹಾಯದಿಂದಲೇ ನಾವು ಖಿಲಾಫತ ಪ್ರಕರಣದ ಭಾರವನ್ನು ಸಹಿಸಬೇಕಾಗಿದೆ. ಯಾಕಂದರೆ, ಅವರೇ ನಿಜವಾದ ಹಿಂದುಗಳು ಅವರೇ ನಿಜವಾದ ಮುಸಲ್ಮಾನರು; ಅವರೇ ನಿಜವಾದ ಶೀಖರು.

ನಮ್ಮ ಕಾರ್ಯಕ್ರಮದ ಸ್ವಾರಸ್ಯವು

ನಮ್ಮ ಕಾರ್ಯಕ್ರಮದ ತೊಡಕಿಲ್ಲದ ಸರಳತೆಯನ್ನು ತಿಳಿದು ಕೊಳ್ಳಬೇಕು ಅಂದರೆ ತೀರಿತು. ನಮಗೆ ಅದರ ಸುಖಮಯವಾದ ಸ್ವಾರಸ್ಯದ ರುಚಿಯು ಗೊತ್ತಾಗುವದು. ನೂಲುವದು, ಸೆರೆ ಮನೆಗೆ ಹೋಗಲಿಕ್ಕೆ ಅತುರರಾಗುವದು. ಇವೆರಡರ ಹೊರ್ತು ಮತ್ತಾವ ಕೆಲಸಗಳಿಲ್ಲ. ನಮಗೆ ಅಪ್ಪಣೆ ದೊರೆತರೆ ಬಂದೀವಾಸದಲ್ಲಿಯೂ ನೂಲುತ್ತ ಕೂಡಬೇಕು. ನೂಲುವಾಗಲೇ ಇಲ್ಲವೇ ಕಾರಾಗ್ರಹಕ್ಕೆ ಹೋಗುವಾಗಲೇ ನಮ್ಮ ಮನಸ್ಸನ್ನು ಶುದ್ಧವಾದ ಸ್ಥಿತಿಯಲ್ಲಿರಿಸಿ ಕೊಂಡಿರತಕ್ಕದ್ದು ಅಂದರೆ ಅಹಿಂಸಾ ಧರ್ಮ ಮತ್ತು ಬೇರೆ ಬೇರೆ ಜಾತಿಗಳಲ್ಲಿಯ ಐಕ್ಯ ಇವುಗಳಲ್ಲಿ ವಿಶ್ವಾಸವಿಡುವದು, ಇಂಗ್ಲೀಷರನ್ನೂ ಸಹಕಾರಿಗಳನ್ನೂ ನನ್ನ ಮತಕ್ಕೆ ಸಮ್ಮತಿಸದವರನ್ನೂ ದ್ವೇಷಿಸುವದನ್ನು ಬಿಟ್ಟರೆ, ಪರಸ್ಪರರಲ್ಲಿಯ ಅನಮಂಬಿಗೆಯ ಭೀತಿಯು ಅಳಿದು ಹೋದರೆ ಮತ್ತು ಕಷ್ಟಬಲಿಕ್ಕೆ ನಮ್ಮ ಮನಸ್ಸನ್ನು ಸಿದ್ಧಮಾಡಿಕೊಂಡು ಅಖಂಡ ಹಿಂದೀರಾಷ್ಟ್ರದ ಹೊಟ್ಟೆತುಂಬುವಂಥ ಕೆಲಸನನ್ನು ಮಾಡಲಿಕ್ಕೆ ಅಂದರೆ

ನೊಲುವದಕ್ಕೆ ಸಿದ್ಧರಾದರೆ ಜಗತ್ತಿನಲ್ಲಿಯ ಆದಾವ ಶಕ್ತಿಯು ನಮ್ಮೆದುರಿಗೆ ಎದೆತಟ್ಟಿ ನಿಲ್ಲುವದು? ಇದರ ಇಂಗಿತವು ನಿಮಗೆ ಕಾಣದೋ? ಅತ್ಯವಿಶ್ವಾಸವೊಂದು ನಮ್ಮಲ್ಲಿದ್ದರೆ ಸಾಕು. ನಮ್ಮ ಸಂಖ್ಯೆಯು ಸಣ್ಣದಿರಲಿ ದೊಡ್ಡದಿರಲಿ; ನಮ್ಮನ್ನುಹಿಡಿದೊಯ್ಯಲಿ ಇಲ್ಲವೇ ಗುಂಡೊಗದು ಕೊಲ್ಲಲಿ: ಇವೆಲ್ಲ ಕ್ಷುಲ್ಲಕಸಂಗತಿಗಳಿಂದ ನಮಗಾಗುವದಾದರೂ ಏನು? ನಾನು ಸಿದ್ಧಮಾಡಿದ ಕಾರ್ಯಕ್ರಮವು ಪೂರ್ಣ ಪ್ರಜ್ಞಾವಾದ ಜನರ ದೆಶೆಯಿಂದಲ್ಲ. ಆದರೆ ಅದು ಕೇವಲ ಶೀಲವಂತರೂ ಸತ್ಯವಂತರೂ ವೀರರೂ ಆದ ವ್ಯವಹಾರ ಚತುರರಿಗಾಗಿಯೇ ಇರುವದು. ನಾವು ಶೀಲವಂತರೂ ಸತ್ಯವಂತರೂ ವೀರರೂ ಆಗಿರದಿದ್ದರೆ, ಸ್ವರಾಜ್ಯ ಇಲ್ಲವೆ ಧರ್ಮ ಇವುಗಳ ಬಗ್ಗೆ ಮಾತಾಡಲಿಕ್ಕೆ ಕಿಂಚಿತ್ತಾದರೂ ನಮಗೆ ಅಧಿಕಾರವಿರುವದೋ? ಹಿಂದು ಮುಸಲ್ಮಾನ, ಕ್ರಿಶ್ಚಿಯನ್, ಜ್ಯೂ, ಶೀಖ, ಪಾರಸೀಗಳೆಂದೆನಿಸಿಕೊಳ್ಳಲು ನಾವು ಸಮರ್ಥರೋ? ಈ ಗುಣಗಳು ನಮ್ಮಲ್ಲಿರದಿದ್ದರೆ, ಖಿಲಾಫತ್ ಪಂಜಾಬ ಪ್ರಕರ್ಣಗಳ ಬಗ್ಗೆ ನಾವು ಮಾತಾಡುವದೆಂತು?

ಕರ್ನಲ್ ಪ್ರತಾಪಸಿಂಗಜಿಯವರೇ ಬಂಬೇಕು!

ಮಹಾ ಸಭೆಯ ಕಾಲದಲ್ಲಿ ಸರಕಾರವು ಅಹಮದಾಬಾದನ್ನ ಕರ್ನಲ್ ಪ್ರತಾಪಸಿಂಗ ಮತ್ತು ಅವರ ಸೈನಿಕರಿಗೆ ಒಪ್ಪಿಸುವದೆಂದೂ ಕರ್ನಲ್ ಪ್ರತಾಪಸಿಂಗರು ಮಹಾ ಸಭೆಯ ಪ್ರತಿನಿಧಿಗಳನ್ನ ದಂಡಿಸುವ ಕಾರ್ಯವನ್ನ ಕೈಕೊಳ್ಳುವರೆಂದೂ ಈಗೊಂದು ವಾರದಿಂದ ಸುದ್ದಿಯನ್ನು ಕೇಳುತಲಿದ್ದೇವೆ. ಈ ಸುದ್ದಿಯು ಸುಳ್ಳಿರುವದೆಂದು ನಾನು ತಿಳಿಯುತ್ತೇನೆ ಸರಕಾರವು ಇಷ್ಟು ಗಲಿತಧೈರ್ಯವಾಗಿಲ್ಲ; ಇಷ್ಟು ಭ್ರಷ್ಟಬುದ್ಧಿಯಾಗಿಲ್ಲ; ಹಾಗು ಇಷ್ಟು ಮೂರ್ಖ ಆಗಿಲ್ಲ. ಪ್ರತಿನಿಧಿಗಳನ್ನು ಶಿಕ್ಷಿಸ್ಕಲು ಸರಕಾರದ ಬಳಿಯಲ್ಲಿ ಬೇಕಾದಷ್ಟು ಸಾಧನಗಳಿವೆ. ಕರ್ನಲ್ ಪ್ರತಾಪಸಿಂಗರು ಸಹಾಯವು ಸರಕಾರಕ್ಕೆ ಅವಶ್ಯವಾಗುವದೆಂದು ನಾನು ನಂಬಲಾರೆನು. ಇದೆಲ್ಲ ನಿಜವಿದ್ದರೂ, ಸರಲ ಸ್ವಭಾವದ ಜನರು ಈ ಸುದ್ದಿಯು ನಿಜವಿದೆಂದು ನಂಬಿ ಹೆದರಿಕೆಯಿಂದ ಅಸ್ವಸ್ಥ ಚಿತ್ತರಾಗಿರುವರೆಂಬ ಸಂಗತಿಯನ್ನು ನಾನುಬಲ್ಲೆನು. ಈ ಸುದ್ದಿಗೆ ಯಾರೂ ಕಿವಿಗೊಡಬಾರದು ಎಂದು ಮೇಲೆ ಅದು ನಿಜನಿರ್ಧಾರೂ ಕಾಲು ಹಿಂದೆಗೆಯುಬಾರದು. ಸ್ವಕಿಯೊಂದು ಸುದ್ದಿಯಿಂದ ನಾವು ಗಾಬರಿಗೊಳ್ಳಬದುಚಿತವಲ್ಲ. ಅದು ಹೇಡಿತನದ ಲಕ್ಷಣವು. ಹೇಡಿಗಳು ಯಾವ ಕಾಲದಲ್ಲಿಯೂ ಸ್ವರಾಜ್ಯವನ್ನು ದೊರಕಿಸಿಲ್ಲ. ಅದಲ್ಲದೆ ಹೀಗೆ ಗಾಬರಿಗೊಳ್ಳುವದು ನಾಸ್ತಿಕತೆಯ ಚಿಹ್ನವು. "ವರಮೇಶ್ವರನು ಮಾಡಿಸಿದ್ದಾಗಲಿ!" ಎಂದು ಹೇಳಿ ನಾವೇಕೆ ನಿಶ್ಚಿಂತರಾಗಿರಕೂಡದು?

ಒಳ್ಳೆಯದು! ಕರ್ನಲ್ ಪ್ರತಾಪಸಿಂಗಜಿಯವರು ಸೈನ್ಯ ಸಮೇತರಾಗಿ ಒರುವರೆಂದು ಇಟ್ಟುಕೊಳ್ಳೋಣಾ! ಆದರೆ ಆಂಜುವದೇಕೆ? ಪ್ರತಾಪಸಿಂಗರವರು ನಮ್ಮವರು, ಅವರ ಸೈನಿಕರಾದರೂ ನಮ್ಮವರು. ಅವರಿಗೆ ಸ್ವಾಗತವನ್ನಿತ್ತು ಅವರನ್ನು ಸತ್ಕರಿಸುವಾ! ಅದರಂತೇ ಅವರ ಗುಂಡುಗಳ್ನಾದರೂ ಆದರಿಸುವಾ! ಗುಂಡುಗಳನ್ನು ಹಾರಿಸುವ ಸಂಧಿಯುನ್ನಾದರೂ ಅವರಿಗೇಕೆ ನಾವು ಒದಗಿಸಿ ಕೊಡಬೇಕು? ಮುನ್ನೋಡಿ ನಮ್ಮ ನಮ್ಮ ಹಾದಿಯಲ್ಲಿ ನಾವು ಹೋಗುತ್ತಿರುವಾಗ ನಮ್ಮನ್ನು ಪೀಡಿಸುವವರಾರು? ಹಿಂದು ಮೇಲೆ ಯಾರಾದರೂ ಪೀಡಿಸ ಬಂದರೆ ಬರಲಿ, ನಾವು ನಮ್ಮ ಮಾರ್ಗದಲ್ಲಿ ಸ್ಥಿರವಾಗಿದ್ದರಾಯಿತು ನಮ್ಮ ಖಾದಿಯು ಟೊಪ್ಪಿಗೆಯನ್ನು ತೆಗೆದೊಗೆಯಲೆತ್ನಿಸುವರೋ! ಹಾಗೆ ಮಾಡಿದರೆ ಟೊಪ್ಪಿಗೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುವಾ ಮತ್ತು ಪೆಟ್ಟುಗಳನ್ನು ತಿನ್ನುವಾ! ಒಂದು ವೇಳೆ ತೆಗೆದೊಗೆದರೆ, ಮತ್ತೊಂದು ಟೊಪ್ಪಿಗೆಯನ್ನು ಹಾಕಿಕೊಳ್ಳುವಾ, ಮತ್ತು ಹೆಚ್ಚಿಗೆ ಪೆಟ್ಟುಗಳನ್ನು ತಿನ್ನುವಾ! ಕೊನೆಗೆ ಅವರೇ ಬೇಸತ್ತು ದಣಿದು ಹೋಗುವರು. ಪೆಟ್ಟು ತಿನ್ನುವ ಸಾಮರ್ಥ್ಯವಿಲ್ಲದವನು ಆ ಹಾದಿಗೆ ಹೋಗ ಕೂಡದು. ಆದರೂ ಬಿಳಿ ಟೊಪ್ಪಿಗೆಯನ್ನು ಬಿಡಬಾರದು. ನಿರ್ಮಾಂಸಾಹಾರಿಯಾದವನು ಉತ್ತರ ಧ್ರುವದಂಥ ಮಾಂಸವಿಲ್ಲದೇ ಸಾಗದ ಪ್ರದೇಶದಲ್ಲಿ ಕಾಲಿಡನು. ಒಂದು ವೇಳೆ ಅಲ್ಲಿ ಹೋಗುವ ಪ್ರಸಂಗವು ಅವನಿಗೆ ಬಂದರೆ ಅನ್ನವಿಲ್ಲದಿದ್ದೆ ಸಾಯುವನು. ಅದರೆ ಪ್ರಾಣಸಂರಕ್ಷಣವನ್ನು ಮುಟ್ಟಿನು. ಸಾವು ಬಿಂದರೂ ಚಿಂತೆಯಿಲ್ಲ; ಕರ್ತವ್ಯವನ್ನು ಬಿಡಕೂಡದು. ಇದು ಧರ್ಮವು; ಉಳಿದದ್ದು ಅನುಕೂಲ ಸಿಂಧುವೆ, ಚೇಷ್ಟೆಯು!

ಬಿಳಿ ಸಿವಾಯಿಗಳ ಭಯವನ್ನು ಬಿಡಬೇಕೆಂದು ನಿಶ್ಚಯಿಸಿದ ನಮಗೆ ಕರ್ನಲ್ ಪ್ರತಾಪಸಿಂಗರ ಕಪ್ಪು ತಿವಾಯಿಗಳ ಅಂಜಿಕೆಯೆಕೇಕೆ?

ನಮ್ಮ ಕಲಹ ಪ್ರವೃತ್ತಿಯೂ ವೈರಭಾವವೂ ನಮ್ಮಲ್ಲಿ ಅಂಜಿಕೆಯನ್ನು ಹುಟ್ಟಿಸುತ್ತದೆ. ನಾವು ಯಾವನನ್ನಾದರೂ ನಮ್ಮ ವೈರಿಯೆಂದು ತಿಳಿದರೆ ಮಿತ್ರತ್ವದಿಂದ ಅವನು ನಮ್ಮ ವೈರಿಯಾಗುವನು. ಆ ಕ್ಷಣವೇ ಅವನು ನಮ್ಮ ಮಿತ್ರನಾಗುವನು. ನಾವು ಭಾವಿಸಿದಂತೆ ನಾವಾಗುವೆವು. ಚಿತ್ತದಂತೆ ಬಿಳಿಕೊಳ್ಳುವೆವೆ. ಮಿತ್ರತ್ವವನ್ನು ಬಿತ್ತಿ ಶತ್ರುತ್ವವನ್ನು ಬೆಳಕೊಳ್ಳುವೆವೋ? ನಮ್ಮ ಅಸಹಕಾರವು ವೈರಿಗಳನ್ನು ಮಿತ್ರತ್ವದಿಂದ ಗೆಲ್ಲುವ ಸಾಧನವಿರುತ್ತದೆ

ಇದು ಕೇವಲ ಹಿಂದುಗಳ ಧರ್ಮವಲ್ಲ ಇಸ್ಲಾಮವಾದರೂ ಇದನ್ನೇ ಉಪದೇಶಿಸುತ್ತದೆ. ಇಸ್ಲಾಮದಲ್ಲಿ ಸಹಿಷ್ಣುತೆಗೆ ಮೊದಲನೇ ಸ್ಥಾನವು ಕೊಡಲ್ಪಟ್ಟದೆ ಯುದ್ಧಕ್ಕೆ ಆಸ್ಪದವಿಲ್ಲೆಂಬಂತಿಲ್ಲ. ಆದರೆ ಕೆಳಗೆ ಕಾಣಿಸಿದ ಅಸಾಧಾರಣ ಪ್ರಸಂಗಗಳಲ್ಲಿಯೇ ಯುದ್ಧಕ್ಕೆ ಅವಕಾಶವುಂಟು. ಎಲ್ಲ ಉಪಾಯಗಳೂ ನಿಂತು ಹೋಗಿರಬೇಕು; ಶತ್ರುಗಳಕಿಂತ ನಮ್ಮ ಸಂಖ್ಯೆಯು ಅಲ್ಪವಿರಬೇಕು; ಯುದ್ಧಕ್ಕೆ ಹೋಗದಿರುವದು ಹೇಡಿತನದ ಲಕ್ಷಣವೆಂದು ಎಣಿಸಲ್ಪಡದೇಕು; ಪತ್ತು ಯುದ್ಧಕ್ಕೆ ಪ್ರೋತ್ಸಾಹಿಸುವ ನಮ್ಮ ನಾಯಕನು ಅತ್ಯಂತ ಉಜ್ವಲ ಶೀಲನಾಗಿದ್ದ ಎಲ್ಲ ಜನರ ವಿಶ್ವಾಸವನ್ನು ಅವನು ಸಂಪೂರ್ಣವಾಗಿ ಸಂಪಾದಿಸಿರಬೇಕು, ಮತ್ತು ಅವನಲ್ಲಿ ಎಳ್ಳಷ್ಟು ಸ್ವಾರ್ಥವು ಇರಕೂಡದು. ಹಿಂದುಸ್ಥಾನದಲ್ಲಿ ಈ ಸ್ಥಿತಿಯಿಲ್ಲ. ಸಂಖ್ಯೆಯಿಂದ ನಾವು ಹೆಚ್ಚಿರುವೆವು; ಯುದ್ಧದಲ್ಲಿ ನಾಯಕನಾಗಲು ಯೋಗ್ಯ ಮನುಷ್ಯನು ನಮ್ಮಲ್ಲಿಲ್ಲ; ಸಾವೀಗ ಯುದ್ಧಕ್ಕೆ ನಿಲ್ಲುವದು ಪುರುಷತ್ವದ ಲಕ್ಷಣವೆಂಬೆಣಿಸಲ್ಪಡಲಾರದು; ನಮ್ಮ ಉಳಿದ ಯಾವತ್ತು ಉಪಾಯಗಳು ನಿಂತು ಹೋಗಿಲ್ಲ; ನಮಗೆ ಶಾಂತಿಯ ಶಿಕ್ಷಣವು ಸಂಪೂರ್ಣವಾಗಿ ದೊರೆತಿಲ್ಲ; ನಾವು ಸ್ವದೇಶಿ ವ್ರತವನ್ನು ಕುಂಟಾ ಪಾಲಿಸಿಲ್ಲ; ನಮ್ಮ ಅಂತಃಕರಣವು ಬಿಳಿತಾಗಿ ಶುದ್ಧವಾಗಿಲ್ಲ; ನಾವೆಲ್ಲ ಹಿಂದು-ಮುಸಲ್ಮಾನರು ಮನಸ್ಸನ್ನು ಸಂಪೂರ್ಣವಾಗಿ ನಿರ್ಮಲ ಗೊಳಿಸಿಲ್ಲ; ನಮ್ಮಲ್ಲಿ ಅನೇಕರು ಈವರೆಗೂ ಸರಕಾರದೊಂದಿಗೆ ಸಹಕಾರವನ್ನು ಮಾಡುತ್ತಿರುವರು. ಇಂಥ ಸ್ಥಿತಿಯಲ್ಲಿ ನಾವು ಯುದ್ಧವನ್ನು ಹೂಡಿದರೆ - ದು ಜೆಹಾದ್ ಅಂದರೆ ಧರ್ಮಯುದ್ಧವೆನಿಸದು, ಆದರೆ ಫಿಸಾದ್ ಅಂದರೆ ರಕ್ತಪಾತನೆನಿಸುವದು; ಹೀಗೆ ಅನೇಕಜನ ಮುಸಲ್ಮಾನ ಪಂಡಿತರ ಮುಖದಿಂದ ನಾನು ಕೇಳಿರುವೆನು.

ಯಾವದೇ ಧರ್ಮದ ದೃಷ್ಟಿಯಿಂದ ನೋಡಿದರೂ ಪ್ರೇಮದಿಂದ ಶತ್ರುಗಳನ್ನು ಜಯಿಸಬೇಕು. ಎಂಬುನದೊಂದೇ ನಿರ್ಣಯವು ಹೊರಡುವದು. ಆದರಿಂದ ಬಿಳಿ ಜನರ ಸೈನ್ಯವೇ ಒರಲಿ; ಕಪ್ಪು ಜನರ ಸೈನ್ಯವೆ ಬರಲಿ; ಆಗಲೊಂದಿಗೆ ನಮ್ಮ ಕರ್ತವ್ಯವೆತ್ತೆ ಒಂದೇ ಬಗೆಯಾಗದ್ದಿರಬೇಕು. ಆದ್ದರಿಂದ ಕರ್ನಲ್ ಪ್ರತಾಪಸಿಂಗಜಿಯವರು ನಮ್ಮನ್ನು ದಂಡಿಸುವದಕ್ಕಾಗಿ ಬರುವದಿಲ್ಲೆಂದು ನನಗೆ ಖಾತ್ರಿಯಿದ್ದರೂ ಅವರಾಗಲಿ ಇಲ್ಲವೆ ಜೇರೆ ವ್ಯಕ್ತಿಯನ್ನೊಬ್ಬ ಕರ್ನಲನಾಗಲಿ ತನ್ನ ದಂಡು ತೆಗೆದುಕೊಂಡು ಬರುವನೆಂದು ಕೆಲ ಹೊತ್ತು ತಿಳಿದರೂ "ಕರ್ನಲ್ ಸಾಹೇಬರೇ ಬರಬೇಕು" ಎಂದು ಹೇಳಿ ಅವರನ್ನು ಒರಮಾಡಿಕೊಳ್ಳಬೇಕಲ್ಲದೆ ಒಂದು ಹೆಜ್ಜೆಯಾದರೂ ಹಿಂದಿಡಕೂಡದು.

ಕನ್ನಡ ನವಜೀವನ.

ಮಾಗ೯ಶೀಷ೯ ವ.ಲ ಗುರುವಾರ ಶಕೆ ೧೮೪೪.

ಸ್ತ್ರೀಯರ ಭಾರವು.

ಕಲಕತ್ತೆಯ ಹೆಂಗಸರು ಖಾದೀ ಅರಿವೆಯನ್ನು ಮಾರಿದ್ದರಿಂದ ಕಲಕತ್ತೆಯ ಗಂಡಸರಿಗೆ ತ್ರಾಸವಾಯಿತು. ಇದಕ್ಕಾಗಿ ಆ ಸ್ತ್ರೀಯರು ಬಂಧಿಸಲ್ಪಟ್ಟಿದ್ದಾರೆಂದು ವೃತ್ತ ವತ್ತಗಳಲ್ಲಿ ಪ್ರಸಿದ್ಧವಾಗಿದೆ. ಭರೂವ ಕಾಂಗ್ರೆಸಿನ ಅಧ್ಯಕ್ಷರ ಪತಿವ್ರತೆಯಾದ ಮಡದಿಯೂ, ವಿಧವೆಯಾದ ಭಗಿನಿಯೂ, ಮತ್ತೂ ಅವರ ಭ್ರಾತೃಜನ್ಯೆಯೂ ಒಂದಿಸಲ್ಪಟ್ಟವರಲ್ಲಿ ಸಮಾವೇಶರಾಗಿದ್ದಾರೆ. ಶೆರೆಮನೆಗೆ ಹೋಗುವ ಬಹು ಮಾನವು ಪ್ರಾರಂಭದಲ್ಲಿಯಂತೂ ಸ್ತ್ರೀಯರಿಗೆ ದೊರೆಯುವದೆಂದು ನಾನು ತಿಳಿದಿರಲಿಲ್ಲ. ಸನಿನು ಕಾಯದೇ ಭಂಗವನ್ನು ಸ್ತ್ರೀಯರು ಮೊದಲಿಗೆ ಪ್ರಾರಂಭಿಸತಕ್ಕವರಿದ್ದಿಲ್ಲ ಆದರೆ ಹೆಂಗಸು ಗಂತಸು ಎಂಬ ಪಕ್ಷಪಾತ ಬುದ್ಧಿಯ ಭೇದವನ್ನೆಂಟು ಮಾಡ ಭಾರದೆಂಬ ಉತ್ಸಾಹದಿಂದ ಬಂಗಾಲ ಸರಕಾರದವರು ಕಲಕತ್ತೆಯ ಮೂರು ಜನ ಸ್ತ್ರೀಯರಿಗೆ ಈ ಬಹುಮಾನವನ್ನಿತ್ತರು. ನಮ್ಮ ಕಾರ್ಯಪ್ರಸಾದಲ್ಲಿಯ ಈ ಹೆಚ್ಚು ಕಡಿಮೆಯನ್ನು ಅಪಿಂಡ ಹಿಂದುಸ್ಥಾನವು ಸಂತೋಷದಿಂದ ಸ್ವೀಕರಿಸುವದೆಂದು ನನ್ನ ನಂಬಿಗೆಯಿದೆ. ಸ್ವರಾಜ್ಯ ಸಂಪಾದನೆಯ ಭಾರವನ್ನು ಪುರುಷರಷ್ಟೇ ಸ್ತ್ರೀಯರೂ ಹೊರತಕ್ಕದ್ದು. ಈ ಶಾಂತಮಯ ಯುದ್ಧದಲ್ಲಿ ಸ್ತ್ರೀಯರು ಪುರುಷರನ್ನು ಹಿಮ್ಮೆಟ್ಟಿಸಿ ಮುಂದೆ ಹಿಡಿ ಹೋಗಬಹುದು. ಧಾರ್ಮಿಕ ವಿಷಯದಲ್ಲಿಯಂತೂ ಪುರುಷರಿಗಿಂತ ಸ್ತ್ರೀಯರೇ ಶ್ರೇಷ್ಠರೆಂಬದನ್ನು ನಾನೆಲ್ಲರೂ ಬಲ್ಲೆವು. ಯಜ್ಞಪರಿಗೂ ಗೊತ್ತಿಲ್ಲದಂತೆ ಗಂಭೀರತನದಿಂದ ಕಷ್ಟವನ್ನು ಸಹಿಸಿಗೊಳ್ಳುವದು ಹಿಂದೀ ಸ್ತ್ರೀಯರ ಲಕ್ಷಣವಾಗಿರುತ್ತದೆ. ಈಗಂತೂ ಬಂಗಾಲ ಸರಕಾರದವರು ಸ್ತ್ರೀಯರನ್ನು ಯಜ್ಞ ಕುಂಡಕ್ಕೆ ಎಳೆದೊಯ್ದಿದ್ದಾರೆ ಅದರಿಂದ ಹಿಂದುಸ್ಥಾನದ ಎಲ್ಲ ಭಾಗದಲ್ಲಿಯು ಸ್ತ್ರೀಯರೂ ಸರಕಾರದವರ ಈ ಜಾಣತನವನ್ನು ಸ್ವೀಕರಿಸಿ ಯುದ್ಧಕ್ಕೆ ಸನ್ನದ್ಧರಾಗಿ ನಿಲ್ಲುವರೆಂದು ನಾನು ಆಶಿಸುತ್ತೇನೆ ಪುರುಷರನ್ನು ಹಿಡಿದೊಯ್ದ ಮೇಲಂತೂ ತಮ್ಮ ಮಾನವನ್ನು ಉಳಿಸಿಕೊಳ್ಳುವದಕ್ಕೆಂದು ಸ್ತ್ರೀಯರು ಅವರ ಸ್ಥಳಗಳಲ್ಲಿ ಬಿರತ ಕೃಷಿಗೆ ಇದ್ದರು. ಆದರೆ ಈಗ ಮಾತ್ರ ಪುರುಷರ ಸಂಗಡವೇ ಸೆರೆ ಮನೆಯಲ್ಲಿ ಎಲ್ಲಿ ಕಷ್ಟಗಳನ್ನು ಸಹಿಸುವ ಪ್ರಸಂಗವು ಅವರಿಗೆ ಬಂದಿತು. ಜಗದೀಶನೇ ಅವರ ಮಾನವನ್ನು ಕಾಯುವನು. ಶೀರೆಶಳೆಯಲ್ಪಟ್ಟು ಅಪಮಾನಕ್ಕೆ ಗುರಿಯಾಗುವ ಕಾಲದಲ್ಲಿ ದ್ರೌಪದಿಯು ಗಂಡಂದಿರೇ ನಿರ್ಬಲರಾಗಿ ಕುಳಿತಿದ್ದರಿಂದ, ಮನುಷ್ಯ ಮಾತ್ರರು ಅಪಹಾಸಕ್ಕೆ ಈಡಾದಾಗ, ದ್ರೌಪದಿಯ ಪದ್ಮಣಯುಕ್ತ ಶೀಲವೇ ಅತಿ ಮಾನವನ್ನು ರಕ್ಷಿಸಿತು. ತ್ರಿಕಾಲದಲ್ಲಿಯೂ ಪದ್ಮಿಣಿಯ ಪ್ರಭಾವವು ಹಾಗೆಯೇ ಉಳಿಯುವದು. ಅಶಕ್ತರಿಗೆ ಸಹ ತನ್ನ ಮಾನವನ್ನು ತಾನೇ ರಕ್ಷಿಸಿಗೊಳ್ಳುವ ಶಕ್ತಿಯು ಪ್ರತಿಯೊಂಗವಶಾತ್ ಕೊಡಲ್ಪಟ್ಟಿದೆ ಸ್ತ್ರೀಯರನ್ನು ರಕ್ಷಿಸುವದೆಂದರೆ ಪುರುಷನಿಗೆ ಯಾವಾಗಲು ಗೌರವವು; ಒಂದು ವೇಳೆ ಪುರುಷನು ಅಶ್ಲೀಲವಿದ್ದರೆ, ಅಥವಾ ಸ್ತ್ರೀಯನ್ನು ರಕ್ಷಿಸುವದಕ್ಕಿಂತ ಕನ್ನ ವವಿತ್ರವಾದ ಕರ್ತವ್ಯವನ್ನು ಮಾಡುವದು, ಅವನಿಗೆ ಅಶಕ್ಯವಾದರೆ ಹಿಂದುಸ್ಥಾನದ ಸ್ತ್ರೀಯರು ತಾವು ನಿರ್ಬಲರಾದೆವೆಂದು ಸರ್ವಥಾ ತಿಳಿಯತಕ್ಕದ್ದಲ್ಲ ಪದ್ಮಿಣಿಯಾಗಿ ಸಾಯುವದ ಲೇಸೆಂಬದನ್ನು ತಿಳಿದವಳು ತನಗೆ ಇಲ್ಲವೆ ತನ್ನ ಸಂಬಂಧಿಕ ಮರುಷನಿಗೆ ಅಪಾಯವಾದೀತೆಂದು ಅಂಜುವ ಕಾರಣವೇ ಇಲ್ಲ.

ಈ ಯಜ್ಞ ಕಂಡವನ್ನು ಪ್ರವೇಶಿಸಲು ಸಿದ್ಧರಿದ್ದ ಸ್ತ್ರೀಯರ ಹೆಸರುಗಳನ್ನು ಶಾಂತ ತನದಿಂದ ಪಿಲಂಬಿ ಮಾಡದೇ ಕಲೆಹಾಕಬೇಕೆಂದು ಹಿಂದುಸ್ಥಾನದ ಸ್ತ್ರೀಯರಿಗೆ ನಾನು ಸೂಚಿಸುತ್ತೇನೆ. ಅವರೆಲ್ಲರೂ ಈ ಹೊತ್ತಿನಲ್ಲಿ ತಮ್ಮ ಸಹಾಯವನ್ನು ಒಂಗಾಲದ ಸ್ತ್ರೀಯರಿಗೆ ಅರ್ಪಿಸಲಿ, ಇದರಿಂದ ಹಿಂದುಸ್ಥಾನದ ಬೇರೆ ಬೇರೆ ಭಾಗದಲ್ಲಿಯು ಸ್ತ್ರೀಯರು ತಮ್ಮ ಉದಾತ್ತವಾದ ಉದಾಹರಣೆಯನ್ನು ಅನುಸರಿಸಲಿಕ್ಕೆ ಸಿದ್ಧರಿರುವರೆಂಬದು ಅವರಿಗೆ ಗೊತ್ತಾಗುವದು. ಕಾರಾಗೃಹವಾಸ ಮತ್ತು ಅದರಿಂದ ವಿಶೇಷತಃ ಸ್ತ್ರೀಯರಿಗುಂಟಾಗುವ ಯಾತನೆ ಇವುಗಳಿಗೋಸ್ಕರ ಅನೇಕ ಸ್ತ್ರೀಯರು ಮುಂದೊರೆದು ಬರಲಿಕ್ಕಿಲ್ಲ ಮೊದಲಿನೆಯ ಸಾರೆ ನಾಲ್ಕೈದು ಜನ ಸ್ತ್ರೀಯರು ಮುಂದೊರೆದು ಬಂದು ಸ್ವಾಧೀನತ್ಯಾಗ ಮಾಡಲು ಸಿದ್ಧರಾದರೆ ಅದೇನೂ ರಾಷ್ಟ್ರಕ್ಕೆ ಅಪಮಾನವಲ್ಲ.

ಗಂಡಸರ ಕರ್ತವ್ಯವಂತೂ ಸ್ಪಷ್ಟವಿದೆ. ಮನೋವಿಕಾರಗಳಿಗೆ ವಶರಾಗಬಾರದು. ಸಿಟ್ಟು ಗೆದ್ದರೆ, ನಮ್ಮ ಹೆಂಗಳೆಯರನ್ನೂ ರಾಷ್ಟ್ರವನ್ನೂ ರಕ್ಷಿಸಲಾರೆವು. ಹೆಂಗಳೆಯರನ್ನು ಬೇಕಾದರೆ ಹಸುಗೂಸುಗಳನ್ನು ಸಹ ಬಲಿಕೊಡಲು ಸಿದ್ಧರಿದ್ದೇವೆಂಬದು ನಾವು ಸರಕಾರಕ್ಕೆ ಹೇಳಿದ್ದೇವೆ. ಪಂಜಾಬಿನಲ್ಲಿ ಲಜ್ಪತ್ರೀ ಅವರು ಸೆರೆಯಾದಾಗ್ಗೆ ಸರಕಾರದವರು ಖಂಡಿತವಾಗಿ ಹೆಂಗಸರನ್ನೂ ಹುಡುಗರನ್ನೂ ಕೂಡಿಯೇ ಬಲೆಗೆ ತೆಗೆದುಕೊಂಡರು. ಕಲಕತ್ತೆಯಲ್ಲಿಯ ನಮ್ಮ ಭಗಿನಿಯರು ಅಪರಾಧಿಗಳಂದೆಣಿಸಿ, ಕಾಯ್ದೆ ಶೀರ ರೀತಿಯಿಂದ ಈ ಕಲಕತ್ತೆಯ ಅಧಿಕಾರಿಗಳು ಅವರನ್ನು ಸುಮ್ಮನೆ ಹಿಡಿದೊಯ್ದು ಎಷ್ಟೋ ಒಳಿತಾಯಿತು; ಯಾಕಂದರೆ ಡಾಲಿಯಾನಪಾಲಾದಲ್ಲಿಯ ಸ್ತ್ರೀಯರ ಮೇಲೆ ಉಗುಳಿ ಅವನ್ನು ಮನಬಂದಂತೆ ಜರಿದು, ನೀರೇ ರೀತಿಯಿಂದ ಅವರ ಮಾನ ಭಂಗ ಮಾಡಿದ ಪಂಜಾಬಿನ ಬೋಸ್ಟೋರ್ಡ್ ಸ್ಮಿಥ್ ಕೃತಿಗಿಂತ ಇವರ ಕೃತಿಯ ಎಷ್ಟೋ ಪಾಲಿಗೆ ಸುಸ್ಪೃತವಾದದ್ದಿಗತ್ತೆ ಸ್ಮಿಥ್ನ ಹಾಗೆ ನಮ್ಮ ಸ್ತ್ರೀಯರ ಮಾನಭಂಗ ಮಾಡಬೇಕೆಂದು ನಾವು ಅವರನ್ನು ಪಿಸಿಲ್ಲಿ ರಾಷ್ಟ್ರ ಕಾರ್ಯವನ್ನು ಮಾತ್ರವಾಗಿ ಅವರನ್ನು ಹಿಡಿದ ಸ್ವಸಂತೋಷದಿಂದ ಅವರನ್ನು ನಾವು ಸೆರೆಮನೆಗೆ ಅಪಿಸುವೆವು ನಮ್ಮ ಸ್ತ್ರೀಯರು ಸ್ವದೇಶೀ ವ್ರತಪನ್ನು ಧರಿಸಿ ಎಲ್ಲ ಕಡೆಗೂ ಅಡರ ವ್ರಸಾರವಾಗುವಂತೆ ಪ್ರಯತ್ನಿಸಿದರೆ, ಅವರನ್ನು ಸರಕಾರದವರು ಬಂಧಿಸಬಾರದೆಂದು ನಾವು ಆಶಿಸುವ ಶಕ್ಯವಿಲ್ಲ ಯಾಕಂದರೆ ಸ್ವದೇಶೀ ವ್ರತದ ಪ್ರಸಾರವಾಗ ಹತ್ತಿದ ಹಾಗೆ ಸರಕಾರದವರು ನಿಂತ ತಳಹದಿಗಾದ ಕಲ್ಲು ಸುಲಭಾಗ ಹತ್ತುವದು. ಪರದೇಶೀ ಅರಿವೆಯ ವ್ಯಾಪಾರದಿಂದ ಹಿಂದುಸ್ಥಾನದಲ್ಲಿಯ ಸಂಪತ್ತನ್ನು ಹರಣ ಮಾಡಿ ಅದರಿಂದಲಾದ ಬಲದಿಂದಲೇ ಈ ಸರಕಾರದವರು ಇಲ್ಲಿ ತಳವೂರಿರುವರು. ಆದ್ದರಿಂದ ನಮ್ಮ ಭಗಿನಿಯರು ಸಹ ಸ್ವದೇಶೀ ವ್ರತವನ್ನು ಕೈಕೊಳ್ಳುವಂತೆ ಗಂಡಸರಾದ ನಾವು ಸಮ್ಮತಿಸಿದರೆ ಗಂಡಸರಂತೆ ಹೆಂಗಸರನ್ನೂ ಸೆರೆ ಮನೆಗೆ ಹಿಡಿದೊಯ್ಯುವ ಅಧಿಕಾರವನ್ನು ಸರಕಾರಕ್ಕೆ ನಾವು ಕೊಡಲೇ ಬೇಕು.

ಈ ಕಾರಣಕ್ಕಾಗಿ ನಾವು ಕೋಪನನ್ನು ನಮ್ಮ ವಶಪಡಿಸಿಟ್ಟುಕೊಂಡೇ ತೀರಬೇಕಾಗಿದೆ ಯುದ್ಧಕ್ಕೆ ಸನದ್ಧರಾಗಿ ಕತ್ತಿ ಹೊಡಿದು ಪ್ರತಿಸೇನೆಯ ನಮ್ಮ ವೈರಿಗಳೂ ಸನ್ನದ್ಧರಾದಾಗ ನಾವು ಹಿಂಜರಿಯುವದು ಹೇಡಿತನದ ಚಿನ್ಹೆವು. ಗಂಡಸರು ಸೆರೆಮನೆಗಳನ್ನು ತುಂಬಿಬಿಡಬೇಕು. ಈಗಿನ ರಾಷ್ಟ್ರೀಯ ಜಾಗೃತಿಯು ನಾಲ್ಕಾರು ಜನರಲ್ಲಿರದೆ ಜಪತಕೆಯಲ್ಲಿಲ್ಲಾ ಹಾಗಾಗಿ ತೊಡಿಕೊಂಡಿದೆಂಬದನ್ನೂ, ಅಹಿಂಸಾ ಧರ್ಮದ ಇಂಗಿತವು ನಿಶಸ್ತ್ರರದ ಜಂಗೇ ಪಂಥವರಿಗಲ್ಲದೇ ಎಲ್ಲ ಪ್ರಮುಖರಿಗೂ ತಿಳಿದಿದೆಂಬದನ್ನೂ ಗಂಡಸರೇ ಸರಕಾರಕ್ಕೆ ಸಿದ್ಧಮಾಡಿ ತೋರಿಸಬೇಕು. ಆಕಸ್ಮಾತ್ತಾಗಿ ಎಲ್ಲಲ್ಲಿಗೆದ್ದ ಪುಂಡಾಟಿಕೆಗಳು ನಮ್ಮ ದೇನೆಯ ಚಿನ್ಹವಾಗಿರದೆ, ಅವು ಅಪವಾದಗಳಾಗಿವೆಂಬದನ್ನು ನಾವು ನಮ್ಮ ಕೃತಿಗಳಿಂದಲೇ ತೋರಿಸತಕ್ಕದ್ದು. ನಮ್ಮನ್ನು ಸಿಟ್ಟಿಗೆಬ್ಬಿಸುವ ಕಾರಣಗಳು ಈಗ್ಗೆ ಬಹುಶಃ ಹೇಳವಾಗಿವೆ; ಆದ್ದರಿಂದಲೇ ನಮ್ಮ ಸಹನಶೀಲತೆಯನ್ನೂ ಬೇರೆ ಮನೋವಿಕಾರಗಳನ್ನೂ ಜಾಗ್ರತಿಗೆ ನಮ್ಮ ವಶದಲ್ಲಿಟ್ಟುಕೊಳ್ಳತಕ್ಕದ್ದು. ನಾನು ಬಹುಶಃ

ಶಬ್ದವನ್ನು ಬುದ್ಧಿಪೂರ್ವಕವಾಗಿ ಉಪಯೋಗಿಸಿರುವೆನು. ಯಾಕೆಂದರೆ ನಮ್ಮನ್ನು ಸಿಟ್ಟು ಗೆಬ್ಬಿಸಲು ಶಕ್ಯವಿದ್ದ ಎಲ್ಲಸಾಧನಗಳು ಇನ್ನೂ ಉಪಯೋಗಿಸಲ್ಪಟ್ಟಿರುವದಿಲ್ಲ. ನಮ್ಮ ಶರೀರದಲ್ಲಿಯ ರಕ್ತವೆಲ್ಲ ಚೆನ್ನಾಗಿ ಸುಡುವಹಾಗೆ ನಮ್ಮನ್ನು ರೇಗಿಸುವ ಸಾಧನಗಳು ಬೇರಿವೆ. ಖಿಲಾಫತ ಮತ್ತು ಪಂಜಾಬಗಳ ಅನ್ಯಾಯವನ್ನು ಪೂರಮಾಡುವದೂ ಸ್ವರಾಜ್ಯವನ್ನು ಸಂಪಾದಿಸುವದೂ ನಮ್ಮ ಧ್ಯೇಯವಾಗಿದ್ದರೆ ಅದನ್ನು ಅಮೌಲ್ಯವಾದ ಬೆಲೆಕೊಟ್ಟಾದರೂ ನಾವು ಸಂಪಾದಿಸತಕ್ಕದ್ದು. ಆದ್ದರಿಂದ ಬಂಧ ಸಂಕಟಂಬೊದಗಿದಾಗ, ನಾವು ಮನೆ-ಗಳಿಕೆ ರಗಳಿಗೆ ಪಶರಾಗತಕ್ಕದ್ದಲ್ಲ ಎಲ್ಲಿತನದ ಎದರುಗಳಿಗೂ ನಾವು ಸಿದ್ಧರಾಗಿರಿಂತು, ಸರಕಾರದಿಂದ ಯಾವತರದ ಸಹಾಯವನ್ನು ಆಶಿಸದೇ ತಮ್ಮ ಸಂಸ್ಥೆಗಳಿಗೆ ತಕ್ಕಂತೆ ತಮ್ಮ ಕರ್ತವ್ಯವನ್ನು ಮಾಡಲಕ್ಕೆ ಅವರನ್ನು ಬಿಟ್ಟುಬಿಡುವಾ. ಯುದ್ಧಸಮಾಪ್ತಿಯಲ್ಲಿ ಆಚರಿಸತಕ್ಕ ಎಲ್ಲತರದ ಕಟ್ಟಳೆಗಳನ್ನೂ ಸರಕಾರದವರು ಪಾಲಿಸುತ್ತಿರುವರೆಂಬಿದನ್ನು ನಾವು ಸ್ಪಷ್ಟವಾಗಿ ವಿನಯದಿಂದ ಒಪ್ಪಿಕೊಳ್ಳುವಾ. ಹೀರಾಬಾದಶಹಾ ಮಿಯಾ ಛವರಿಗೂ ಡಾಕ್ಟರ ಸುರೇಶ ಬಕರ್ಜಿಯವರಿಗೂ ಕೈದೇಡಿಗಳನ್ನು ಹಾಕಿದರು ಆದರೆ ಅಲ್ಲಿ ಬಂಧಿಗಳಿಗೂ,ಲಾಲಾಲಜಪತರಾಯರಿಗೂ ಮೌಲಾನಾ ಮೋಹಮ್ಮದ್ ಅಲಿಯವರಿಗೂ ಅಧ್ಯಾಪಕ ಮೋತೀಲಾಲ ನೇಹರೂರವರಿಗೂ ಕೈದೀಡಿಗಳನ್ನು ಹಾಕಿಲ್ಲ; ದೇಶದಂಧವರ್ಗೆ ದೇಡಿಗಳನ್ನು ಹಾಕಿಲ್ಲ; ನಾನೇನು ಅದಕ್ಕೆ ಪರೀಕ್ಷಿಸುವದಿಲ್ಲ. ಬೇರೆಗಳನ್ನು ಹಾಕಬೇಕೆಂಬ ತುರಂಗವು ನಿಮ್ಮಂದ, ಪಂಡಿತ ಮೋತೀಲಾಲ ನೇಹರೂರವರಿಗೂ ಅವರ ಸಂಗಾತಿಗಳಿಗೂ ಕೈದೇಡಿಯನ್ನು ಹಾಕಿ ಬೀಡಿ ಮತ್ತು ಮಾಡುತ್ತ ಕಾರಾಗೃಹಕ್ಕೆ ಕವಲೂ ನೋಡಿ ಅನುಮಡಿಯುತ್ತ ಹಿಂತಿರುಗಿ ಹೋಗಿದ್ದರೆ ಖಿಲಿತಾಗುತ್ತಿತ್ತು. ನಮ್ಮಲ್ಲಿ ಕೆಲ ಡಿಗಳಿಂದಲೇ ಸ್ವರಜ್ಯವನ್ನು ಸಂಪಾದಿಸುವದಕ್ಕಿಂತ ಬಿದ್ಧಧನಂಬಿಗಾಯಿಂತಾಗಿ ಆನಂದಿಸುವದಕ್ಕಿಂತಲೂ ಸಹ ಅಧಿಕವಾಗಿ ಸಂಕಟಗಳನ್ನು ಅನುಭವಿಸಿ ಕಾರಾಗೃಹಕ್ಕೆ ಹೋಗುವವರನ್ನು ಧೈರ್ಯ ಮಾಡಲು ನಾನೂ ಸಂತೋಷಪಡುತ್ತಿದ್ದನು. ಆದರೆ ಸರಕಾರದವರು ಆ ಬಗೆಯ ಅವಕಾಶವನ್ನು ಕೊಟ್ಟುಮಾಡಿಕೊಡಲಿಲ್ಲ. ಪಂಜಾಬದಲ್ಲಿ ಸಂಭವಿಸಿದ ಕ್ರೂರ ತಿಳಿಗೇಡಿತನದ ಮತ್ತು ಮಾನವ ಹೃದಯ ಹರಣಮಾಡುವಂಥ ನೀಚಕೃತ್ಯಗಳನ್ನೂ, ಮನುಷ್ಯನ ವಿಚಾರವನ್ನೇ ಕುಗ್ಗಿಸುವಂಥ ವ್ಯಾಮೋಹನದಲ್ಲಿ ಉಸುರಾಡಿಸಲಿಕ್ಕೆ ಸಹ ಅಸ್ಪದವಿಲ್ಲದಹಾಗೆ ಮಾಡಿಬಿಟ್ಟೇ ಜನರನ್ನು ತುರಿಕೆ ಅವರನ್ನು ಸಾವಿಗೆ ಗುರಿಮಾಡಿದಂಥ ಕ್ರೂರಾಚರಣೆಗಳೂ, ನನಗೆ ಪುನಃ ಪುನಃ ಸಂಭವಿಸ್ಯವಮ ಬೇಕಾಗಿಲ್ಲ. ಇದರಿಂದ ಅಖಂಡ ಮಾನವ ಪ್ರಾಣಿಯ ಮಾನವನ್ನೇ ಹರಣಮಾಡಿ ದಯಾಮುದ್ರೆ ಉಪಹಕಾರದ ಜಳವಳಿಯ ಮೇಲೆ ಹೇರಿದಂಥ ಸಂಕಟಗಳು ಸರಿಯಾಗಿ ವದೇ ಇಲ್ಲವೆಂದು ನಾವೇನು ಯಾರಿಗೂ ಆರಾರ ಪತ್ರಗಳನ್ನು ಮಾಡಿಕೊಟ್ಟಿರುವದಿಲ್ಲ. ಅದಕ್ಕೂ ಕೆಟ್ಟ ಪರಿಸ್ಥಿತಿಯು ಸಂಭವಿಸುವದೆಂದು ನಾವು ತರ್ಕಿಸಿದ್ದೇವೆ. ಇದನ್ನರಿತು ಕೊಂಡೇ ನಾವು ಸಂಪೂರ್ಣವಾಗಿ ಅಹಿಂಸಾಧರ್ಮಿಗಳ ಗಿರುವದೆಂದು ಪ್ರತಿಜ್ಞೆ ಮಾಡಿದ್ದೇವೆ. ಸ್ವರಾಜ್ಯದಿನವಂತೂ ಇನ್ನೇನು ಸೂರವಿಲ್ಲ; ಆದ್ದರಿಂದ ನಮ್ಮ ಪ್ರತಿಜ್ಞೆಯನ್ನು ವರೆತನಗೆ ಕೈಯ್ಯ ಬಿಟ್ಟ ಏನಿಗಳಲ್ಲಿಯೇ ಬಂದು ಬೀಳತಕ್ಕ ಸ್ವರಾಜ್ಯವು ಜಾರಿ ಹೋಗುವಂತೆ ಮಾಡುವದು ತಕ್ಕದ್ದಲ್ಲ.

ನಮ್ಮ ಮುಂದಿಂದರು ನೆರೆಮನೆಯಲ್ಲಿರುವವರೆಗೆ, ಯುವರಾಜರು ಹೋದ ಹೋದಲ್ಲಿ ನಾವು ಹರತಾಳ ವ್ರತವನ್ನು ಪಾಲಿಸತಕ್ಕದ್ದು. ಯಾವತರದ ಸಭೆಗಳ ಅವಶ್ಯಕತೆಯಿಲ್ಲವು. ಜನತೆಗೆ ಈಗ ಸಿಕ್ಕ ಆತ್ಮಸಂತೋಷದ ಸ್ವಾಭಾವಿಕ ಸಿದ್ಧತೆಯು ಸಾಕಾಗಿದೆ. ಹರತಾಳ ವ್ರತವನ್ನು ಪಾಲಿಸುವದು ರಣಬಲವಿರದೆ, ಕೇವಲ ಸಂತೋಷದ ಆತ್ಮಬಲವಿದೆಯೆಂಬಿರಿಕೆಯು ಸರಕಾರಕ್ಕೆ ತಿಳಿದು ಬರಲಿ. ಅಧಿಕಾರವಿರದ ಮತ್ತು ಕುವಿಚಾರದ ಯಾವ ಪ್ರಕಾರದ ಸವಿನಯ ಆಜ್ಞಾಭಂಗ ವ್ರತವನ್ನು ಎಲ್ಲಿಯೂ ಪಾಲಿಸಕೂಡದು. ಮುಂದಿಡುವ ನಮ್ಮ ಪ್ರತಿಯೊಂದು ಹೆಜ್ಜೆಯು ಒಳ್ಳೆ ವಿಚಾರಪೂರ್ವಕವಾಗಿಯೂ ಒಳ್ಳೇ ಶಾಂತಮಯವಾಗಿಯೂ ಇರತಕ್ಕದ್ದು. ವಸ್ತುಸ್ಥಿತಿಯನ್ನು ತಪ್ಪಕ ತಮ್ಮ ಭಿತಾಗಳನ್ನಲ್ಲಿಸೇ ಕಾಸರು ವಾದಿಸತಕ್ಕದ್ದು, ಬಹುಮ್ಯಾಂಶಗಳಾಷಿಯಾಗಿ ವ್ಯಾಪಾರಜ್ಞರು ಅಂತರಾರ ವೀಳ ಕಲಿಯುವರು. ಅಗ್ಗೆ ಪ್ರತಿಯೆ ಯಿಂದ ತಾವು ತಾವಿಗೆ ಚಿಳಿಯುತ್ತ ನಡೆಪ ಅಸಹಾಯಕ ಪರಿಸ್ಥಿತಿಯಿಂದ ಹುಟ್ಟುವ ಶರತರಪ ಯಾತನೆಗಳನ್ನು ಅವರು, ಸಬಳವಾಗಿ ಚರ್ಚಿಸಿ, ಬಹಿರಂಗಪಡಿಸುವದು. ಯುಹರಾಜರ ಜಲಸವಲ ಸಂಸ್ಥೆಯ ಪರ್ತಾಳಪತ್ರ ಅನುಸರಿಸಲೆಂದು ನನ್ನ

ಯಾಜಿಯಾವ್ದರಿಂದ, ಹಿಂಸಾತ್ಮಕ ವ್ಯಾಪಾರಗಳಂ ಬಲಾತ್ಕಾರಕವಾದ ಸಣ್ಣ ಪುಟ್ಟ ಉಪಾಯಗಳಿಂದಲೂ ಅವುಗಳಿಂದಂಟಿಸುವಂಥ ಅಪಾಯವನ್ನೂ ಎಳ್ಳಷ್ಟಾದರೂ ಇಷ್ಟಪಡಿಸು. ಹಾವು ಕೈಕೆ ಅಂಥ ಹರತಾಳ ವ್ರತಕ್ಕ ಆಚರಣೆಯು ಅಖಂಡವ್ಯ ಸಮಗೆ ದುಸು ಕೆಲಂಕವನ್ನು ಹಚ್ಚುವಹುದು; ಅದಕೆ ಹಿಂಸಾತ್ಮಕ ವ್ಯಾಪಾರಗಳ ಉದಯವು ನಮ್ಮ ಜೀವನಗೆಗೆ ಅತ್ಯಿಯಾಗಿ, ನಮ್ಮ ಸ್ವರಾಜ್ಯವಧವನ್ನು ಸೆಳ್ಳಿಸಬಹುದು.

ರಾಷ್ಟ್ರೀಯ ಸಭೆಯ ಪ್ರತಿನಿಧಿಗಳ, ತೀರವಾದ ಈ ಸ್ಥಳಗಳು ಕೂಡಲೇ ತುಂಬುವವೆಂದೂ ಮತ್ತು ತಮಗೆ ಏನು ಬೇಕು, ಬೇಕಾದದ್ದು ಹ್ಯಾಗೆ ತಮ್ಮ ಕೈಸೇರಬೇಕು ಎಂದು ಮನಸ್ಸಿನಲ್ಲಿ ನಿಶ್ಚಯಿಸಿದಂಥ ಈ ಮಹಾ ರಾಷ್ಟ್ರೀಯ ಸಭೆಯು ಎಲ್ಲ ಮೆಂಬರರು ತಪ್ಪದೇ ಬರುವರೆಂದೂ ನಾನು ಆಶಿಸುತ್ತೇನೆ.

ಎಸ್. ಕ. ಗಾಂಧೀ

ಈ ಲೇಖವು ಮುದ್ರಿಸಲ್ಪಡುವ ವೇಳೆಯಲ್ಲಿ ಈ ಮೂವರೂ ಮಾನನೀಯ ಸ್ತ್ರೀಯರು ಕೆಲವು ತಾಸು ತಡೆದು ಬಿಡುಗಡೆಯಾದರೆಂದು ತಿಳಿಯಬಂತು. ಆದರೂ, ಈ ವಿಚಾರತ್ಮಕವಾದವು ಮುಖ್ಯವಾಗಿ ತಪ್ಪಿಲ್ಲವೆಂದು ಬಗೆದು ಈ ಲೇಖನವನ್ನು—ಇದು ಜನರಿಗೆ ಮುಟ್ಟಲೆಂದು, ಹಾಗೇ ಸಾಗಿಸಿದೆನು. ಬಿಡುಗಡೆಯಾದ ಮೂವರು ಸಧ್ಯ ಸ್ತ್ರೀಯರು ಬೆದರಿಕೆಯ ಭಾವನೆಯಿಂದ ಬಿಡಲ್ಪಟ್ಟರೆಂದೂ ನಾನು ತಿಳಿಯುವೆನು.

(ಯಂಗ ಇಂಡಿಯಾ) (ಎಸ್. ಕ. ಗಾಂಧಿ)

ವ್ಹಾಯಿಸರಾಯರು ಗೊಂಡಲದಲ್ಲಿ ಬಿದ್ದರು

ವ್ಹಾಯಿಸರಾಯರಾದ ಲಾರ್ಡರೀಡಿಂಗರವರು ಗೊಂಡಲದಲ್ಲಿ ಬಿದ್ದರು. ಕಲಕತ್ತೆಯ ಬ್ರಿಟಿಷ್ ಇಂಡಿಯಾ ಅಸೋಸಿಯೇಶನ್ ಮತ್ತು ಬೆಂಗಾಲ ನ್ಯಾಶನಲ್ ಚೇಂಬರ ಆಫ್ ಕಾಮರ್ಸ ಇವುಗಳ ಮಾನಪತ್ರಗಳಿಗೆ ಉತ್ತರ ಕೊಡುವ ಕಾಲಕ್ಕೆ ಅವರು ಅಂದದ್ದೇನಂದರೆ—ಹಿಂದುಸ್ತಾನಕ್ಕೆ ನಾನು ಬಂದಂದಿನಿಂದ ಪರಿಶ್ರಮ ಪೂರ್ವಕವಾಗಿ ಇಲ್ಲಿಯ ಪರಿಸ್ಥಿತಿಯ ಅಭ್ಯಾಸನವನ್ನು ಒರೆದೇಸವನ ಮಾಡುತ್ತ ಬಂದಿರುವೆನು.; ಅಥಾಗ್ಯೂ ಪ್ರಜೆಗಳಲ್ಲಿಯ ಒಂದು ಭಾಗದ ಜನರ ಪ್ರವೃತ್ತಿಗಳಬಗ್ಗೆ ವಿಚಾರಮಾಡತೊಡಗಲು ಅದರ ಅರ್ಥವೇ ನನಗಾಗದಂತಾಗಿದೆ. ತಮ್ಮನ್ನು ಹಿಡಿದುಹಾಕಿರೆಂದು ಸರಕಾರಕ್ಕೆ ಆವ್ಹಾನಕೊಡುವ ಉದ್ದೇಶದಿಂದ ಮನಸ್ಸಿಗೆ ಬಂದಂತೆ ಕಾಯ್ದೆಗಳನ್ನು ಮುರಿಯುವದರಿಂದ ಅವರಿಗೆ ಲಾಭವೇನಿರುವದು?

ಪಂಡಿತ ಮೋತೀಲಾಲ ನೇಹರುರವರು ತಮ್ಮನ್ನು ಹಿಡಿಯುವಕಾಲಕ್ಕೆ ನಾನು ಸ್ವತಂತ್ರೆಯೆ ಮಂದಿರಕ್ಕೆ ಹೋಗುತ್ತಲಿದ್ದೇನೆ.'' ಎಂದು ಹೇಳಿ ವ್ಹಾಯಿಸರಾಯರವರ ಮೇಲಿನ ಪ್ರಶ್ನೆಕ್ಕೆ ಒಂದುಬಗೆಯಿಂದ ಉತ್ತರವನ್ನಿತ್ತಿರುವರು. ನಮಗಿರುವ ಸ್ವತಂತ್ರತೆಯು ಸ್ವತಂತ್ರತೆಯಲ್ಲ, ಅದು ಕೇವಲ ದಾಸ್ಯವೇ ಇರುವದು ಆದ್ದರಿಂದಲೇ ನಾವು ಕಾರಾಗೃಹಕ್ಕೆ ಹೋಗಲಿಚ್ಛಿಸುತ್ತೇವೆ. ಮತ್ತು ಈ ಸರಕಾರದ ಪ್ರವೃತ್ತಿಯು ಅತ್ಯಂತ ದುಸ್ಸವಾಗಿರ್ವದೆಂದು ನಮಗೆ ತೋರುವದರಿಂದಲೇ ನಾವು ಸರಕಾರಕ್ಕೆ ನಿಮ್ಮ ಬಲವನ್ನುಪಯೋಗಿಸಿಕೊಳ್ಳಿರಿ. ಎಂದು ಹೇಳಲು ಎಚೆಮಾಡಿದ್ದೇವೆ. ಈ ಸಂಕಾರವನ್ನು ನಿರ್ಮೂಲಗೊಳಿಸಲು ನಾವು ಹವಣಿಸುತ್ತೇವೆ. ಅದಕ್ಕೆ ಜನತೆಯ ಇಚ್ಛೆಗೆ ತಲೆದೊಗ್ಗಿಸಲು ಉಗತ್ಯಪಡಿಸುವಕ್ಕೆ ನಾವು ಮುಂಬೆಟಂದಿದ್ದೇವೆ. ''ಜನತೆಯು ಸೇವೆಗಾಗಿ ಸರಕಾರದ ಅಸ್ತಿತ್ವವು; ಆದರೆ ಸರಕಾರದ ಸೇವೆಗಾಗಿ ಜನತೆಯ ಅಸ್ತಿತ್ವವಲ್ಲ'' ಎಂಬ ಮಾತನ್ನು ನಾವು ಸಿದ್ಧಮಾಡಲಿಚ್ಛಿಸುತ್ತೇವೆ. ಸ್ವಾಭಿಮಾನವುಳ್ಳ ಜನರಿಗೆ ಈ ಸರಕಾರದ ಕೆಳಗೆ ತಮ್ಮ ಸ್ವತಂತ್ರತೆಯು

ನ್ನು ಕಾಯ್ದುಕೊಂಡಿರುವದು ಅಸಹ್ಯವಾಗಿದೆ. ಯಾಕಂದರೆ ಹಾಗಿರುವದಕ್ಕೋಸ್ಕರ ಅವರಿಬ್ಬರ ತಿಲಿಯನ್ನು ಕೊಡಬೇಕಾಗುತ್ತದೆ ನಾವೆ ಒಬ್ಬರಾಗಿರಲಿ, ಇಲ್ಲವೆ ಅನೇಕರಾಗಿರಲಿ, ನಮ್ಮ ಸ್ವಾಭಿಮಾನವನ್ನೂ ಜೀವನಸರ್ವಸ್ವವಾದ ಸಿದ್ಧಾಂತಗಳನ್ನೂ ಸ್ವತಂತ್ರತೆಗಾಗಿ ಮಾರಿಕೊಳ್ಳುವದು ನಮಗಿಷ್ಟವಿಲ್ಲ. ಜೆಕ್ಕ ಹುಡುಗರೂ ಕೂಡ ತವ ಗೆ ಯೋಗ್ಯವಾತೋರಿದವಾತಿಗೆ (ಅವರ ತಾಯಿ ತಂದೆಗಳಿಗೆ ಅದರಲ್ಲಿ ಏನೂ ಅರ್ಥವಿಲ್ಲೆಂದು ಕಂಡು ಬಂದರೂ) ಯಾರಾದರೂ ಅಡ್ಡ ಬಂದರೆ, ಅವನ್ನು ಅವರು ಕೈಗೂಡಿಸಿಯೇ ತೀರಬೇಕೆಂಬ ನಿಶ್ಚಯವುಳ್ಳವರಾಗಿ ಕೂಡುವದನ್ನು ನಾನು ಕಂಡಿದ್ದೇನೆ.

ಅಸಹಕಾರಿಗಳು ಸರಕಾರದೊಂದಿಗೆ ಯುದ್ಧಕ್ಕೆ ಪ್ರವೃತ್ತರಾಗಿರುವರೆಂದು ಲಾರ್ಡ ರೀಡಿಂಗರವರು ಜನ್ನಾಗಿ ತಿಳಿದಿರಲಿ ಸರಕಾರವು ಮುಸ್ಲಾನರ ವಿಶ್ವಾಸಘಾತಮಾಡಿದೆ ಪಂಜಾಬಿನ ಮಾನಭಂಗಮಾಡಿದೆ. ಬಲಾತ್ಕಾರದಿಂದ ಜನತೆಯನ್ನು ತನ್ನ ಅಧಿಕಾರಕ್ಕೆ ಒಳಪಡಿಸುವ ದುರಾಗ್ರಹ ತೊಟ್ಟಿದೆ. ಮತ್ತು ತಾನು ವಿಶ್ವಾಸಘಾತದಿಂದ ಮಾಡಿದ ಹಾನಿಯನ್ನು ಹಿಂದಿರುಗಿಸಲು ಮನಸ್ಸು ಮಾಡದೆ ತನ್ನ ಗರ್ವದೊಳಗೆ ಮೆರೆಯುತ್ತಿದೆ. ಇವೆಲ್ಲ ಕಾರಣಗಳಿಂದ ಅಸಹಕಾರಿಗಳು ಸರಕಾರದ ವಿರುದ್ಧ ಬಂತುಮಾಡಲುಸ್ವನ್ನತ್ತರಾಗಿದ್ದಾರೆ.

ಜನತೆಯಮುಂದೆ ಎರಡು ಮಾರ್ಗಗಳಿದ್ದವು ಒಂದು ಸಶಸ್ತ್ರವಾಗಿ ಏಳುವದು ಮತ್ತೊಂದು ಅಹಿಂಸೆಯ ತತ್ವವನ್ನು ಅನಲಂಬಿಸಿ ಬಂತುವಾತುವದು

ಅಸಹಕಾರಿಗಳು—ಕೆಲವರು ದುರ್ಬಲತೆಯಿಂದ ಕೆಲವರು ತಮ್ಮ ಸಾಮರ್ಥ್ಯದ ಜ್ಞಾನದ ಬಲದಿಂದ– ಶಾಂತಿಯ ಮಾರ್ಗವನ್ನು ಅಂದರೆ ಇಚ್ಛಾಪೂರ್ವಕವಾದ ಅತ್ಮಯ ತ್ಯಾಗವನ್ನು ಮಾಡುವ ಮಾರ್ಗವನ್ನ ಅವಲಂಬಿಸಿದರು.

ಈ ಯುದ್ಧದಲ್ಲಿ ಜನರು ಅಸಹಕಾರಿಗಳ ಕಡೆಯಲಾಗಿ ನಿಂತರೆ ಪರಿಜ್ಞಾನದಲ್ಲಿ ಸರಕಾರವು ತಲೆಯಿನ್ನಾದರೂ ಬೊಗ್ಗಿಸುವದು ಇಲ್ಲವೆ ಮಣ್ಣುಗೂಡಿಯಾದರೂ ಹೋಗುವದು. ಜನರ ಕೈಬಿಲನ್ನ ಅವರಿಗೆ ದೊರೆಯದಿದ್ದ ತಾವು ತಮ್ಮ ಸ್ವಾತಂತ್ರ್ಯವನ್ನು ಮಾರಿಕೊಳ್ಳಲಿಲ್ಲೆಂಬ ಸಮಾಧಾನವಾದರೂ ಅಸಹಕಾರಿಗಳಿಗೆ ಇರುವದು ಸಶಸ್ತ್ರಯುದ್ಧದಲ್ಲಿ ಯಾರು ತಮ್ಮ ಕತ್ತುಗಳ ರಕ್ತವನ್ನು ಹೆಚ್ಚು ಪ್ರಮಾಣದಲ್ಲಿ ಸುರಿಸುವರೊ, ಅವರಿಗೆ ಜಯವು ದೊರೆಯುವದು ಶಾಂತಿಯು ಮತ್ತು ಅಹಿಂಸೆಯುಳ್ಳದ ಮಾರ್ಗವು ತೋಕಮತವನ್ನು ಸಿದ್ಧಮಾಡಲು ಅತ್ಯಂತ ಸುಲಭವಾದ ಉಪಾಯವು. ಇವರಲ್ಲಿ ದೊರೆತ ಜಯವು ಜಗತ್ತಿಗೆ ಶಾಶ್ವತವಾದ ಸತ್ಯದ ಜಯವೇ ಆಗಿರುವದು

ಕಾಯ್ದೆಯ ವಾತಾವರಣದಲ್ಲಿ ಬೆಳೆದ ಲಾರ್ಡ ರೀಡಿಂಗ ಸಾಹೇಬರವರಿಗೆ ಸರಕಾರದ ಸತ್ಯೆಯ ವಿರುದ್ಧ ನಡೆದಂಥ ಶಾಂತತಾವಯವಾದ ಯುದ್ಧದ ಮಹತ್ವವು ತಿಳಿಯದಾಗಿದೆ ಆದರೆ ಈ ಯುದ್ಧವು ಮುಗಿಯುವರೊಳಗಾಗಿ ಲಾರ್ಡ ರೀಡಿಂಗರವರಿಗೆ ನ್ಯಾಯ ಕೋರ್ಟಗಳಿಗಿಂತ ಹೆಚ್ಚಿನದಾದ ಒಂದು ಕೋರ್ಟು ಇರುವದೆಂದೂ ಅಂತರ್ವಾಣಿಯೇ (Conscious) ಆ ಕೋರ್ಟು ಆಗಿರುವದೆಂದೂ ಅದು ಯಾವತ್ತು ಕೋರ್ಟಗಳ ವೆಲಿನ ಕೋರ್ಟು ಇರುವದೆಂದೂ ಗೊತ್ತಾಗದಿರದು.

ಅತ್ಮಯಜ್ಞಕ್ಕೆ ಸಿದ್ಧರಾದ ಜನರೆಲ್ಲರು ಸ್ವಹಿತವನ್ನರಿಯದ ಹುಚ್ಚರೆಂದು ವ್ಹಾಯಿಸರಾಯ ಸಾಹೇಬರು ಬೇಕಾದರೆ ತಿಳಿದುಕೊಳ್ಳಲಿ; ಮತ್ತು ಅವರನ್ನು ಬಂಧನದಲ್ಲಿಡಲಿ. ಹಾಗೆ ಮಾಡಲು ಸಾಹೇಬರಿಗೆ ಅಧಿಕಾರವುಂಟು.

ಈ ವ್ಯವಸ್ಥೆಯು ನಮ್ಮೀ ಹುಚ್ಚರಿಗೆ ಮಾರ್ಗ ಅನುಕೂಲವಾಗಿರುವದು ಸರಕಾರಕ್ಕೂ ಅನುಕೂಲವಾಡದ್ದಾದರೆ ಕೇಳುವದೇನು? ಇದರಂಥ ಸುಂದರವಾದ ಸ್ಥಿತಿಯು ಮತ್ತೊಂದಾವದೂ ಇಲ್ಲ ಅಸಹಕಾರಿಗಳು ತಾವಾಗಿಯೇ ಕಾರಾವಾಸವನ್ನು ಬಯಿಸಿ ಹಿಂದಿನಿಂದ ಒಲ್ಲೆಂದರೆ ಇಲ್ಲವೆ ಸಿಡಿಪಿಡಿ ಮಾಡಹತ್ತಿದರೆ ಇಲ್ಲವೆ ಲಾಲಾಜಿಯವರು ಅಂದಂತೆ ಸರಕಾರದಿಂದ ಅನುಗ್ರಹ ಪಡೆಯುವದಕ್ಕಾಗಿ ಅದರಮುಂದೆ ದಿಂಡರಕಿಉಳ್ಳಲಾರಂಭಿಸಿದರೆ ವ್ಹಾಯಿಸರಾಯರವರಿಗೆ ತಕರಾರು ಮಾಡಲು ಅನುವು ದೊರೆಯುವದು. ತಕರಾರು ಮಾಡದೆ ಜೇಲಿಗೆ ಹೋಗುವದರಲ್ಲಿಯೇ ಅಸಹಕಾರಿಗಳ ಸಾಮರ್ಥ್ಯವು ಇರುತ್ತದೆ. ಕಾರಾವಾಸವನ್ನು ಚೇಡಿಬಯಿಸಿ ಹಿಂದುಗಡೆ ಬಿದುದೊರತವೇಲೆ ವಿಷಾದಗೊಂಡು ಚಡಪಡಿಸಹತ್ತುವದು, ಅಸಹಕಾರಿಯ ವಿಷಯದಲ್ಲಿ ಸಂಪೂರ್ಣವಾದ ಅವಜಯವೇ ಸೈ.

ಲಾರ್ಡ ಸಾಹೇಬರವರು ಹಾಕಿದ ಬೆದರಿಕೆಯು ನಿಜವಾಗಿ ಅವರಿಗೆ ಶೋಭಿಸುವದು. ಈ ಯುದ್ಧದಿಂದ ಜಯಾಪಜಯದ ನಿರ್ಣಯವಾಗುವದು. ಇದು ಪಶುಬಲ ಮತ್ತು ಪ್ರಜಾಸುತ್ತಗಳ ನಡುವಿನ ಯುದ್ಧವು. ವ್ರಜಾಸುತ್ತದ ಶ್ರೇಷ್ಠತ್ವವನ್ನು ಸಿದ್ಧಪಡಿಸಲೋಸುಗ ಯುದ್ಧರಂಗದಲ್ಲಿ ಬಂದವರು ಎಂಥ ವಿಪತ್ತುಗಳು ಬಂದರೂ ಅವುಗಳಿಗೆಲ್ಲ ತಲೆಗೊಟ್ಟು ನಿಲ್ಲುವರಲ್ಲದೆ ತಮ್ಮ ಜೀವನಸರ್ವಸ್ವವಾದ ತತ್ವಗಳನ್ನು ಎಂದಿಗೂ ಬಿಡರು.

(ಯಂಗ ಇಂಡಿಯಾ) ಮೋ. ಕ. ಗಾಂಧಿ.

ವರುಷದ ವಾಯಿದೆಯು.

ವರುಷದೊಳಗಾಗಿ ಸ್ವರಾಜ್ಯವು ದೊರೆಯದಿದ್ದರೆ ನಾನು ಹಿಮಾಲಯಕ್ಕೆ ತೆರಳುವೆನೆಂಬ ಭೀತಿಯನ್ನು ಹಾಕಿದ್ದರಿಂದ, "ಸ್ವರಾಜ್ಯವು ದೊರೆಯದಿದ್ದರೂ, ನೀವು ಹಿಮಾಲಯಕ್ಕೆ ಹೋಗಕೂಡದು" ಎಂದು ಕೆಲವರು ನನಗೆ ವಿಜ್ಞಾಪಿಸುವರು. ಮತ್ತೆ ಕೆಲವರು "ಸ್ವರಾಜ್ಯವೆ ದೊರೆಯದಿದ್ದರೆ ನೀವು ಮುಂದಿಗೆ ಮೋರೆಯನ್ನು ತೋರಿಸುವದೆಂತು?" ಎಂದು ಸ್ಪಷ್ಟ ಮಾಡುವರು

ನವಜೀವನದ ವಾಚಕರಿಗೆ ಈ ಬಗೆಯ ವಿಚಾರಗಳು ಬರಬಾರದೆಂದು ನಾನು ಆಶಿಸುವೆನು. ಆದರೂ ಕೆಲವರಿಗೆ ಬಂದಿರುವದೆಂಬಿದನ್ನೂ ನಾನು ಬಲ್ಲೆನು. ನಾನು ವಾಯಿದೆಯನ್ನು ಪಡಿದ್ದೆನೆಂಬುದು ನಿಜವು, ಆದರೆ ಅದರೊಂದಿಗೆ ಕೆಲವು ಶರ್ತುಗಳನ್ನಾದರೂ ಇಟ್ಟಿದ್ದೆನು ಪೂರೈಸಲಿಕ್ಕೆ ಬರುವಂಥ ಶರ್ತುಗಳನ್ನಿಟ್ಟು, "ಈ ಶರ್ತುಗಳನ್ನು ಪಾಲಿಸಿರಿ ಮತ್ತು ಸ್ವರಾಜ್ಯವನ್ನು ಹೊಂದಿರಿ," ಎಂದು ಹೇಳಿದೆನು.

ಅದರೆ "ವ್ಯವಹಾರ ಕುಶಲನಾದ ಮನುಷ್ಯನು ಶರ್ತುಗಳನ್ನು ಹೇಳುವಾಗ್ಗೆ ಜನರ ಶಕ್ತಿಯನ್ನು ಪರೀಕ್ಷಿಸಿ ಹೇಳುವನು," ಎಂದು ಕೆಲವು ಮಿತ್ರರು ನನಗೆ ಸೂಚಿಸುವರು. ಅವರೀ ಮಾತು ನಿಜವು, ನಾನಾದರೂ ವ್ಯವಹಾರ ಕುಶಲನಿರುವೆನೆಂದು ನಂಬಿರುವೆನು ಹೀಗೆ ನಾನು ನಂಬದಿದ್ದರೆ ಲೋಕಕಾರ್ಯದಲ್ಲಿ ನಾನು ತೊಡಗಿರುತ್ತಿದ್ದಿಲ್ಲ. ಅದ್ದರಿಂದ ವರುಷದ ಕೊನೆಗೆ, "ಸ್ವರಾಜ್ಯವೆಲ್ಲದೆ?" ಎಂದು ಜನರು ಕೇಳಿದರೆ, ನನ್ನ ವ್ಯವಹಾರ ಕುಶಲತೆಯು ಎಲ್ಲಿ ಅಳಿಯಿತು? ನನ್ನ ವ್ಯವಹಾರ ಕುಶಲತೆಯು ಸಿದ್ಧವಾಗದ ಪಕ್ಷದಲ್ಲಿ ನಾನು ಹಿಮಾಲಯದ ಮಾರ್ಗವನ್ನ ಹಿಡಿಯುವದು ಲೇಸು.

ಆವರೆ ಜನರಿಗೆ ನಾನು ತೋರಿಸಿದ ಮಾರ್ಗವೇ ಸ್ವರಾಜ್ಯದ ಮಾರ್ಗವಿರುವದೆಂದೂ, ಆ ಮಾರ್ಗದ ಬಹುಭಾಗವನ್ನ ನಾವು ಆಕ್ರಮಿಸಿರುವೆವು–ಆಲ್ಲ–ತೀರ ಕೊನೆಗೆ ಬಂದಿರುವೆವೆಂದೂ ಅವರಿಗೆ ಅನಿಸಿದರೆ, ಯಾರೂ ಸನಗೆ ಕೊಂಕು ಮಾತುಗಳನ್ನಾಡರು. ಹಾಗು ನಾನು ಹಿಮಾಲಯಕ್ಕೆ ಹೋಗಲು ಕಾರಣವಿಲ್ಲೆಂದು ನಾನು ತಿಳಿಯುತ್ತೇನೆ. ನಮಗೆ ಸ್ವರಾಜ್ಯವೂ ದೊರೆತಂತೇ ಇದೆ. ಮೋಕ್ಷವ ಮಾರ್ಗವನ್ನು ಕಂಡುಹಿಡಿದು, ಭಯ-ನಿಯಮಾದಿಗಳನ್ನು ಪಾಲಿಸಿ, ಒಂದರ ಹಿಂದೊಂದು ಐಹಿಕ ಬಂಧನಗಳನ್ನು ಹರಿದು ಹಾಕಿದವರು ಸಾಕ್ಷಾತ್ ಮೋಕ್ಷವನ್ನು ಹೊಂದದಿದ್ದರೂ, ಮೋಕ್ಷವು ಅವರಿಗೆ ದೊರೆತಂತೆಯೇ ಇರುತ್ತದೆ ಅವರು ತಮ್ಮ ಮಾರ್ಗದಿಂದ ಅತ್ತಿತ್ತ ಕದಲುವದಿಲ್ಲ. ಅವರು ದಿನದಿನಕ್ಕೆ ಹೆಚ್ಚು ಆಶಕ್ತಿಮಂತರಾಗುತ್ತ ಹೋಗುತ್ತಾರೆ. ಅವರಿಗೆ ಮಾರ್ಗದರ್ಶಕರ ಅವಶ್ಯಕತೆಯಿರುವದಿಲ್ಲ; ಸಂಶಯಾತ್ಮಕ ನಾಸ್ತಿ ದೇರೆ! ಯಾರಿಗೆ ಸಂಶಯ ವಿರುತ್ತದೆಯೊ ಅವರೆಲ್ಲಿಯೂ ಇರುವದಿಲ್ಲ. ಅವರ ನಾಶವು ಕಟ್ಟಿಟ್ಟದ್ದು! ಅವರು ಹಾದಿಯನ್ನು ನಡಿಯುತ್ತಿದ್ದಾಗ್ಯೂ ನಡಿಯುವದಿಲ್ಲ, ಯಾಕಂದರೆ ತಾವೆಲ್ಲಿರುವರೆಂಬುದು ಅವರಿಗೆ ಗೊತ್ತಿರುವದಿಲ್ಲ.

ಅಸುದಾಬಾದಿನಲ್ಲಿ ಮಹಾಸಭೆಗೆ ಕೂಡಿದ ಪ್ರತಿನಿಧಿಗಳೆಲ್ಲರೂ "ಸ್ವರಾಜ್ಯವನ್ನು ಪೊರೆಯದಿದ್ದರೂ

ಮಾರ್ಗವು ಇದೇ, ಸ್ವರಾಜ್ಯವು ನಮ್ಮ ದೃಷ್ಟಿಗೋಚರವಾಗಿದೆ, ಈ ವರುಷದಲ್ಲಿ ಅದಷ್ಟು ಹಿಂದೆ ಯಾವ ವರುಷದಲ್ಲಿ ಆಗಿಲ್ಲ, ಮತ್ತು ನಮಗಂತೂ ಇದೇ ಮಾರ್ಗದಿಂದ ಹೋಗ ತಕ್ಕದ್ದು''—ಎಂದುವಾದವಿವಾದವಿಲ್ಲದೆ ಒಪ್ಪಿಕೊಂಡಿ, ಸ್ವರಾಜ್ಯವು ನಮಗೆ ದೊರೆತಂತೆಯೇ ಇದೆಯೆಂದು ನಾನು ಹೇಳಿದರಲಾರೆನು. ನಮಗೀಗ ಕರಿಣವೆಂದು ತೋರುತ್ತಿರುವದೂ ಸಾಕಷ್ಟು ಶ್ರಮ ಪಡಿಸಿದ್ದರಿಂದ ಹಾಗೆ ತೋರುತ್ತದೆ ಕೊಂಚ ಹೆಚ್ಚಿಗೆ ಶ್ರಮ ಪಡಿದರೆ ಎಲ್ಲವೂ ನಮ್ಮ ಕೈವಶವಾಗುವದು.

"ಗಾಂಧಿಯವರು ಏನಾದರೂ ಮಾಡಿ ಈ ವರುಷ ಮುಗಿಯುವದರೊಳಗಾಗಿ ಸ್ವರಾಜ್ಯವನ್ನು ಸಂಪಾದಿಸದೆ ಬಿಡರು" ಎಂದು ತಿಳಿದ ವರು ಮತ್ತು ನಿರಾಸೆಯಾದವರಲ್ಲಿ ಈ ಬಗೆಯು ತಿಳುವಳಿಕೆಯನ್ನು ಹುಟ್ಟಿಸಿದವರು ಇಬ್ಬರೂ ತಿಳಿಯದಿರಲಿ ತಮ್ಮ ಮತ್ತು ತಮ್ಮ ದೇಶದ ಕರ್ತವ್ಯಗಳಿರುವವು! ಅವರಿಗೆ ಸ್ವರಾಜ್ಯದ ಅರ್ಥವೇ ತಿಳಿದಿಲ್ಲ! ಸ್ವರಾಜ್ಯವೆಂದರೆ ಸ್ವಾವಲಂಬನವು. ನನ್ನ ಕೈಯಿಂದ ಸ್ವರಾಜ್ಯವನ್ನು ಪಡೆಯುವದು ಕೇವಲ ಪರಾವಲಂಬನವೇ ಸೈ ನಾನು ಸ್ವರಾಜ್ಯವನ್ನು ತೆಗೆದುಕೊಳ್ಳುವ ಮಾರ್ಗವನ್ನು ತೋರಿಸಿರುವೆನಷ್ಟೇ ಅದನ್ನು ತೆಗೆದುಕೊಳ್ಳುವದು ಜನರ ಕೈಯಲ್ಲಿರುವದು. ನಾನು ವೈದ್ಯನು; ಔಷಧವನ್ನು ಸೂಚಿಸಿದೆನು; ಅದನ್ನು ಸೇವಿಸುವ ಪದ್ಧತಿಯನ್ನೂ, ಅನುಪಾನವನ್ನೂ ಮು. ಹೇಳಿದೆನು. ಆದರೆ ಅದನ್ನು ಸೇವಿಸಿ ನೆಟ್ಟಗೆಮಾಡಿಕೊಳ್ಳುವದು ಕೇವಲ ರೋಗಿಯ ಕೈಯೊಳಗಿನ ಮಾತು.

ಸ್ವರಾಜ್ಯವು ಶಾಂತಿಯಿಂದ, ಹಿಂದು, ಮುಸಲ್ಮಾನ, ಶೀಖ, ಪಾರಸೀ, ಕ್ರೈಸ್ತ, ಅಸ್ಪೃಶ್ಯರೀ ಎಲ್ಲರ ಐಕ್ಯದಿಂದ, ಮತ್ತು ಅಸ್ಪೃಶ್ಯತೆಯ ನಾಶದಿಂದ ದೊರೆಯುವದಿಂದು ಒಂದು ವರುಷದ ಪ್ರತ್ಯಕ್ಷ ಅನುಭವದಿಂದ ಜನರು ಮನಗಾಣಬಿದ್ದರೆ, ನನ್ನಲ್ಲಿ ವ್ಯವಹಾರಕುಶಲತೆಯು ಇಲ್ಲವೆಂದು ಸಿದ್ಧವಾಗಿ ನಾನು ಹಿಮಾಲಯದ ಹಾದಿಯನ್ನು ಹಿಡಿಯಬೇಕಾಗುವದು.

ನನ್ನ ಉಮೇದು ಇದಕ್ಕೂ ಹೆಚ್ಚಿಗಿತ್ತೆಂಬುದು ಸತ್ಯವು. ನಾವು ಈ ವರುಷ ಸ್ವರಾಜ್ಯದ ಮಾರ್ಗವನ್ನು ಕಂಡು ಹಿಡಿಯುವದಲ್ಲದೆ ಸ್ವರಾಜ್ಯದ ಪ್ರತಿಷ್ಠೆಯ ಎದುರಿಗೆ ನಾವು ಬಂದು ನಿಲ್ಲುವೆವೆಂದೂ, ರಾಜ್ಯಕರ್ತರು ನಮ್ಮೊಡನೆ ಒಪ್ಪಂದು ಮಾಡಿಕೊಳ್ಳುವರೆಂದೂ, ಅಸಹಕಾರವು ನಿಂತು ಶುದ್ಧ ಸಹಕಾರವು ಪ್ರಾರಂಭವಹೆಂದೂ ನಾನು ಬಯಿಸಿದ್ದೆನು. ಆದರೆ ಕಳೆದ ದಿವಸಗಳಲ್ಲಿ ಈ ಸ್ಥಿತಿಯನ್ನು ಅನುಭವಿಸುವ ಸುಪ್ರಸಂಗವು ಬಂದೀತೆಂದು ನನಗೆ ತೋರಿದಲ್ಲಿ ಇದಕ್ಕೆ ವಿಪರೀತವಾಗಿ, ಅಸಹಕಾರದ ವೇಗವು ಹೆಚ್ಚು ತೀವ್ರವಾಗುವದೆಂದೂ ಸಹಕಾರವನ್ನು ಮಾಡುವ ಸಂಭವವೇ ಉಳಿದಿಲ್ಲವೆಂದೂ ನನಗೆ ತೋರುತ್ತದೆ. ಅದಾಗ್ಯೂ ಇದೇ ಅನುಭವವೇ ಸಹಕಾರವನ್ನು ಹತ್ತರ ತರುವದು. ಪ್ರಭಾತದಲ್ಲಿ ಮುಂಚಿನ ಅಂಧಕಾರವು ಅತ್ಯಂತ. ಘೋರವಾಗುತ್ತದೆ. ಪ್ರಸಂಗಘ ಮುಂಚಿನ ವೇದನೆಯು ಅತ್ಯಂತ ಆಸಹ್ಯವಾಗಿ ಒಮ್ಮೆಮ್ಮೆ ತಾಳುಯ ಮನಸ್ಸಿನಲ್ಲಿ ಪ್ರಸೂತಿಯಾಗುವದೊ ಇಲ್ಲೊ ಎಂದು ಸಂಶಯವು ಹುಟ್ಟುತ್ತದೆ. ಅದೇ ಪ್ರಕಾರ ನಮ್ಮ ಪ್ರಸೂತಿಕಾಲವಾದರೂ ಬಹು ಕರಿಣವಾಗವದು

ಮುಂಬಯಿಯು ಅದಕಲ್ಲಿ ವಿಘ್ನ ತಂದಿತು. ಯಾವ ಜೋರಿನಿಂದ ಮುಂಬೆ ಸಾಗಬೇಕೆಂದು ಮಾತಾಡಿದ್ದೆವೊ, ಮತ್ತು ಯಾವ ದುಃಖಕ್ಕೆ ನಾವಾಗಿಯೇ ಒಳಗಾಗಬೇಕೆಂದು ಮಾಡಿದ್ದೆವೊ, ಅದೆಲ್ಲವನ್ನು ಮುಂಬಯಿಯು ನಿಲ್ಲಿಸಿತು ಆದರೆ ಸುದೈವದಿಂದ ಸರಕಾರವು ತಾನಾಗಿಯೇ ನಮ್ಮಿಂದ ಜೋರು ಮಾಡಿಸುವ ಹಾಗು ದುಃಖ ಭೋಗಿಸುವ ಸುಪ್ರಸಂಗವನ್ನು ನಮಗೆ ತಂದುಕೊಡುತ್ತಲಿದೆ. ಸರಕಾರವು ತಾನಾಗಿಯೇ ತೆರದಿಟ್ಟ ಮಹಾದ್ವಾರದಿಂದ ನಾವು ಧೈರ್ಯಮಾಡಿ ಒಳ ಹೊಕ್ಕರೆ ಸ್ವರಾಜ್ಯ ಪ್ರತಿಮೆಯು ದೃಗ್ಗೋಚರವಾಗಲು ತಡವಾಗದು.

